ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 19 ಮಂಗಳವಾರ 2023

ಸಂಪುಟ: 44 | ಸಂಚಿಕೆ: 242 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಕೊರೊನಾ ರೂಪಾಂತರಿ ಮಹಾಮಾರಿ ಭೀತಿ

60 ವರ್ಷ ಮೇಲ್ಪಟ್ಟವರು, ಅನಾರೋಗ್ಯಪೀಡಿತರಿಗೆ

ಮಾಸ್ಕ್ ಕಡ್ಡಾಯ

● ಇಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ● ರಾಜ್ಯಾದ್ಯಂತ ಕೋವಿಡ್ ಪರೀಕ್ಷೆಗೆ ಮತ್ತೆ ಚಾಲನೆ ● ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ನಿಗಾ ಘಟಕ ಮೀಸಲು




ಬೆಂಗಳೂರು, ಡಿ.18(ಕೆಎಂಶಿ)– ಕೊರೊನಾ ರೂಪಾಂತರಿ ತಳಿ ಜೆಎನ್.1 ರಾಜ್ಯದಲ್ಲಿ ಕಂಡುಬಂದಿರುವ ಹಿನ್ನೆಲೆಯಲ್ಲಿ 60 ವರ್ಷ ಮೇಲ್ಪಟ್ಟವರು, ಉಸಿರಾಟದ ತೊಂದರೆ, ತೀವ್ರ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಮಾಸ್ಕ್ ಕಡ್ಡಾಯ.

ರಾಷ್ಟ್ರದ ವಿವಿಧ ಭಾಗಗಳಲ್ಲಿ ರೂಪಾಂತರಿ ತಳಿ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುನ್ನೆಚ್ಚರಿಕಾ ಕ್ರಮಕ್ಕೆ ಮುಂದಾಗಿದೆ. ಡಾ.ರವಿ ನೇತೃತ್ವದ ಸಲಹಾ ಸಮಿತಿ ಕಳೆದ ಎರಡು ದಿನಗಳಿಂದ ಸಭೆ ನಡೆಸಿ ಸರ್ಕಾರಕ್ಕೆ ಹಲವು ಸಲಹೆ, ಸೂಚನೆಗಳನ್ನು ನೀಡಿದೆ. ● 9ನೇ ಪುಟಕ್ಕೆ

ಕೇರಳ ಗಡಿಯಲ್ಲಿ ತೀವ್ರ ನಿಗಾ





ಮಡಿಕೇರಿ, ಡಿ.18–ಕೇರಳದಲ್ಲಿ ಕೊರೊನಾ ರೂಪಾಂತರಿ ಜೆಎನ್–1 ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೇರಳದೊಂದಿಗೆ ಗಡಿ ಹಂಚಿಕೊಂಡಿರುವ ಜಿಲ್ಲೆಗಳಲ್ಲಿ ತೀವ್ರ ನಿಗಾ ವಹಿಸುವಂತೆ ಆಯಾ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮಂಗಳವಾರ ಕೊರೊನಾ ಮುನ್ನೆಚ್ಚರಿಕಾ ಕ್ರಮಗಳ ಕುರಿತು ತಾಂತ್ರಿಕ ಸಲಹಾ ಸಮಿತಿ ಸಭೆ ಕರೆಯಲಾಗಿದೆ. ಈಗಾಗಲೇ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಯಾರೂ ಆತಂಕ ಪಡುವ ಅಗತ್ಯವಿಲ್ಲ. ಕೊರೊನಾ ಸೋಂಕು ಹಿಂದಿನಂತೆಯೇ ಪುನರಾವರ್ತನೆ ಆಗುತ್ತದೆ ಎಂಬ ಭೀತಿ ಬೇಡ. ಆದರೆ, ಮುನ್ನೆಚ್ಚರಿಕೆ ವಹಿಸುವುದು ಅಗತ್ಯ ಎಂದು ತಿಳಿಸಿದರು. ಗಡಿಭಾಗಗಳಲ್ಲಿ ಹೆಚ್ಚಿನ ನಿಗಾ ವಹಿಸಲು ಹಾಗೂ ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸಲು ಸೂಚಿಸಲಾಗಿದೆ. ಕರ್ನಾಟಕದಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದರೆ, ಸದ್ಯಕ್ಕೆ ತೀವ್ರ ನಿರ್ಬಂಧ ಹೇರುವ ಪರಿಸ್ಥಿತಿ ರಾಜ್ಯದಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ನೆಗಡಿ, ಜ್ವರ, ಕೆಮ್ಮು, ಕಫ ಇರುವವರು ಕೊರೊನಾ ಟೆಸ್ಟ್ ಮಾಡಿಸಿಕೊಳ್ಳಬೇಕು. ಈಗಾಗಲೇ ಆರ್‌ಟಿಪಿಸಿಆರ್ ಕಿಟ್‌ಗಳನ್ನು ಹೆಚ್ಚು ಖರೀದಿ ಮಾಡಲು ಆದೇಶಿಸಲಾಗಿದೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಆರ್‌ಟಿಪಿಸಿಆರ್ ಹಾಗೂ ಆರ್‌ಎಟಿ ಟೆಸ್ಟ್ ಮಾಡಲು ಸೂಚಿಸಲಾಗಿದೆ. ಐಸಿಯು ಬೆಡ್, ಆಕ್ಸಿಜನ್, ಪಿಪಿಇ ಕಿಟ್ ಸೇರಿದಂತೆ ಅವಶ್ಯಕ ವಸ್ತುಗಳನ್ನು ದಾಸ್ತಾನು ಮಾಡಿಟ್ಟುಕೊಳ್ಳುವಂತೆ ಆದೇಶಿಸಲಾಗಿದೆ. ಹೆಚ್ಚು ಪಾಸಿಟಿವ್ ಪ್ರಕರಣಗಳ ಪತ್ತೆಯಾದ ಬಳಿಕವೇ ಮುಂದಿನ ಕ್ರಮಗಳ ಬಗ್ಗೆ ಯೋಚಿಸಲಾಗುವುದು. ಸದ್ಯಕ್ಕೆ ಅಂತಹ ಪರಿಸ್ಥಿತಿ ಇಲ್ಲ, ಯಾರೂ ಆತಂಕಪಡುವ ಅಗತ್ಯ ವಿಲ್ಲ ಎಂದು ಹೇಳಿದರು. ಈ ಸಂದರ್ಭ ಶಾಸಕ ಡಾ.ಮಂಥರ್ ಗೌಡ ಹಾಗೂ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಲೋಕಸಭೆಗೆ ನುಗ್ಗಿ ಕಲರ್ ಸ್ಮೋಕ್ ಸಿಡಿಸಿದ ಪ್ರಕರಣ

ದೆಹಲಿ ಪೊಲೀಸರಿಂದ ಮನೋರಂಜನ್ ಕುಟುಂಬ ಸುದೀರ್ಘ ವಿಚಾರಣೆ

● ತನಿಖಾಧಿಕಾರಿಗಳಿಂದ ಮನೆ ತೀವ್ರ ಶೋಧ ● ಮನೋರಂಜನ್ ತಂದೆ–ತಾಯಿಗೆ ಪ್ರಶ್ನೆಗಳ ಸುರಿಮಳೆ ● ಭಾಷಾಂತರಕಾರರ ಮೂಲಕ ಮಾಹಿತಿ ಸಂಗ್ರಹ ● ಸಂಬಂಧಿಕರಿಗೂ ವಿಚಾರಣೆ ವೇಳೆ ಪ್ರವೇಶ ನಿರ್ಬಂಧ



ವಿಚಾರಣೆ ಪೂರ್ಣಗೊಳಿಸಿ ಹೊರ ಬರುತ್ತಿರುವ ತನಿಖಾಧಿಕಾರಿಗಳು.



ಮನೋರಂಜನ್ ತಂದೆ ದೇವರಾಜೇಗೌಡ.



ಮನೋರಂಜನ್ ನಿವಾಸದತ್ತ ಧಾವಿಸುತ್ತಿರುವ ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್

ಮೈಸೂರು, ಡಿ.18(ಬಿಎಲ್‌ಎಚ್/ಪಿಎಂ)– ಸಂಸತ್‌ನಲ್ಲಿ ಕಲಾಪದ ವೇಳೆಯೇ ಕಲರ್ ಗ್ಯಾಸ್ ಸಿಡಿಸಿದ ಪ್ರಕರಣದ ಆರೋಪಿ ಮೈಸೂರಿನ ಮನೋರಂಜನ್ ಕುಟುಂಬವನ್ನು ದೆಹಲಿ ಪೊಲೀಸರು ಸೋಮವಾರ ಸತತ ಏಂಟೂವರೆ ತಾಸು ವಿಚಾರಣೆ ನಡೆಸಿದರು. ಇಡೀ ದಿನ ಮನೋರಂಜನ್ ತಂದೆ–ತಾಯಿಯನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡಿದ ತನಿಖಾಧಿಕಾರಿಗಳು, ಪ್ರಕರಣ ಸಂಬಂಧ ಹಲವು ಮಾಹಿತಿ ಕಲೆ ಹಾಕಿದರು.

ಇಂದು ಬೆಳಗ್ಗೆ ಸುಮಾರು 11 ಗಂಟೆಗೆ ಮೈಸೂರಿನ ವಿಜಯನಗರದ 2ನೇ ಹಂತದ 15ನೇ ಮೇನ್‌ನ 3ನೇ ಕ್ರಾಸಿನಲ್ಲಿರುವ ಮನೋರಂಜನ್ ಮನೆಗೆ ದೆಹಲಿ ಪೊಲೀಸರು ಭೇಟಿ ನೀಡಿದರು. ಸಂಜೆ ಸುಮಾರು 6.30ರವರೆಗೆ ವಿಚಾರಣೆ ನಡೆಸಿದರು. ತನಿಖೆಯ ಪ್ರಕ್ರಿಯೆಯಾಗಿರುವ ಕಾರಣ ಕುಟುಂಬ ಸದಸ್ಯರ ಹೊರತಾಗಿ ಅನ್ಯರಿಗೆ ಪ್ರವೇಶ ನಿರ್ಬಂಧಿಸಿ, ಸುದೀರ್ಘ ವಿಚಾರಣೆ ನಡೆಸಲಾಯಿತು. ● 7ನೇ ಪುಟಕ್ಕೆ

ಕೆಲ ದಾಖಲೆ, ಪುಸ್ತಕ ವಶಕ್ಕೆ

ವಿಚಾರಣೆ ವೇಳೆ ಕೆಲ ಪ್ರಮುಖ ದಾಖಲೆ ಮತ್ತು ಮನೋರಂಜನ್ ಸಂಗ್ರಹಿಸಿದ್ದ ಪುಸ್ತಕಗಳ ಬಗ್ಗೆ ಕುಟುಂಬಸ್ಥರಿಂದ ಮಾಹಿತಿ ಕಲೆ ಹಾಕಿದರಲ್ಲದೆ, ಈ ಪೈಕಿ ಮಹತ್ವದ ಸಾಕ್ಷ್ಯ ಎಂದು ಪರಿಗಣಿಸಿದ್ದನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದರು ಎಂದು ಮೂಲಗಳು ತಿಳಿಸಿವೆ. ಮನೋರಂಜನ್ ಕುಟುಂಬವನ್ನು ವಿಚಾರಣೆಗೆ ಒಳಪಡಿಸಿದಾಗ, ಮನೋರಂಜನ್ ವಿಚಾರಣೆ ವೇಳೆ ನೀಡಿದ್ದ ಹೇಳಿಕೆಗಳೊಂದಿಗೆ ಕುಟುಂಬಸ್ಥರ ಹೇಳಿಕೆಗಳನ್ನು ತಾಳೆ ಮಾಡಿ ನೋಡಲಾಗಿದೆ ಎನ್ನಲಾಗಿದ್ದು, ಇದರಲ್ಲಿ ಬಹುತೇಕ ಅಂಶಗಳು ಹೊಂದಾಣಿಕೆಯಾಗಿಲ್ಲ ಎಂದು ತಿಳಿದು ಬಂದಿದೆ.

ಇಂದು ಪ್ರಧಾನಿ ಜೊತೆ ಬರಗಾಲದ ಬಗ್ಗೆ ಸಿಎಂ ಚರ್ಚೆ



(ಸಂಗ್ರಹ ಚಿತ್ರ)

ಬೆಂಗಳೂರು: ನಾಳೆ (ಮಂಗಳವಾರ) ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ಮೋದಿ ಅವರ ಭೇಟಿಗೆ ಸಮಯ ನಿಗದಿಯಾಗಿದೆ. ಬರಗಾಲದ ಬಗ್ಗೆ ಪ್ರಧಾನಿಗಳ ಜೊತೆ ಚರ್ಚೆ ಮಾಡುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ದೆಹಲಿಗೆ ತೆರಳುವ ಮುನ್ನ ಮಾತನಾಡಿದ ಅವರು, ಬರಗಾಲದ ಬಗ್ಗೆ ಪ್ರಧಾನಿ ಜೊತೆ ಚರ್ಚೆ ಮಾಡಲು ಸಮಯ ಕೇಳಿದ್ದೆ. ಇದೇ ವೇಳೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗ್ ಇದೆ, ಅದನ್ನು ಅಟೆಂಡ್ ಮಾಡುತ್ತೇನೆ. ಜೊತೆಗೆ ಲೋಕಸಭಾ ಚುನಾವಣೆ ಬಗ್ಗೆಯೂ ಚರ್ಚೆ ಮಾಡುತ್ತೇನೆ. ಹಾಗೆಯೇ ಹೈಕಮಾಂಡ್ ಜೊತೆ ನಿಗಮ ಮಂಡಳಿ ನೇಮಕಾತಿ ಕುರಿತು ಸಮಾಲೋಚಿಸುತ್ತೇವೆ. ಈಗಾಗಲೇ ಲಿಸ್ಟ್ ಕಳಿಸಲಾಗಿದೆ ಎಂದರು. ನೆರೆ ರಾಜ್ಯಗಳಲ್ಲಿ ಕೋವಿಡ್ ಹೆಚ್ಚಳ ಸಂಬಂಧ ಪ್ರತಿಕ್ರಿಯಿಸಿ, ಆರೋಗ್ಯ ಸಚಿವರಿಗೆ ಸಭೆ ಮಾಡಲು ಹೇಳಿದ್ದೇನೆ. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ್ದೇನೆ ಎಂದು ಹೇಳಿದರು.

ಭ್ರೂಣ ಹತ್ಯೆ ಸುಳಿವು ಕೊಟ್ಟರೆ ಲಕ್ಷ ನಗದು ಬಹುಮಾನ

ಆರೋಗ್ಯ ಇಲಾಖೆ ಘೋಷಣೆ

ಬೆಂಗಳೂರು: ರಾಜ್ಯದಲ್ಲಿ ಭ್ರೂಣ ಹತ್ಯೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಮುಂದಾಗಿರುವ ಆರೋಗ್ಯ ಇಲಾಖೆ, ಭ್ರೂಣ ಹತ್ಯೆ ಸುಳಿವು ನೀಡಿದವರಿಗೆ ರೂ. 1 ಲಕ್ಷ ನಗದು ಬಹುಮಾನ ನೀಡುವುದಾಗಿ ಘೋಷಿಸಿದೆ. ಇದಲ್ಲದೇ ಸುಳಿವು ನೀಡುವವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದೆ.

ರಾಜ್ಯದ ಯಾವುದೇ ಭಾಗದ ಆಸ್ಪತ್ರೆಯಲ್ಲಿ ಭ್ರೂಣ ಲಿಂಗ ಪತ್ತೆ ನಡೆಯುತ್ತಿರುವ ಬಗ್ಗೆ ಸಾರ್ವಜನಿಕರು ಸ್ಪಷ್ಟವಾಗಿ ಆರೋಗ್ಯ ಇಲಾಖೆಗೆ ಮಾಹಿತಿ ನೀಡಿದವರಿಗೆ ಒಂದು ● 6ನೇ ಪುಟಕ್ಕೆ

ಲೋಕಸಭಾ ಚುನಾವಣೆಗೆ ರಾಜ್ಯದ 15 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಸಂಬಂಧ ಕಾಂಗ್ರೆಸ್ ಕಸರತ್ತು

ರಾಜ್ಯ ನಾಯಕರೊಂದಿಗೆ ವರಿಷ್ಠರ ಸಮಾಲೋಚನೆ; 265 ಕ್ಷೇತ್ರಗಳ ಮೊದಲ ಪಟ್ಟಿಯಲ್ಲಿ ರಾಜ್ಯದ 15 ಸೇರ್ಪಡೆ

ಬೆಂಗಳೂರು, ಡಿ.18(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಗೆ ರಾಜ್ಯದ 15 ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸಂಪುಟದ ಸದಸ್ಯರು ದೆಹಲಿಯಲ್ಲಿ ಕಸರತ್ತು ಆರಂಭಿಸಿದ್ದಾರೆ.

2024ರ ಜನವರಿ ಆರಂಭದಲ್ಲೇ ಕಾಂಗ್ರೆಸ್ 265 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಲು ತೀರ್ಮಾನಿಸಲಾಗಿದೆ. ಕರ್ನಾಟಕದ 28 ಲೋಕಸಭಾ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಿಗೆ ಅಭ್ಯರ್ಥಿ ಅಂತಿಮಗೊಳಿಸಿ ಮೊದಲ ಹಂತದಲ್ಲೇ ಹೆಸರು ಪ್ರಕಟಿಸಲಿದ್ದಾರೆ.

ಚುನಾವಣಾ ಪೂರ್ವ ಸಮೀಕ್ಷೆ ವರದಿ ಆಧಾರದ ಮೇಲೆ ಈ 15 ಕ್ಷೇತ್ರಗಳಿಗೆ ಹೆಸರನ್ನು ಅಂತಿಮಗೊಳಿಸಲು ವರಿಷ್ಠರು ರಾಜ್ಯ ನಾಯಕರಿಗೆ ಬುಲಾವ್ ಮಾಡಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ● 9ನೇ ಪುಟಕ್ಕೆ

ಬೆಂಬಲ ಬೆಲೆಯಡಿ ಭತ್ತ, ರಾಗಿ ಖರೀದಿ ಪ್ರಕ್ರಿಯೆ ಆರಂಭ

ಸಾಫ್ಟ್‌ವೇರ್ ಸಮಸ್ಯೆಯಿಂದ 17 ದಿನ ವಿಳಂಬ





ಮೈಸೂರು, ಡಿ.18(ಎಸ್‌ಬಿಡಿ)– ಸಾಫ್ಟ್‌ವೇರ್ ಸಮಸ್ಯೆಯಿಂದ ವಿಳಂಬವಾಗಿದ್ದ ಭತ್ತ ಹಾಗೂ ರಾಗಿ ಖರೀದಿಗೆ ನೋಂದಣಿ, ಸೋಮವಾರದಿಂದ ಆರಂಭಗೊಂಡಿದೆ.

ಕನಿಷ್ಠಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿ ಪ್ರಕ್ರಿಯೆಯನ್ನು ಡಿ.1ರಿಂದಲೇ ಆರಂಭಿಸಲು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರ ಅಧ್ಯಕ್ಷತೆಯ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆದರೆ ಸಾಫ್ಟ್‌ವೇರ್ ಸಮಸ್ಯೆಯಿಂದ ನೋಂದಣಿ 17 ದಿನ ತಡವಾಯಿತು. ಸದ್ಯ ಸೋಮವಾರ ಬೆಳಗ್ಗೆಯಿಂದ ಸಾಫ್ಟ್‌ವೇರ್‌ನಲ್ಲಿ ಲಾಗಿನ್ ಆರಂಭವಾಗಿದ್ದು, ಹಲವು ರೈತರು ನೋಂದಣಿ ಮಾಡಿಸಿದ್ದಾರೆ. ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಎಂಎಸ್‌ಪಿ ಜಿಲ್ಲಾ ನೋಡಲ್ ಅಧಿಕಾರಿ ವಾಣಿಶ್ರೀ, ಸಾಫ್ಟ್‌ವೇರ್ ಇಲ್ಲದ ಕಾರಣ ನೋಂದಣಿ ವಿಳಂಬವಾಯಿತು. ಸೋಮವಾರ ಬೆಳಗ್ಗೆ ಲಾಗಿನ್ ಲಭ್ಯವಾದ ಕೂಡಲೇ ಜಿಲ್ಲೆಯ 16 ಕೇಂದ್ರಗಳಲ್ಲಿ ರೈತರ ನೋಂದಣಿ ಕಾರ್ಯ ಆರಂಭಿಸಲಾಗಿದೆ. ಅನೇಕ ರೈತರು ನೋಂದಣಿ ಮಾಡಿಸಿದ್ದಾರೆ. ಈ ಬಗ್ಗೆ ಎಲ್ಲರಿಗೂ ಮಾಹಿತಿ ತಲುಪಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಕರಪತ್ರಗಳನ್ನು ಮುದ್ರಿಸಿ ರೈತ ಸಂಪರ್ಕ ಕೇಂದ್ರಗಳಿಗೆ ನೀಡಲಾಗಿದೆ. ● 9ನೇ ಪುಟಕ್ಕೆ

ಧಾನ್ಯ ಖರೀದಿ ಯಾವಾಗ?

ಈಗಾಗಲೇ ಭತ್ತ ಕಟಾವು ಹಂತದಲ್ಲಿದೆ. ಕೆಲವೆಡೆ ಕಟಾವು ಆರಂಭವಾಗಿದೆ. ಹಾಗಾಗಿ ಎಂಎಸ್‌ಪಿ ಯೋಜನೆಯಡಿ ನೋಂದಣಿ ಆರಂಭವಾಗಿರುವ ದಿನದಿಂದಲೇ ಭತ್ತ ಖರೀದಿ ಪ್ರಕ್ರಿಯೆಯೂ ನಡೆಯುತ್ತದೆ. ರಾಗಿ ಖರೀದಿ ಮುಂದಿನ ಜನವರಿ 1ರಿಂದ ಆರಂಭಗೊಳ್ಳಲಿದೆ. ಈ ಎರಡೂ ಧಾನ್ಯ ಖರೀದಿಗೆ ಮಾ.31 ಅಂತಿಮ ದಿನಾಂಕ ನಿಗದಿಪಡಿಸಲಾಗಿದೆ ಆದರೆ ನೋಂದಣಿ ಕಾರ್ಯ ವಿಳಂಬವಾಗಿರುವುದರಿಂದ ಖರೀದಿ ಅವಧಿಯನ್ನೂ ವಿಸ್ತರಿಸಬೇಕೆಂಬ ಒತ್ತಾಯ ಕೇಳಿಬಂದಿದೆ.

ಹೊಸ ವರ್ಷ ಸ್ವಾಗತದ ಸಂಭ್ರಮಾಚರಣೆ, ಡಿ.22ರಿಂದ 31ರವರೆಗೆ

ಅರಮನೆ ಅಂಗಳದಲ್ಲಿ ಫಲಪುಷ್ಪ ಪ್ರದರ್ಶನ

● ಕಣ್ಮನ ಸೆಳೆಯಲಿವೆ 35 ವಿಧದ 4 ಲಕ್ಷ ಹೂವಿನ ಪುಷ್ಪ ಕಾಶಿ ● ಹೂವಿನಲ್ಲೇ ಮೈದಳೆಯಲಿವೆ ಸೋಮನಾಥಪುರ ಚನ್ನಕೇಶವ ದೇವಾಲಯ, ಕರ್ನಾಟಕ ನಕ್ಷೆ, ಹಂಪಿ ಕಲ್ಲಿನ ರಥ, ಶಿವಲಿಂಗ, ಮಲೆ ಮಹದೇಶ್ವರರ ಮೂರ್ತಿ, ಮಹಾರಾಣಿ ಕೆಂಪುಚೆಲುವನಂಜಮ್ಮಣಿ ಪ್ರತಿಮೆ, ಉಳುವ ಯೋಗಿ ಇನ್ನಿತರ ಆಕೃತಿಗಳು ● ಛಾಯಾಚಿತ್ರ, ವಿಡಿಯೋ ಪ್ರದರ್ಶನ, ಗೊಂಬೆಗಳ ಪ್ರದರ್ಶನ; ರಾಜರ ಆಳ್ವಿಕೆಯ ಅವಧಿಯ ಕಲಾಸಿರಿ ಮೇಳೈಸಲಿದೆ



ಫಲಪುಷ್ಪ ಪ್ರದರ್ಶನದ ಮೊದಲ ದಿನದ ರಾಜ ಲಾಂಛನ ಬಿರುದು ಬಾವಲಿಗಳೊಂದಿಗೆ ಚಾಮುಂಡೇಶ್ವರಿ ಅಮ್ಮನವರ ಮೆರವಣಿಗೆಯ ಚಿತ್ತಾಕರ್ಷಕ ರಾಜಪೋಷಾಕಿನ ತಾಲೀಮು ಸೋಮವಾರ ನಡೆಯಿತು.



ಬಹುನಿರೀಕ್ಷಿತ ಫಲಪುಷ್ಪ ಪ್ರದರ್ಶನದ ಸಿದ್ಧತೆಗಳನ್ನು ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೋಮವಾರ ಸಂಜೆ ಪರಿಶೀಲನೆ ನಡೆಸಿದರು.

ಡಿ.22ರಿಂದ 25ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ

ಫಲಪುಷ್ಪ ಪ್ರದರ್ಶನದ ಅಂಗವಾಗಿ ಡಿ.22ರಿಂದ 25ರವರೆಗೆ ಪ್ರತಿದಿನ ಸಂಜೆ 5.45ರಿಂದ ರಾತ್ರಿ 9.30ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಮೊದಲ ದಿನ ಸಂಜೆ 5.15ಕ್ಕೆ ನಾಡದೇವಿ ಶ್ರೀ ಚಾಮುಂಡೇಶ್ವರಿ ಅಮ್ಮನವರನ್ನು ರಾಜ ಲಾಂಛನ, ಬಿರುದು–ಬಾವಲಿಯೊಂದಿಗೆ ಅರಮನೆ ಆವರಣದಲ್ಲಿ ಮೆರವಣಿಗೆ ಮಾಡಲಾಗುತ್ತದೆ. 6ರಿಂದ 6.45ರವರೆಗೆ ಎ.ಎಂ.ಗುರುರಾಜ್ ತಂಡದಿಂದ ವಾದ್ಯಸಂಗೀತ, 6.45ರಿಂದ 7ರವರೆಗೆ ಎ.ಆರ್.ಕಲಾತಂಡದಿಂದ ನಾಡಗೀತೆ, ಮೈಸೂರು ಸಂಸ್ಥಾನದ ನಾಡಗೀತೆ ಕಾಯೋಶ್ರೀ ಗೌರಿ ಕರುಣಾಲಹರಿ ಗೀತೆ ಗಾಯನ, 7.20ರಿಂದ 9.30ರವರೆಗೆ ಹಿನ್ನೆಲೆ ಗಾಯಕ ಮನೋ ಅವರಿಂದ ಸಂಗೀತ ಸಂಜೆ.

ಡಿ.23ರಂದು ಸಂಜೆ 5.45ರಿಂದ 6.30ರವರೆಗೆ ಹನುಮಂತರಾಜು ಅವರಿಂದ ಲಯ–ನಾದ ತರಂಗ ಸಂಗೀತ ಮಿಲನ, 6.30ರಿಂದ 7.30ರವರೆಗೆ ಕಿಶನ್ ಬಿಳಿಗಲಿ ದ ಅಕಾಡೆಮಿ ಆಫ್ ಡ್ಯಾನ್ಸ್ ತಂಡದಿಂದ ನೃತ್ಯ, 7.45ರಿಂದ 9.45ರವರೆಗೆ ಹಿನ್ನೆಲೆ ಗಾಯಕ ಏಕಂಬರಂ ಲಕ್ಷ್ಮೀನಾರಾಯಣ್ ಅವರಿಂದ ಸಂಗೀತ ರಸಸಂಜೆ.

ಡಿ.24ರಂದು 5.45ರಿಂದ 6.30ರವರೆಗೆ ರೆನ್ಸಿ ಎನ್.ಯೋಗೇಶ್ ತಂಡದಿಂದ ಕರಾಟೆ ಇಂಡಿಯಾ ಸಮರ ಕಲೆ ಪ್ರದರ್ಶನ, 6.30ರಿಂದ 7.15ರವರೆಗೆ ಹೇಮಲತಾ ಕುಮಾರಸ್ವಾಮಿ ತಂಡದಿಂದ ಸುಗಮ ಸಂಗೀತ, 7ರಿಂದ 9.30ರವರೆಗೆ ಗಾಯಕರಾದ ಹೇಮಂತ್, ಶಮಿತ ಮಲ್ನಾಡ್, ಪೃಥ್ವಿ ಭಟ್, ಅಶ್ವಿನ್ ಶರ್ಮ, ಅಂಕಿತ ಕುಂಡು ತಂಡದಿಂದ ಸಂಗೀತಯಾನ ಕಾರ್ಯಕ್ರಮ ಜರುಗಲಿದೆ. **ಡಿ.25ರಂದು** ಸಂಜೆ 6ರಿಂದ 7ರವರೆಗೆ ನಾಗಲಕ್ಷ್ಮಿ ತಂಡದಿಂದ ನೃತ್ಯ, 7ರಿಂದ 8ರವರೆಗೆ ವಿದ್ಯಾಭೂಷಣ್ ಮತ್ತು ರಘುಪತಿ ಭಟ್ ಅವರಿಂದ ಕುಂಚಗಾಯನ, 8ರಿಂದ 10 ಗಂಟೆವರೆಗೆ ಗಾಯಕಿ ಎಂ.ಡಿ.ಪಲ್ಲವಿ ತಂಡದಿಂದ ಸುಗಮ ಸಂಗೀತ ಗಾಯನ ನೆರವೇರಲಿದೆ.

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಡಿ.18–ಹೊಸ ವರ್ಷದ ಸಂಭ್ರಮಾಚರಣೆ ಹಾಗೂ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಯಲ್ಲಿ ಮಾಗಿ ಉತ್ಸವ ಏರ್ಪಡಿಸಲಾಗಿದೆ. ಇದರ ಅಂಗವಾಗಿ ಹತ್ತು ದಿನಗಳ ಕಾಲ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗುತ್ತಿದೆ.

ಡಿ.22ರಿಂದ 31ರವರೆಗೆ ನಡೆಯಲಿರುವ ಫಲಪುಷ್ಪ ಪ್ರದರ್ಶನದಲ್ಲಿ ಸೋಮನಾಥಪುರದ ಚೆನ್ನಕೇಶವ ದೇವಾಲಯ, ಕರ್ನಾಟಕದ ನಕ್ಷೆ, ಹಂಪಿಯ ಕಲ್ಲಿನ ರಥ ಸೇರಿದಂತೆ ವಿವಿಧ ಆಕೃತಿಗಳು ನಾನಾ ಹೂವಿನಿಂದಲೇ ರೂಪಿತಗೊಂಡು ಪುಷ್ಪ ಹಾಗೂ ಸಸ್ಯಲೋಕದಲ್ಲಿ ಕಂಗೊಳಿಸಲಿವೆ.

ಅರಮನೆ ಆಡಳಿತ ಮಂಡಳಿ ಇತ್ತೀಚಿನ ವರ್ಷಗಳಲ್ಲಿ ಮಾಗಿ ಉತ್ಸವ ಆಚರಿಸುತ್ತಾ ಬರುತ್ತಿದ್ದು, ಇದರ ಅಂಗವಾಗಿ ಫಲಪುಷ್ಪ ಪ್ರದರ್ಶನ ಆಯೋಜಿಸುತ್ತಾ ಬಂದಿದೆ. ಫಲಪುಷ್ಪ ಪ್ರದರ್ಶನಕ್ಕಾಗಿ ಈಗಾಗಲೇ 25 ಸಾವಿರ ಹೂವಿನ ಕುಂಡದಲ್ಲಿ 35 ಬಗೆಯ ಹೂವಿನ ಗಿಡ ಬೆಳೆಸಲಾಗಿದ್ದು, ಫಲಪುಷ್ಪ ಪ್ರದರ್ಶನಕ್ಕೆ ಮೆರಗು ತಂದುಕೊಡಲು ಸಜ್ಜಾಗಿವೆ. ಫಲಪುಷ್ಪ ಪ್ರದರ್ಶನಕ್ಕೆ ಅರಮನೆ ಆವರಣದ ಉದ್ಯಾನವನದಲ್ಲಿ ಭರ್ಜರಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

25 ಸಾವಿರ ಹೂವಿನ ಕುಂಡ: ಕಳೆದ ಎರಡು ತಿಂಗಳ ಹಿಂದೆಯೇ ಹೂವಿನ ಗಿಡಗಳನ್ನು ಬೆಳೆಸುವ ಪ್ರಕ್ರಿಯೆ ಆರಂಭವಾಗಿದೆ. 25 ಸಾವಿರ ಹೂವಿನ ಕುಂಡದಲ್ಲಿ ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯ, ನಸ್ಟರ್‌ಸಿಯಂ, ಆಂಟಿರೈನಂ, ಬೋನ್ಸಾಯ್ ಗಿಡಗಳನ್ನು ಬೆಳೆಸಲಾಗಿದ್ದು, ಡಿ.20ರಿಂದ ಜೋಡಣೆ ಮಾಡಲಾಗುತ್ತದೆ. ● 6ನೇ ಪುಟಕ್ಕೆ

ಮೈಸೂರು ಮಿತ್ರ ಮಂಗಳವಾರ 19 ಡಿಸೆಂಬರ್ 2023

ಶ್ರೀ ವೀರಾಂಜನೇಯ ಸ್ವಾಮಿ, ಶ್ರೀ ಸಾಂಬ ಸದಾಶಿವ ದೇವಾಲಯದಲ್ಲಿ ಧನುರ್ಮಾಸ ಪೂಜೆ



ಮೈಸೂರು,ಡಿ.18–ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ 182 ವರ್ಷಗಳ ಇತಿಹಾಸವುಳ್ಳ ಶ್ರೀವೀರಾಂಜನೇಯ ಸ್ವಾಮಿ ಮತ್ತು ಶ್ರೀ ಸಾಂಬ ಸದಾಶಿವ ದೇವಾಲಯದಲ್ಲಿ ಧನುರ್ಮಾಸದ ಅಂಗವಾಗಿ ಡಿಸೆಂಬರ್ 17ರಿಂದ ಜ.15ರವರೆಗೆ ಪ್ರತಿನಿತ್ಯ ಬೆಳಗ್ಗೆ 5ರಿಂದ 7.30ರವರೆಗೆ ನಿತ್ಯ ಪಂಚಾಮೃತ ಅಭಿಷೇಕ, ಪುಷ್ಪ ತುಳಸಿ ಅಲಂಕಾರ, ಶ್ರೀ ಪುರುಷ ಸೂಕ್ತ ವಿಧಾನೇನ ಹಾಗೂ ಹನುಮಾನ ಚಾಲಿಸ ಪಾರಾಯಣ ಪೂಜಾ, ಮಹಾಮಂಗಳಾರತಿ ನೆರವೇರಲಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಡಿ.22ಕ್ಕೆ ಮುಖ್ಯಮಂತ್ರಿಗಳಿಂದ ಮೈಸೂರಲ್ಲಿ ನೂತನ ಪತ್ರಿಕಾ ಭವನಕ್ಕೆ ಶಂಕುಸ್ಥಾಪನೆ



ಮೈಸೂರು, ಡಿ.18 (ಆರ್‌ಕೆ) – ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಚಾಮುಂಡಿಬೆಟ್ಟದ ತಪ್ಪಲಿನ ಕೆಎಚ್‌ಬಿ ಬಡಾವಣೆಯ ಸಿಎ ನಿವೇಶನದಲ್ಲಿ ನಿರ್ಮಿಸಲುದ್ದೇಶಿಸಿರುವ ನೂತನ ಪತ್ರಿಕಾ ಭವನ ಹಾಗೂ ತರಬೇತಿ ಕೇಂದ್ರದ ಕಟ್ಟಡಕ್ಕೆ ಡಿಸೆಂಬರ್ 22ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸುವರು.

ಶುಕ್ರವಾರ ಬೆಳಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯರು, ಮುಡಾ ಅಧ್ಯಕ್ಷರು, ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ, ಮರುದಿನ ನೀರು ಸರಬರಾಜಲ್ಲಿ ವ್ಯತ್ಯಯ



ಮೈಸೂರು,ಡಿ.18–ನಿರ್ವಹಣಾ ಕಾಮಗಾರಿ ನಡೆಸಲಿರುವುದರಿಂದ ಡಿ.20 ಮತ್ತು 21ರಂದು ಮೈಸೂರು ಪಾಲಿಕೆ ವಾರ್ಡ್ ನಂ.9ರಿಂದ 16, 28ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್ ನಗರ, ಎನ್‌ಆರ್ ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ, 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇತರ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ವಿವಿ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಡಿ.18–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ 2023–24ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ದಿನಾಂಕವನ್ನು ಡಿ.22ರವರೆಗೆ ವಿಸ್ತರಿಸಲಾಗಿದೆ ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಕ್ರಿಟ್ ಮಿಕ್ಸರ್ ಟ್ರಕ್ ಹರಿದು ಶಿಕ್ಷಕಿ ಸಾವು

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್ ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ದುರ್ಘಟನೆ



ಶಾಲಾ ಶಿಕ್ಷಕಿ ಮುಕ್ತ

ಮೈಸೂರು,ಡಿ.18(ಆರ್‌ಕೆ)–ಸಿಮೆಂಟ್ ಕಾಂಕ್ರಿಟ್ ಮಿಕ್ಸರ್ ಟ್ರಕ್‌ವೊಂದು ಹರಿದು ಶಾಲಾ ಶಿಕ್ಷಕಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ದುರಂತ ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್ ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಹೆಬ್ಬಾಳು ನಿವಾಸಿ ಮುಕ್ತ (49) ಸಾವನ್ನಪ್ಪಿದವರು. ಮೈಸೂರು ತಾಲೂಕು, ಕೀಳನಪುರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದ ಅವರು, ತಮ್ಮ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಶಾಲೆಗೆ ಹೋಗುತ್ತಿದ್ದಾಗ ರಿಂಗ್ ರಸ್ತೆಯಲ್ಲಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಸಮೀಪ ಆರ್‌ಬಿಐ ಜಂಕ್ಷನ್‌ನಲ್ಲಿ ಹಿಂದಿನಿಂದ ವೇಗವಾಗಿ ಬಂದ ಸಿಮೆಂಟ್ ಕಾಂಕ್ರಿಟ್ ಮಿಕ್ಸರ್ ಟ್ರಕ್ ಬೆಳಗ್ಗೆ ಸುಮಾರು 9 ಗಂಟೆ ವೇಳೆಗೆ ಡಿಕ್ಕಿ ಹೊಡೆಯಿತು. ಆಯತಪ್ಪಿ ಬಲಬದಿಗೆ ಬಿದ್ದ ಮುಕ್ತ ಅವರ ತಲೆ ಮೇಲೆ ಟ್ರಕ್ ಚಕ್ರ ಹರಿಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಮುಕ್ತ ಅವರ ದೇಹ ಛಿದ್ರವಾಯಿತು. ಆದರೆ ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಲೆತ್ನಿಸಿದನಾದರೂ ಬೆನ್ನತ್ತಿದ ಜನರು ಸುಮಾರು 700 ಮೀಟರ್ ದೂರದಲ್ಲಿ ಟ್ರಕ್ ತಡೆಯುವಲ್ಲಿ ಯಶಸ್ವಿಯಾದರಾದರೂ ಚಾಲಕ ಜಿಗಿದು ಪರಾರಿಯಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿವಿಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ, ಸಬ್ ಇನ್ಸ್‌ಪೆಕ್ಟರ್ ಗೌತಮ್ ಹಾಗೂ ಸಿಬ್ಬಂದಿಗಳು, ಮಹಜರು ನಡೆಸಿ ಮುಕ್ತ ಅವರ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಅಪಘಾತ ಮಾಡಿದ ಟ್ರಕ್ ಅನ್ನು ವಶಪಡಿಸಿಕೊಂಡಿದ್ದಾರೆ. ಮುಕ್ತ ಅವರು ಕಳೆದ 2 ವರ್ಷಗಳ ಹಿಂದಷ್ಟೇ ಪತಿಯನ್ನು ಕಳೆದುಕೊಂಡಿದ್ದರು. ಏಕಮಾತ್ರ ಪುತ್ರಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂದು ಅವರ ಸಂಬಂಧಿಕರು ತಿಳಿಸಿದ್ದಾರೆ.

ಅಪಘಾತ ಸ್ಥಳದಲ್ಲಿ ಮುಕ್ತ ಅವರ ಊಟದ ಬಾಕ್ಸ್, ಮೊಬೈಲ್ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೊಪ್ಪಿಸಲಾಯಿತು.

ರೈತ ನಾಯಕ ಎನ್.ನಂಜೇಗೌಡ ನಿಧನ



ಮೈಸೂರು, ಡಿ. 18–ಕಳೆದ ನಾಲ್ಕೈದು ದಶಕಗಳಿಂದ ಕರ್ನಾಟಕ ರಾಜ್ಯ ರೈತ ಸಂಘದ ಮೂಲಕ ರಾಜ್ಯಾದ್ಯಂತ ಅದರಲ್ಲೂ ಮೈಸೂರು–ಚಾಮರಾಜನಗರ ಭಾಗದಲ್ಲಿ ಅನ್ನದಾತರ ಪರ ಸಕ್ರಿಯ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ರೈತ ನಾಯಕ ಎನ್.ನಂಜೇಗೌಡ ಭಾನುವಾರ ಮುಂಜಾನೆ ನಿಧನರಾದರು.

ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ 70 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಕಮಲಾಕ್ಷಿ, ಪುತ್ರರಾದ ಬೆಂಗಳೂರು ವಿವಿ ಕಾನೂನು ಕಾಲೇಜಿನ ಪ್ರಾಧ್ಯಾಪಕ ಡಾ.ಎನ್.ಸತೀಶ್ ಗೌಡ, ಕರ್ನಾಟಕ ರಾಜ್ಯ ಮುಕ್ತ ವಿವಿಯ ಸಹಾಯಕ ಪ್ರಾಧ್ಯಾಪಕ ಡಾ.ಎನ್. ಆನಂದ್ ಗೌಡ, ಸೊಸೆಯಂದಿರು, ನಾಲ್ವರು ಮೊಮ್ಮಕ್ಕಳು, ಅಪಾರ ಬಂಧು ವರ್ಗ, ಮಿತ್ರರ ಅಗಲಿದ್ದಾರೆ. ಮೂಲತಃ ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕಿನ ಟಿ.ಹೊಸೂರು ಗ್ರಾಮದವರು.

ಜಯದೇವ ಆಸ್ಪತ್ರೆಯಿಂದ ಪಾರ್ಥಿವ ಶರೀರವನ್ನು ಬೆಂಗಳೂರಿನ ಕೆಂಗೇರಿ ಸಮೀಪದ ವಿಶ್ವೇಶ್ವರಯ್ಯ ಬಡಾವಣೆಯಲ್ಲಿರುವ ಪುತ್ರ ಪ್ರೊ.ಸತೀಶ್ ಗೌಡ ನಿವಾಸದಲ್ಲಿ ಕೆಲಗಂಟೆ ಇರಿಸಲಾಯಿತು. ಅಲ್ಲಿ ಹಲವರು ಅಂತಿಮ ದರ್ಶನ ಪಡೆದರು. ಮಂಡ್ಯದಲ್ಲಿ ರೈತ ನಾಯಕಿ ಸುನಂದಾ ಜಯರಾಂ ನೇತೃತ್ವದಲ್ಲಿ ನೂರಾರು ರೈತರು ಅಂತಿಮ ನಮನ ಸಲ್ಲಿಸಿದರು. ನಂತರ ಪಾರ್ಥಿವ ಶರೀರವನ್ನು ಮೈಸೂರು ವಿಜಯನಗರ ಮೂರನೇ ಹಂತದಲ್ಲಿರುವ ಮತ್ತೋರ್ವ ಪುತ್ರ ಡಾ. ಆನಂದ್‌ಗೌಡ ನಿವಾಸಕ್ಕೆ ತರಲಾಯಿತು. ಅಲ್ಲಿಯೂ ನೂರಾರು ಮಂದಿ ಅಂತಿಮ ದರ್ಶನ ಪಡೆದರು. ಭಾನುವಾರ ಸಂಜೆ ವೇಳೆಗೆ ಹುಣಸೂರು ತಾ. ಸಿಂಗಮಾರನಹಳ್ಳಿಯಲ್ಲಿ ಅಂತ್ಯಸಂಸ್ಕಾರ ನಡೆಸಲಾಯಿತು. ನೈಸರ್ಗಿಕ ಕೃಷಿಯ ಬಗ್ಗೆ ಅಪಾರ ಒಲವಿದ್ದ ನಂಜೇಗೌಡರು ಅಲ್ಲಿ ಸುಮಾರು ಮೂವತ್ತು ಸಾವಿರ ಮರಗಳನ್ನು ಬೆಳೆಸಿ, ಕಾಡು ಕೃಷಿ ಮಾಡಿದ್ದರು. ಹೀಗಾಗಿಯೇ ಅಲ್ಲಿಯೇ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾರತದಲ್ಲೇ ಉದ್ಯೋಗಾವಕಾಶವಿದೆ; ವಿದೇಶಕ್ಕೆ ಹೋಗುವ ಅವಶ್ಯಕತೆ ಇಲ್ಲ

ಮೈವಿವಿ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ದಕ್ಷಿಣ ವಲಯ ಡಿಐಜಿಪಿ ಡಾ.ಬೋರಲಿಂಗಯ್ಯ ಸಲಹೆ



ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಮೈಸೂರು ವಿವಿ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ದಕ್ಷಿಣ ವಲಯ ಉಪ ಪೊಲೀಸ್ ಮಹಾ ನಿರೀಕ್ಷಕ (ಡಿಐಜಿಪಿ) ಡಾ.ಎಂ.ಬಿ.ಬೋರಲಿಂಗಯ್ಯ ಮಾತನಾಡಿದರು.



ಮೈಸೂರು,ಡಿ.18(ಬಿಎಲ್‌ಯು)–ಮಾಹಿತಿ ತಂತ್ರಜ್ಞಾನ, ಔಷಧ ಸಂಶೋಧನೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ವಿಶ್ವದ ಹಲವು ದೇಶಗಳನ್ನು ಹಿಂದಿಕ್ಕಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವಾಗ ಭಾರತೀಯರು ಉದ್ಯೋಗಕ್ಕಾಗಿ ವಿದೇಶಗಳಿಗೆ ಹೋಗುವ ಅವಶ್ಯಕತೆ ಇಲ್ಲ ಎಂದು ದಕ್ಷಿಣ ವಲಯ ಉಪ ಪೊಲೀಸ್ ಮಹಾ ನಿರೀಕ್ಷಕ (ಡಿಐಜಿಪಿ) ಡಾ.ಎಂ.ಬಿ. ಬೋರಲಿಂಗಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಸೋಮವಾರ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಭಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಬೆಳವಣಿಗೆಯ ವೇಗವನ್ನು ಅವಲೋಕಿಸಿದರೆ ಇನ್ನು 2–3 ದಶಕದಲ್ಲಿ ವಿಶ್ವದ ಅಗ್ರಮಾನ್ಯ ದೇಶವಾಗುವುದರಲ್ಲಿ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭಾರತದ ಯುವಕರಿಗೆ 80 ಮತ್ತು 90ರ ದಶಕದಲ್ಲಿ ಅಮೇರಿಕಾ, ಬ್ರಿಟನ್ ಸೇರಿದಂತೆ ಕೆಲವು ದೇಶಗಳಿಗೆ ಹೋಗಿ ಒಳ್ಳೆಯ ಉದ್ಯೋಗಕ್ಕೆ ಸೇರುವ ಕನಸು ಇತ್ತು. ಆದರೆ ಈಗ ಭಾರತದಲ್ಲಿ ಉತ್ತಮ ಉದ್ಯೋಗಾವಕಾಶವಿದೆ. ಕೈಗಾರಿಕೆ, ಸಂಶೋಧನೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹೆಚ್ಚಿನ ಬಂಡವಾಳ ಹೂಡಲಾಗುತ್ತಿದೆ. ಇದರಿಂದ ಯುವಕರು ಬೇರೆ ದೇಶಗಳಿಗೆ ಉದ್ಯೋಗ ಅರಸಿ ಹೋಗುವ ಪ್ರಮೇಯವಿಲ್ಲ ಎಂದು ಸಲಹೆ ನೀಡಿದರು.

ಅಮೇರಿಕಾ, ಚೈನಾ ಹಾಗೂ ಯೂರೋಪಿಯನ್ ರಾಷ್ಟ್ರಗಳಲ್ಲಿ 35ರಿಂದ 40ರ ವಯೋಮಾನದವರು ಹೆಚ್ಚಾಗಿದ್ದಾರೆ. ಆದರೆ ಭಾರತದ ಒಟ್ಟಾರೆ ಜನಸಂಖ್ಯೆಯಲ್ಲಿ 25ರಿಂದ 28 ವರ್ಷದ ಕೌಶಲ್ಯವಿರುವ ಯುವಕರ ಸಂಖ್ಯೆ ಹೆಚ್ಚಿದೆ. ಇದರಿಂದ ಭಾರತದ ಅಭಿವೃದ್ಧಿ ವೇಗ ಹೆಚ್ಚಾಗುತ್ತಿದೆ. ಇದೇ ವೇಳೆ ಅಮೇರಿಕಾ, ಚೈನಾದ ಅಭಿವೃದ್ಧಿ ಕುಂಠಿತವಾಗುತ್ತಿದೆ. ಇದೇ ವೇಳೆ ಭಾರತದ ಅಭಿವೃದ್ಧಿ ಮೇಲ್ಮುಖವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಭಾರತದ ಆಯವ್ಯಯದಲ್ಲಿ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರಕ್ಕೆ ಹೆಚ್ಚಿನ ಹಣ ಮೀಸಲಿಡಲಾಗುತ್ತಿದೆ. ಜೊತೆಗೆ ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಲ್ಲಿ ಹೊಸ ಹೊಸ ಕೈಗಾರಿಕೆಗಳು ಸ್ಥಾಪನೆಯಾಗುತ್ತಿವೆ. ಇದರಿಂದ ಉದ್ಯೋಗಾವಕಾಶ ಹೆಚ್ಚಿದೆ ಎಂದು ತಿಳಿಸಿದರು.

ಎಂಎ, ಎಂಎಸ್ಸಿ, ಎಂಕಾಂ ಸೇರಿದಂತೆ ಯಾವುದೇ ಪದವಿಯಾದರೂ ಕೌಶಲ್ಯವಿರಬೇಕು. ಇಲ್ಲದಿದ್ದರೆ ಉದ್ಯೋಗಕ್ಕೆ ಆಯ್ಕೆಯಾಗಲು ಯಾವುದೇ ಪದವಿ ಪಡೆದಿದ್ದರೂ ಪ್ರಯೋಜನವಿಲ್ಲ. ಒಳ್ಳೆಯ ಉದ್ಯೋಗ ಪಡೆಯಲು ಕೌಶಲ್ಯ ವೃದ್ಧಿಸಿಕೊಳ್ಳಬೇಕು ಎಂದು ಡಿಐಜಿಪಿ ಸಲಹೆ ನೀಡಿದರು.

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಪದವಿ ಪಡೆದಿರುವ ನಾನು ಇಲ್ಲೇ 8 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದೇನೆ. ತರುವಾಯ ಐಪಿಎಸ್‌ಗೆ ಆಯ್ಕೆಯಾದೆ. ಗ್ರಾಮೀಣ ಭಾಗದಿಂದ ಬಂದಿರುವ ನಾನು, ನವೋದಯ ಶಾಲೆಯಲ್ಲೂ ವ್ಯಾಸಂಗ ಮಾಡಿದ್ದೇನೆ. ಬಡತನ ಎಂಬ ಕೀಳರಿಮೆ ಬಿಟ್ಟು ಜೀವನದ ಕಷ್ಟದ ದಿನಗಳನ್ನು ಸವಾಲಾಗಿ ಸ್ವೀಕರಿಸಿ, ಗುರಿ ಸಾಧಿಸಬೇಕು ಎಂದು ಡಾ.ಬೋರಲಿಂಗಯ್ಯ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೊಬೈಲ್ ಹಿಡಿದುಕೊಂಡು ಸಮಯ ವ್ಯರ್ಥ ಮಾಡಬೇಡಿ. ಬಿಡುವಿನ ಸಮಯದಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಿ. ಕೌಶಲ್ಯ ಪ್ರೌಢಿಮೆ ಮೂಲಕ ಮುಂದಿನ ಕಠಿಣ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್, ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ವಿ.ಆರ್.ಶೈಲಜ (ಆಡಳಿತ), ಪ್ರೊ.ಕೆ.ಎಂ. ಮಹದೇವನ್(ಪರೀಕ್ಷಾಂಗ), ಆಡಳಿತಾಧಿಕಾರಿ ಪ್ರೊ. ಎಸ್.ಟಿ.ರಾಮಚಂದ್ರ, ಆಂತರಿಕ ಗುಣಮಟ್ಟ ಖಾತರಿ ಘಟಕದ ನಿರ್ದೇಶಕ ಪ್ರೊ.ಕೆ.ಎನ್.ಅಮೃತೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆ ಅತೀ ಅವಶ್ಯಕ

ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಸಲಹೆ



ಮೈಸೂರು, ಡಿ.18(ಬಿಎಲ್‌ಯು)–ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕು ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಸಲಹೆ ನೀಡಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಸೋಮವಾರ ಜಾಗತಿಕ ಮಾದರಿಯಂತೆ ಸುಸ್ಥಿರ ಬೆಳವಣಿಗೆಯಲ್ಲಿ ಬದಲಾವಣೆ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇಂತಹ ಉನ್ನತ ತಂತ್ರಜ್ಞಾನ ಆಧಾರಿತ ಶಿಕ್ಷಣ ಅಳವಡಿಸಿಕೊಂಡಾಗ ಮಾತ್ರ ಭಾರತದ ವಿದ್ಯಾರ್ಥಿಗಳು ಜಾಗತಿಕ ಮಟ್ಟದ ಸ್ಪರ್ಧೆ ಎದುರಿಸಲು ಸಾಧ್ಯವಾಗುತ್ತದೆ ಎಂದರು.

ಈ ಹಿನ್ನೆಲೆಯಲ್ಲಿ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಜಾಗತಿಕ ಶಿಕ್ಷಣಕ್ಕೆ ತಕ್ಕಂತೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದ ತನಕ ಆಮೂಲಾಗ್ರ ಬದಲಾವಣೆ ಮಾಡಬೇಕು. ಈ ಮೂಲಕ ಸ್ಪರ್ಧಾತ್ಮಕ ಯುಗದಲ್ಲಿ ನಮ್ಮ ಮಕ್ಕಳನ್ನು ತಯಾರಿ ಮಾಡಬೇಕು ಎಂದು ಸಲಹೆ ನೀಡಿದರು.

ಇಂದು ಜಾಗತಿಕ ನಾವೀನ್ಯತೆ ಹಾಗೂ ಜ್ಞಾನ ಸೂಚ್ಯಂಕದಲ್ಲಿ ಅಮೇರಿಕಾ, ಇಂಗ್ಲೆಂಡ್ ಸೇರಿದಂತೆ ಹಲವು ದೇಶಗಳು ಅಗ್ರಸ್ಥಾನದಲ್ಲಿದೆ. ಈ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತ ಬಹಳ ಹಿಂದಿದೆ. ಈ ಕಾರಣದಿಂದ ಭಾರತದಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣದ ಜೊತೆಗೆ ಹೆಚ್ಚಿನ ಸಂಶೋಧನೆಗೆ ಒತ್ತು ನೀಡಬೇಕು ಎಂದು ಪ್ರೊ.ನಿರಂಜನ ಅಭಿಪ್ರಾಯಪಟ್ಟರು.

ಆದರೆ ನಮ್ಮ ವಿದ್ಯಾರ್ಥಿಗಳಿಗೆ ಸಂವಹನ, ಪರಿಹಾರಾತ್ಮಕ ಮನೋಭಾವ ನಿರ್ವಹಣೆ ಸೇರಿದಂತೆ ಇತರೆ ಕೌಶಲ್ಯಗಳ ಕೊರತೆ ಇದೆ. ಇದರಿಂದ ಭಾರತದ ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

ಇಂತಹ ಪರಿಸ್ಥಿತಿಯಲ್ಲಿ ಉನ್ನತ ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ 2022ರಲ್ಲಿ ಭಾರತದ 13 ಲಕ್ಷ ಯುವ ಜನರು ವಿದೇಶಗಳಿಗೆ ವಲಸೆ ಹೋಗಿದ್ದಾರೆ. ಇದು 2024ಕ್ಕೆ 18 ಲಕ್ಷಕ್ಕೆ ಏರಿಕೆಯಾಗಲಿದೆ. ಇದರಿಂದ ಭಾರತ ದೇಶಕ್ಕೆ ಜ್ಞಾನದ ನಷ್ಟವಾಗಲಿದೆ. ಇದು ಸಹಜವಾಗಿಯೇ ಭಾರತದ ಅಭಿವೃದ್ಧಿ ಮೇಲೆ ಪರಿಣಾಮ ಬೀರಲಿದೆ. ಸರ್ಕಾರದ ಹೂಡಿಕೆಯು ವ್ಯರ್ಥವಾಗುತ್ತದೆ ಎಂದು ಪ್ರೊ.ನಿರಂಜನ ತಿಳಿಸಿದರು. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಆರ್. ಹೆಚ್.ಪವಿತ್ರ, ಅಮೇರಿಕನ್ ಯೂನಿವರ್ಸಿಟಿ ಆಫ್ ಕುವೈತ್‌ನ ಪ್ರಾಧ್ಯಾಪಕ ಪ್ರೊ.ರಾಲ್ಫ್ ಪಾಲ್ಲಿಯಮ್, ಇರಾನ್‌ನ ಆಜಾದ್ ಆವಾಜ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಪ್ರೊ.ಸೈರೂಸ್ ಝುಬೋಲಿ, ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಶಿವಚಿತ್ತಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವುದರಲ್ಲಿ ತಪ್ಪೇನಿದೆ?

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಶ್ನೆ

ಮೈಸೂರು,ಡಿ.18(ಆರ್‌ಕೆ)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಟಿಪ್ಪು ಸುಲ್ತಾನ್ ಹೆಸರಿಡುವುದರಲ್ಲಿ ತಪ್ಪೇನಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಟಿಪ್ಪು ಸ್ವಾತಂತ್ರ್ಯ ಹೋರಾಟಗಾರ ಅಲ್ವಾ?, ಮಲಬಾರ್‌ನಲ್ಲಿ ಹೆಣ್ಣು ಮಕ್ಕಳನ್ನು ರಕ್ಷಿಸಲಿಲ್ವಾ?, ಭೂ ಸುಧಾರಣಾ ಕಾಯ್ದೆ ಜಾರಿಗೆ ತರಲಿಲ್ವಾ?, ದೇಶಕ್ಕೆ ರೇಷ್ಮೆ ಉದ್ಯಮ ಪರಿಚಯಿಸಿದವರ್ಯಾರು? ಅಂತಹ ಮಹಾನ್ ವ್ಯಕ್ತಿಯ ಸ್ಮರಣೆ ಮಾಡುವುದು ತಪ್ಪಾ ಎಂದು ಪ್ರಶ್ನೆಗಳ ಸುರಿಮಳೆಗೈದರು.

ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವುದು–ಬಿಡುವುದು ಬೇರೆ ವಿಚಾರ. ಆದರೆ ಟಿಪ್ಪು ಸುಲ್ತಾನ್ ಹೆಸರು ಹೇಳಿದ ಕೂಡಲೇ ಏಕೆ ವಿರೋಧ ಮಾಡ್ತಾರೆ? ಭಾರತದ ಸಂವಿಧಾನದ ಪ್ರಕಾರ ಎಲ್ಲಾ ಧರ್ಮಗಳೂ ಇಲ್ಲಿ ಸಮವಾದವು ಎಂದು ಅವರು ನುಡಿದರು.

ಮೈಸೂರು ವಿಮಾನ ನಿಲ್ದಾಣಕ್ಕೆ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡುವುದಕ್ಕೆ ನನ್ನ ತಕರಾರಿಲ್ಲ. ಆದರೆ, ಈ ಬಗ್ಗೆ ಚರ್ಚೆಯನ್ನೇ ಮಾಡಬಾರದೆಂದರೆ ಹೇಗೆ? ಯಾವುದೇ ಒಂದು ಹೊಸ ಯೋಜನೆ ರೂಪಿಸುವಾಗ ಅಥವಾ ಶಾಶ್ವತ ವ್ಯವಸ್ಥೆಗೆ ನಾಮಕರಣ ಮಾಡುವಾಗ ಸುದೀರ್ಘ ಚರ್ಚೆ ನಡೆಸಿ ಎಲ್ಲರ ಅಭಿಪ್ರಾಯಗಳನ್ನು ಪಡೆದು ನಿರ್ಧರಿಸಬೇಕೇ ಹೊರತು, ಏಕಾಏಕಿ ನಿಲುವು ಸರಿಯಲ್ಲ ಎಂದು ಮಹದೇವಪ್ಪ ಹೇಳಿದರು.



ಸಂಸತ್‌ನಲ್ಲಿ ಕಲಾಪ ನಡೆಯುವಾಗಲೇ ಸ್ಮೋಕ್ ಬಾಂಬ್ ಸಿಡಿಸಿದ ಘಟನೆ ಸಂಬಂಧ ಪ್ರತಿಕ್ರಿಯಿಸಿದ ಡಾ. ಮಹದೇವಪ್ಪ, ಇದು ಗಂಭೀರವಾದ ರಾಷ್ಟ್ರೀಯ ಭದ್ರತಾ ವಿಚಾರ. ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದು, ಸದನದಲ್ಲಿ ರಂಪಾಟ ನಡೆಸಿ, ಸ್ಮೋಕ್ ಬಾಂಬ್ ಸಿಡಿಸಿ ಆತಂಕ ಉಂಟು ಮಾಡಿರುವುದು ಭಾರಿ ಭದ್ರತಾ ಲೋಪ ಎಂದರು.

ಬೇರೆಯವರೇನಾದರೂ ಪಾಸ್ ಕೊಟ್ಟಿದ್ದರೆ ಮೈಸೂರು ಗತಿ ಏನಾಗುತ್ತಿತ್ತು? ಬೇರೆ ಧರ್ಮದವರು ಪಾಸ್ ನೀಡಿದ್ದರೆ ಯಾವ ದೃಷ್ಟಿಯಿಂದ ನೋಡುತ್ತಿದ್ದರು ಎಂದ ಅವರು, ಲೆಟರ್ ಕೊಟ್ಟಿದ್ದರಿಂದ ಕಾಂಗ್ರೆಸ್ ಕಾರ್ಯಕರ್ತರು ಸಂಸದ ಪ್ರತಾಪ್ ಸಿಂಹ ಕಚೇರಿ ಬಳಿ ಪ್ರತಿಭಟನೆ ಮಾಡಿದ್ದಾರೆ ಅಷ್ಟೇ ಎಂದರು.

ಒಮ್ಮೊಮ್ಮೆ ಗಡಿಪಾರಾದವರು, ಕೊಲೆ ಆರೋಪಿಗಳು ನಮ್ಮ ಜೊತೆಯೇ ಫೋಟೋ ತೆಗೆಸಿಕೊಂಡಿರುತ್ತಾರೆ. ಅವರ ಪೂರ್ವಾಪರ ವಿಚಾರಿಸೋಕ್ಕಾಗಲ್ಲ. ಆದರೆ, ಸಂಸತ್ ಭವನಕ್ಕೆ ಅಷ್ಟು ಸುಲಭವಾಗಿ ಪಾಸ್‌ಗೆ ಶಿಫಾರಸು ಮಾಡಲಾಗುವುದಿಲ್ಲ ಎಂದು ಸಚಿವರು ಪ್ರಶ್ನೆಗೆ ಉತ್ತರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ಓಲೇಟಿ ವೆಂಕಟೇಶ್ವರುಲು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ರತ್ನಮಾಲಾ ಪ್ರಕಾಶ್, ವಾಣಿ ಜಯರಾಂ, 12.45 ಶ್ರದ್ಧೆಯ ಸರಕಿನ ಉದ್ಯಮಿ ಮೈಸೂರಿನ ಬಿ.ಎಸ್.ವಿಜಯಾ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ಎಸ್.ಮಂಜುಳಾ, 3.00 ಎಸ್.ಪಿ.ರಾಮ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಶ್ರೀ ಸುಬ್ರಹ್ಮಣ್ಯೇಶ್ವರ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುವವರು ಶಿವಣ್ಣ ಹಾಗೂ ಎಸ್.ಮನು, ನಡೆಸಿಕೊಡುತ್ತಾರೆ ಎನ್.ಕೇಶವಮೂರ್ತಿ, 9.30 ಆರ್.ಎ.ರಮಾಮಣಿ–ಹಾಡುಗಾರಿಕೆ

ಇಂದಿನ ಪಂಚಾಂಗ

19.12.2023 ಮಂಗಳವಾರ, ಮಳೆ ನಕ್ಷತ್ರ: ಮೂಲ 16.12.2023 ರಿಂದ 28.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವಿಶ್ರಾಂತಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 10ರಿಂದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಶ್ರೀ ಸ್ವಾಮಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು:** ನೂತನ ವಿದ್ಯಾರ್ಥಿಗಳಿಗೆ ಪುನಶ್ಚೇತನ–ಕಾರ್ಯಕ್ರಮ–2023–24, ಸ್ಥಳ: ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ರಿಂದ.

■ **ಅಸೆಂಡೆನ್ಸ್ :** ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ ಎರಡನೇ ಹಂತ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ :** ಹೆಚ್‌ಪಿವಿ ಲಸಿಕೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಅಧ್ಯಕ್ಷತೆ: ಜೆಎಸ್‌ಎಸ್ ಎಹೆಚ್‌ಇಆರ್ ಸಮಕುಲಾಧಿಪತಿ ಡಾ.ಬಿ.ಸುರೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10.30ಕ್ಕೆ

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪ ದೇವಾಲಯ):** 63ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5.30ರಿಂದ ಮಹಾ ಗಣಪತಿ ಹೋಮ, ಉಷಾಪೂಜಾ, ಶೀವೇಲಿ ವಾದ್ಯದೊಂದಿಗೆ, ಮಧ್ಯಾಹ್ನ 12ರಿಂದ ದೇವರಿಗೆ ಉತ್ಸವ, ಕಳಶಾಭಿಷೇಕಂ, ಕಲಭಾಭಿಷೇಕವ್, ಗಣಪತಿಗೆ ಪಂಚಗವ್ಯ, ಉಚ್ಚಪೂಜಾ, ಮ. 12.30ರಿಂದ ಮಹಾ ಅನ್ನದಾನ, ಸಂಜೆ 5.30ರಿಂದ ದೀಪಾರಾಧನೆ, ಪಳ್ಳಿವೇಟ್ಟ, ಅತ್ತಾಳ ಪೂಜಾ, ಶ್ರೀ ಭೂತ ಬಲಿ, ರಾತ್ರಿ 9ಕ್ಕೆ ವಿಳಕ್ಕು, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಶ್ರೀ ಚಾಮುಂಡಿಬೆಟ್ಟದ ಪಾದ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಕಾರ್ಮಿಕ ಎಂಬ ಸೂರ್ಯನ ರಕ್ಷಣೆ ಮತ್ತು ಹೊಣೆ –ಜಿಲ್ಲಾ ಸಮ್ಮೇಳನ, ಉದ್ಘಾಟನೆ : ಕರ್ನಾಟಕ ರಾಜ್ಯ ಗಾರ್ಮೆಂಟ್ಸ್ ಲೇಬರ್ ಯೂನಿಯನ್ ರಾಜ್ಯಾಧ್ಯಕ್ಷರಾದ ಶ್ರೀಮತಿ ಪಿ.ವಿ. ರುಕ್ಮಿಣಿ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ದಿಕ್ಸೂಚಿ ಭಾಷಣ : ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಮಹಾಮಂಡಳ ಅಧ್ಯಕ್ಷ ಪ್ರಮೋದ್ ಚಿಕ್ಕಮಣ್ಣೂರ್, ಮುಖ್ಯ ಅತಿಥಿಗಳು : ಕೆಪಿಸಿಸಿ ರಾಜ್ಯ ಕಾರ್ಮಿಕ ವಿಭಾಗ ಉಪಾಧ್ಯಕ್ಷೆ ಶ್ರೀಮತಿ ಹರಿಣಿಗೌಡ, ಸ್ಥಳ: ಕಾಂಗ್ರೆಸ್ ಭವನ, ಮಧ್ಯಾಹ್ನ 12.30ಕ್ಕೆ.

■ **ನೃತ್ಯ ವಿದ್ಯಾಪೀಠ:** ನೃತ್ಯಾರಾಧನೆ–ನರ್ತನದಲ್ಲಿ ದಾಸಸ್ಮರಣೆ, ಧರ್ಮಬೋಧನೆ–ಮಾಲಿಕೆ 7, ಕರ್ನಾಟಕ ಗ್ರಾಮೀಣ ಬ್ಯಾಂಕ್ ನಿವೃತ್ತ ಹಿರಿಯ ವ್ಯವಸ್ಥಾಪಕ ಪ್ರಸನ್ನ ಪ್ರಕಾಶ್‌ರಿಂದ ಮಾತೃಭೂಮಿ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ನಂದಿನಿ ನೃತ್ಯಾಲಯ ಟ್ರಸ್ಟ್ ನಿರ್ದೇಶಕ ಆಚಾರ್ಯ ವಿದ್ವಾನ್ ಕಣ್ಣನ್ ರಾಮಾನುಜಂ, ಉಪಸ್ಥಿತರು: ಹೊಳೆನರಸೀಪುರ ಸ್ವರ್ಣ ಶಿಕ್ಷಣ ಸಂಸ್ಥೆ ಪ್ರಾಂಶುಪಾಲೆ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ವ್ಯವಸ್ಥಾಪಕಿ ಜಿ.ಕೆ.ಕಮಲ, ಸ್ಥಳ: ಕಿರುರಂಗ ಮಂದಿರ, ಸಂಜೆ 5.45ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಮೂಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಹೆಚ್.ಸಿ.ಮಮತ ಅವರಿಂದ ಭಾರತದ ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬೋಗಾದಿ ಮಹಿಳಾ ವಿದ್ಯಾರ್ಥಿ ನಿಲಯದ ನಿಲಯಪಾಲಕಿ ಚಂದ್ರಮ್ಮ, ಸ್ಥಳ: ಬೋಗಾದಿ ಮಹಿಳಾ ವಿದ್ಯಾರ್ಥಿ ನಿಲಯ, ಸಂಜೆ 6 ರಿಂದ.

■ **ಹೆಬ್ಬಾರ್ ಶ್ರೀವೈಷ್ಣವ ಸಭಾ, ಬೆಂಗಳೂರು, ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ವಿದ್ವಾನ್ ಎಂ.ಕೆ.ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸ್ ರಸ್ತೆ, ಸಂಜೆ 6.15 ರಿಂದ.

ಭ್ರಷ್ಟಾಚಾರ ಆರೋಪಕ್ಕೆ ಗುರಿಯಾಗಿದ್ದ ಅಧಿಕಾರಿ ವರ್ಗಾವಣೆ; ತಿಂಗಳೊಳಗೆ ಮರು ನಿಯುಕ್ತಿ ಪವಾಡ...!?

ಮೈಸೂರು,ಡಿ.18–ಭ್ರಷ್ಟಾಚಾರ ಆರೋಪಕ್ಕೆ ಗುರಿಯಾಗಿದ್ದ ಮೈಸೂರು ನಗರಪಾಲಿಕೆ ಇಂಜಿನಿಯರ್‌ವೊಬ್ಬರನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದ ತಿಂಗಳೊಳಗಾಗಿ ಮತ್ತೆ ಮೈಸೂರು ಪಾಲಿಕೆಗೇ ಮರು ನಿಯುಕ್ತಿ ಮಾಡಿರುವ ವಿಲಕ್ಷಣ ಘಟನೆ ನಡೆದಿದೆ.

ಈ ಹಿಂದೆ ಮೈಸೂರು ಪಾಲಿಕೆಯಲ್ಲಿ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಕೆ.ಎಸ್.ಮೃತ್ಯುಂಜಯ ಅವರೇ ಇಲ್ಲಿಂದ ವರ್ಗಾವಣೆಯಾದ ತಿಂಗಳೊಳಗಾಗಿಯೇ ಮತ್ತೆ ತಮ್ಮ ಸ್ಥಾನಕ್ಕೆ ಮರುಳಿದ ಪ್ರಭಾವಿ ಅಧಿಕಾರಿಯಾಗಿದ್ದಾರೆ.

ವಿವರ: ಮೈಸೂರು ನಗರಪಾಲಿಕೆಯ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಎಸ್.ಮೃತ್ಯುಂಜಯ ಅವರು ಟೆಂಡರ್‌ದಾರರಿಂದ ಅಕ್ರಮವಾಗಿ ಸಂಭಾವನೆ ಪಡೆಯುತ್ತಿದ್ದಾರೆ ಹಾಗೂ ಇವರ ಕಾರ್ಯವ್ಯಾಪ್ತಿಯ ಎಲ್ಲಾ ಕೆಲಸಗಳಿಗೂ ಅವರ ಕಾರು ಚಾಲಕನ ಮೂಲಕ ಅಕ್ರಮ



ಸಂಭಾವನೆ ಪಡೆಯುತ್ತಿದ್ದಾರೆ ಎಂದು ಮೈಸೂರಿನ ಜಿ.ವಿ.ರಾಜು ಎಂಬುವರು ಕಳೆದ ಜೂನ್ 5ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಪಿ.ರಾಜು ಅವರು, ಇಂಜಿನಿಯರ್ ಕೆ.ಎಸ್.ಮೃತ್ಯುಂಜಯ ವಿರುದ್ಧ ಆರೋಪಗಳನ್ನು ನಿಯಮಾನುಸಾರ ಪರಿಶೀಲಿಸಿ ವಾಸ್ತವಾಂಶಗಳ ಸಹಿತ ಅಗತ್ಯ ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ಸರ್ಕಾರಕ್ಕೆ ಕೂಡಲೇ ಸಲ್ಲಿಸುವಂತೆ ಮೈಸೂರು ಪಾಲಿಕೆ ಆಯುಕ್ತರಿಗೆ ಕಳೆದ ಜುಲೈ 3ರಂದು ಪತ್ರ ರವಾನಿಸಿದ್ದರು.

ಮೃತ್ಯುಂಜಯ ಅವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಪಾಲಿಕೆ ಆಯುಕ್ತರಿಂದ ಸರ್ಕಾರಕ್ಕೆ ವರದಿ ಸಲ್ಲಿಸಲಾಯಿತೇ? ಒಂದು ವೇಳೆ ಸಲ್ಲಿಸಿದ್ದರೆ ಅವರ ಮೇಲಿನ ಆರೋಪಗಳು ದೃಢಪಟ್ಟಿತ್ತೆ ಇಲ್ಲವೇ ಅವರು ಆರೋಪಮುಕ್ತರಾಗಿದ್ದರೆ? ಎಂಬುದರ ಬಗ್ಗೆ ಯಾವುದೇ ವಿವರಗಳು ಲಭ್ಯವಾಗಿಲ್ಲ. ಆದರೆ, ನವೆಂಬರ್ 21ರಂದು ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ರಾಜು ಅವರೇ ಮೃತ್ಯುಂಜಯ ಅವರನ್ನು ಮುಂದಿನ ಸ್ಥಳ ನಿಯುಕ್ತಿ ಕಾದಿರಿಸಿ ಅವರ ಸ್ಥಳಕ್ಕೆ ಚನ್ನಪಟ್ಟಣ ನಗರಸಭೆಯ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿದ್ದ ಎಸ್.ಮೀನಾಕ್ಷಿ ಅವರನ್ನು ನಿಯೋಜಿಸಿದ್ದರು. ನಂತರ ಅದೇನು ಪವಾಡ ನಡೆಯಿತೋ ಗೊತ್ತಿಲ್ಲ. ಮೃತ್ಯುಂಜಯ ವರ್ಗಾವಣೆಯಾಗಿ ತಿಂಗಳು ಕಳೆಯುವುದರೊಳಗಾಗಿ ಅಂದರೆ, ಡಿ.18ರಂದು ಅವರನ್ನು ಮೈಸೂರು ಪಾಲಿಕೆ ಪರಿಸರ ವಿಭಾಗದ ಕಾರ್ಯಪಾಲಕ ಅಭಿಯಂತರರಾಗಿ ಮರು ನಿಯುಕ್ತಿಗೊಳಿಸಲಾಗಿದೆ. ಈ ಸ್ಥಳದಲ್ಲಿದ್ದ ಪಿ.ಕೆ. ಮೋಹನ್ ಕುಮಾರ್ ಅವರಿಗೆ ಸ್ಥಳ ನಿಯುಕ್ತಿ ಕಾದಿರಿಸಲಾಗಿದೆ.

ಮೃತ್ಯುಂಜಯ ಅವರ ವಿರುದ್ಧ ಆರೋಪ ದೃಢಪಟ್ಟಿದೆಯೋ ಇಲ್ಲವೋ ಗೊತ್ತಿಲ್ಲವಾದರೂ ಆರೋಪದ ಬಗ್ಗೆ ಪರಿಶೀಲನೆ ನಡೆಸುವಂತೆ ನಗರಾಭಿವೃದ್ಧಿ ಇಲಾಖೆಯಿಂದ ಪಾಲಿಕೆ ಆಯುಕ್ತರಿಗೆ ಪತ್ರ ರವಾನೆಯಾದ 4 ತಿಂಗಳಲ್ಲಿ ಮೃತ್ಯುಂಜಯ ಪಾಲಿಕೆಯಿಂದ ವರ್ಗಾವಣೆ ಆಗಿದ್ದರು. ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸರ್ವೇ ಸಾಮಾನ್ಯ. ಆದರೆ, ತಿಂಗಳು ಕಳೆಯುವುದರೊಳಗಾಗಿ ಮತ್ತೇ ಅವರನ್ನು ಮೈಸೂರು ಪಾಲಿಕೆಗೇ ಮರು ನಿಯುಕ್ತಿಗೊಳಿಸುವುದಾಗಿದ್ದರೆ ಸರ್ಕಾರ ಅವರನ್ನು ವರ್ಗಾವಣೆ ಮಾಡಿದ್ದಾದರೂ ಏಕೆ? ಎಂಬ ಪ್ರಶ್ನೆ ಪ್ರಜ್ಞಾವಂತ ನಾಗರಿಕರದ್ದಾಗಿದೆ.



ಸುಬ್ರಹ್ಮಣ್ಯಸ್ವಾಮಿ ಷಷ್ಠಿ ಹಬ್ಬದ ಪ್ರಯುಕ್ತ ಮೈಸೂರಿನ 23ನೇ ವಾರ್ಡಿನ ಸುಬ್ಬರಾಯನಕೆರೆಯ ಆವರಣದಲ್ಲಿರುವ ಪುರಾತನ ಬಾಲಸುಬ್ರಹ್ಮಣ್ಯ ದೇವಸ್ಥಾನದ ರಥೋತ್ಸವಕ್ಕೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ಕಾಂಗ್ರೆಸ್ ಮುಖಂಡ ಡಾ.ಸುಶ್ರುತ್‌ಗೌಡ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ದೇವಸ್ಥಾನದ ಸದಸ್ಯರಾದ ಕುಮಾರ್(ಭಗತ್ ಸಿಂಗ್) ರಾಜೀವ್, ಜಗದೀಶ ವಿಜಯ್, ಮಾದೇವ ಕೆಂಪರಾಜು ಕುಮಾರ್, ಶಿವಣ್ಣ, ನಾಗಣ್ಣ ನಾಗೇಶ್, ಮಂಜುನಾಥ್, ನವೀನ್ ಇತರರು ಉಪಸ್ಥಿತರಿದ್ದರು.

ಮೊಘಲರೇ ಹುಟ್ಟಿ ಬಂದರೂ ಹಿಂದುತ್ವ ಅಲುಗಾಡಿಸಲಾಗದು...!

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿರುಗೇಟು



ಬೆಂಗಳೂರು, ಡಿ. 18– ಭಾರತವನ್ನು ಹಿಂದೂ ರಾಷ್ಟ್ರವಾಗಲು ಅವಕಾಶ ನೀಡುವುದಿಲ್ಲ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿರುಗೇಟು ನೀಡಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, 'ಹಿಂದೂ ರಾಷ್ಟ್ರ ಈ ದೇಶದ ಕೋಟ್ಯಾಂತರ ಜನ ಸಂಕಲ್ಪ. ಅದಕ್ಕೆ ಅವಕಾಶ ನೀಡದಿರಲು ನೀವು ಮೊಗಲರಲ್ಲ, ಮೊಗಲರೇ ಮತ್ತೆ ಹುಟ್ಟಿ ಬಂದರೂ ಈಗ ಅದು ಸಾಧ್ಯವಿಲ್ಲ. ಭಾರತವೆಂದರೆ ಹಿಂದುತ್ವ, ಹಿಂದುತ್ವವೆಂದರೆ ಬಹುತ್ವ ವಿವಿಧತೆಯನ್ನು ತನ್ನ ಒಡಲಲ್ಲಿರಿಸಿಕೊಂಡು ಏಕತೆಯನ್ನು ಮೆರೆಯುತ್ತಿರುವು ದುದೇ ಭಾರತೀಯತೆ. ಭಾರತೀಯ ಸಂಸ್ಕೃತಿಯನ್ನು ನಾಶಪಡಿಸಲು ಶತಶತಮಾನಗಳಿಂದಲೂ ಹೊರಗಿನವರ ಆಕ್ರಮಣ ನಡೆಯುತ್ತಲೇ ಇದೆ. ಮೊಗಲರ ನಿರಂತರ ದಾಳಿಗೆ ತುತ್ತಾಗಿ ಅಸಂಖ್ಯಾತ ಹಿಂದೂ ದೇವಾಲಯಗಳು ಭಗ್ನಗೊಂಡಿರುವುದಕ್ಕೆ, ನಾಮಾವಶೇಷಗೊಂಡಿರುವುದಕ್ಕೆ ಇಂದಿಗೂ ಸಾಕ್ಷಿ, ಪುರಾವೆಗಳು ನಮ್ಮ ಕಣ್ಣಿಗೆ ರಾಚುತ್ತಿವೆ.

ಎಷ್ಟೇ ದುರಾಕ್ರಮಣಗಳು ನಡೆದರೂ ಬಹುತ್ವ ಸಂಸ್ಕೃತಿಯ ಹಿಂದುತ್ವದ ಭಾರತ ಗಟ್ಟಿಯಾಗಿ ಉಳಿದಿದೆ. ಸ್ವಾತಂತ್ರ್ಯ ನಂತರವೂ ಮತ ಬ್ಯಾಂಕ್ ರಾಜಕಾರಣಕ್ಕಾಗಿ ಹಿಂದುತ್ವವನ್ನು ದಮನ ಮಾಡಲು ಕುಮ್ಮಕ್ಕು ನೀಡುತ್ತಿದ್ದ ಕಾಂಗ್ರೆಸ್ ಕುತಂತ್ರವನ್ನು ಬಗ್ಗು ಬಡಿಯಲೆಂದೇ ಭಾರತೀಯ ಜನತಾ ಪಕ್ಷ ಜನ್ಮ ತಾಳಿದ್ದು, ಕಾಂಗ್ರೆಸ್‌ನ ಸ್ವಾರ್ಥ ಹಾಗೂ ನಿರಂಕುಶ ಪ್ರಭುತ್ವದ ಆಡಳಿತವನ್ನು ಮೂಲೆಗಟ್ಟಿ ದೇಶದ ಜನರು ಇಂದು ಬಿಜೆಪಿಯನ್ನು ಹೆಮ್ಮರವಾಗಿ ಬೆಳೆಸಿ ಅದರ ನೆರಳಿನಲ್ಲಿ ಅಭಿವೃದ್ಧಿಯ ಭಾರತವನ್ನು ಕಾಣುತ್ತಿದ್ದಾರೆ. ರಾಜಕೀಯ ಭೂಪಟದಲ್ಲಿ ಅಳಿಸಿ ಹೋಗುತ್ತಿರುವ ಕಾಂಗ್ರೆಸ್ ಅಸ್ತಿತ್ವವನ್ನು ಮೊದಲು ಉಳಿಸಿಕೊಳ್ಳಿ, ಆನಂತರ ರಾಷ್ಟ್ರದ ಕುರಿತು ಮಾತನಾಡುವಿರಂತೆ.

ಪೂಜ್ಯ ಪೇಜಾವರ ಶ್ರೀಗಳ ಹಿಂದೂ ರಾಷ್ಟ್ರದ ಪ್ರತಿಪಾದನೆ ಇನ್ನೊಬ್ಬರನ್ನು ಹೊರಗಟ್ಟುವುದಲ್ಲ ಬಲವಂತ ಮತಾಂತರವಲ್ಲ. ಎಲ್ಲರನ್ನೂ ಒಳಗೊಂಡ ನೈಜ ಭಾರತೀಯತೆಯನ್ನು ರಕ್ಷಿಸುವುದೇ ಆಗಿದೆ ಎಂದು ವಿಜಯೇಂದ್ರ ಟ್ವೀಟ್ ಮಾಡಿದ್ದಾರೆ.

ಇತ್ತೀಚೆಗೆ ಗದಗದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶ್ರೀರಾಮ ಮಂದಿರ ಉಳಿಯಬೇಕೆಂದರೆ ಹಿಂದೂ ರಾಷ್ಟ್ರವಾಗಬೇಕು ಎಂಬ ಪೇಜಾವರ ಶ್ರೀಗಳ ಹೇಳಿಕೆ ಸರಿಯಲ್ಲ. ಅದು ಬಿಜೆಪಿಯ ಸಿದ್ಧಾಂತ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ. ನಮ್ಮ ದೇಶದಲ್ಲಿ ಬರೀ ಹಿಂದೂಗಳಿಲ್ಲ. ಕ್ರಿಶ್ಚಿಯನ್, ಮುಸ್ಲಿಂ, ಜೈನರು, ಬೌದ್ಧರು, ಸಿಖ್ಖರು ಇದ್ದಾರೆ. ಭಾರತ ಬಹುತ್ವದ ದೇಶ. ಬರೀ ಹಿಂದೂಗಳ ರಾಷ್ಟ್ರ ಮಾಡಿದರೆ ಆಗುವುದಿಲ್ಲ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದರು.



ಇಎಸ್ಐ ನೌಕರರ ಬಿಲ್ ಬಾಕಿ ಸಂಬಂಧ ಕರ್ನಾಟಕದ ಖಾಸಗಿ ಆಸ್ಪತ್ರೆಗಳ ನಿಯೋಗವು ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ಸೋಮವಾರ ನವದೆಹಲಿಯಲ್ಲಿ ಇಎಸ್ಐ ಡಿಜಿ ಡಾ.ರಾಜೇಂದ್ರಕುಮಾರ್ ಅವರಿಗೆ ಮನವಿ ಸಲ್ಲಿಸಿತು. ಈ ವೇಳೆ ಸಂಸದ ಪ್ರತಾಪ್ ಸಿಂಹ ಖಾಸಗಿ ಆಸ್ಪತ್ರೆಗಳು ಇಎಸ್ಐ ವ್ಯಾಪ್ತಿಗೆ ಬರುವ ನೌಕರರಿಗೆ ನೀಡಿರುವ ಚಿಕಿತ್ಸೆ ಬಾಕಿ ಬಿಲ್ ಬಹುದಿನಗಳಿಂದ ಪಾವತಿಯಾಗಿಲ್ಲ. ಅವುಗಳನ್ನು ಶೀಘ್ರ ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಚಿತ್ರದಲ್ಲಿ ರಾಜ್ಯ ನಿಯೋಗದಲ್ಲಿದ್ದ ಡಾ.ಎಸ್.ಪಿ. ಯೋಗಣ್ಣ ಸೇರಿದಂತೆ ಇನ್ನಿತರರನ್ನು ಕಾಣಬಹುದು.

ಲಿಂಗಾಯತ ಉಪಪಂಗಡಗಳ ಒಗ್ಗೂಡಿಸಲು ಸಿಎಂಗೆ ಮನವಿ



ಬೆಂಗಳೂರು,ಡಿ.18(ಕೆಎಂಶಿ)–ಲಿಂಗಾಯತ ಸಮುದಾಯದ ಎಲ್ಲಾ ಉಪಪಂಗಡಗಳನ್ನು ಒಂದೇ ಹೆಸರಿನಡಿ ತರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದೇವೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಜಾತಿಗಣತಿಗೆ ನಮ್ಮ ವಿರೋಧ ಇಲ್ಲ. ಆದರೆ ವೀರಶೈವ/ಲಿಂಗಾಯತ ಸಮುದಾಯವನ್ನು ವಿಂಗಡಿಸುವುದು ಸರಿಯಲ್ಲ. ನಮ್ಮಲ್ಲಿ 40 ಪ್ರಮುಖ ಉಪಜಾತಿಗಳಿವೆ, ಅವುಗಳನ್ನು ಪ್ರತ್ಯೇಕಿಸಲಾಗುತ್ತಿದೆ ಎಂಬ ಭಯ ನಮ್ಮ ಸಮುದಾಯದಲ್ಲಿ ಕಾಡುತ್ತಿದೆ. ಅದಕ್ಕಾಗಿಯೇ ನಾವೆಲ್ಲರೂ ಒಟ್ಟಿಗೆ ಸೇರಿ ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದರು. ಕಾಂತರಾಜ್ ನೇತೃತ್ವದಲ್ಲಿ ಆರ್ಥಿಕ, ಸಾಮಾಜಿಕ ಸಮೀಕ್ಷೆಯೇ ಹೊರತು ಜಾತಿಗಣತಿ ಅಲ್ಲ, ಅದನ್ನು ಮಾಡಲು ನಮಗೆ ಅಧಿಕಾರವೂ ಇಲ್ಲ. ಹಾಗಾಗಿ ಒಂದೇ ಹೆಸರಿನಡಿ ನಮ್ಮ ಸಮುದಾಯವನ್ನು ತರಬೇಕು. ಜಾತಿಗಣತಿಗೆ ಆಗ್ರಹಿಸಿ ಕೆಲವು ಸಮುದಾಯಗಳ ಒತ್ತಾಯಕ್ಕೆ ನಮ್ಮ ವಿರೋಧವಿಲ್ಲ, ನಾವು ನಮ್ಮ ಹಕ್ಕನ್ನು ಕೇಳುತ್ತಿದ್ದೇವೆ ಅಷ್ಟೆ ಎಂದರು. ವರದಿ ಬಗ್ಗೆ ಸಮುದಾಯಕ್ಕೆ ಆತಂಕವಿದೆ, ಇದನ್ನು ನಿವಾರಿಸುವಂತೆಯೂ ಕೋರಿದ್ದೇವೆ. ಈ ವರದಿ ಪ್ರಕಟಗೊಂಡರೂ ಮುಂಬರುವ ಚುನಾವಣೆಗಳ ಮೇಲೆ ಪ್ರಭಾವ ಬೀರುವುದಿಲ್ಲ ಎಂದರು.

ಡಿ.22, ಕಿದ್ವಾಯಿ ಕ್ಯಾನ್ಸರ್ ಘಟಕಕ್ಕೆ ಮುಖ್ಯಮಂತ್ರಿ ಶಂಕುಸ್ಥಾಪನೆ ಸಾಧ್ಯತೆ

ಸ್ಥಳ ಪರಿಶೀಲಿಸಿದ ಶಾಸಕ ಕೆ. ಹರೀಶ್‌ಗೌಡ

ಮೈಸೂರು, ಡಿ.18(ಎಸ್‌ಬಿಡಿ)– ಮೈಸೂರಿನ ಕೆಆರ್‌ಎಸ್ ರಸ್ತೆ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರಕ್ಕೆ ಗುರುತಿಸಿರುವ ಸ್ಥಳವನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಸೋಮವಾರ ಪರಿಶೀಲಿಸಿದರು.



ಕಿದ್ವಾಯಿ ಸ್ಮಾರಕ ಗಂಥಿ ಫೆರಿಫೆರಲ್ ಕ್ಯಾನ್ಸರ್ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಡಿ.22ರಂದು ಶಂಕುಸ್ಥಾಪನೆ ನೆರವೇರಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಶಾಸಕರು ಸ್ಥಳ ಪರಿಶೀಲನೆ ನಡೆಸಿ, ಸಮರ್ಪಕ ಸಿದ್ಧತೆಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಬೆಂಗಳೂರು ಕಿದ್ವಾಯಿ ಸಂಸ್ಥೆಯ ಡೀನ್ ಡಾ.ಲೋಕೇಶ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕದ ಎಇಇ ದೊರೆಸ್ವಾಮಿ ಸೇರಿದಂತೆ ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ಹಾಜರಿದ್ದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್ ಕಳೆದ ಅಕ್ಟೋಬರ್ 27ರಂದು ಮೈಸೂರಿಗೆ ಭೇಟಿ ನೀಡಿದ್ದ ವೇಳೆ, ಪಿಕೆಟಿಬಿ ಆವರಣದ ಐದು ಎಕರೆ ಜಾಗದಲ್ಲಿ ಕ್ಯಾನ್ಸರ್ ಆಸ್ಪತ್ರೆ ಘಟಕ ಸ್ಥಾಪನೆಗೆ ಇನ್ನೊಂದು ತಿಂಗಳಲ್ಲಿ ಅಡಿಗಲ್ಲು ಹಾಕುವುದಾಗಿ ಭರವಸೆ ನೀಡಿದ್ದರು. ಇದೀಗ ಮೈಸೂರು ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿಗಳು ಡಿ.22ರಂದು ವಿವಿಧ ಕಾರ್ಯಕ್ರಮಗಳ ನಡುವೆ ಕ್ಯಾನ್ಸರ್ ಆಸ್ಪತ್ರೆ ಶಂಕುಸ್ಥಾಪನೆಯನ್ನೂ ನೆರವೇರಿಸಲಿದ್ದಾರೆ ಎನ್ನಲಾಗಿದ್ದು, ದಿನಾಂಕ ಮತ್ತು ಸಮಯ ಅಧಿಕೃತವಾಗಿ ನಿಗದಿಯಾಗಬೇಕಿದೆ.

ಮೈಸೂರು ವಿವಿ ತಾತ್ಕಾಲಿಕ ನೌಕರರ ಕಾಯಂಗೆ ಆಗ್ರಹಿಸಿ ಏಕಾಂಗಿ ಸತ್ಯಾಗ್ರಹ

ಮೈಸೂರು, ಡಿ.18 (ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಿ, ವಿದ್ಯಾರ್ಥಿಗಳ ಎಲ್ಲಾ ಶುಲ್ಕವನ್ನು ಕಡಿತಗೊಳಿಸಬೇಕೆಂದು ಒತ್ತಾಯಿಸಿ ಮಾನಸಗಂಗೋತ್ರಿಯ ಸಂಸ್ಕೃತ ವಿಭಾಗದ ಅತಿಥಿ ಉಪನ್ಯಾಸಕ ಡಾ.ರಾಚೋಟಿ ದೇವರು ಅವರು ಏಕಾಂಗಿಯಾಗಿ ಸಂಸ್ಕೃತ ವಿಭಾಗದ ಮುಂಭಾಗ ಸತ್ಯಾಗ್ರಹ ನಡೆಸಿದರು.

ಡಾ.ರಾಚೋಟಿ ದೇವರು ಗದಗ ಜಿಲ್ಲೆಯ ಮಠವೊಂದರ ಸ್ವಾಮೀಜಿಯಾಗಿದ್ದಾರೆ. 7 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಏಕಾಂಗಿಯಾಗಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದ್ದಾರೆ. ವಿಶ್ವವಿದ್ಯಾನಿಲಯದ ಮುಖ್ಯ ಉದ್ದೇಶ ಜ್ಞಾನಾರ್ಜನೆ ಮತ್ತು ಸಂಶೋಧನೆಯಾಗಬೇಕು. ಆದರೆ, ಇಂದು ವಿವಿಗಳು ಕೇವಲ ಪ್ರಮಾಣ ಪತ್ರ ನೀಡುವ ಕೇಂದ್ರಗಳಾಗುತ್ತಿರುವುದು ವಿಷಾದನೀಯ. ಅಲ್ಲದೆ ಜ್ಞಾನಾರ್ಜನೆ ಹಣವಂತರ ಸ್ವತ್ತಾಗಿ, ಬಡವರಿಗೆ ವಿದ್ಯೆ ಕನಸಾಗುವ ಸಂದರ್ಭ ಎದುರಾಗಿದೆ. ಇದಕ್ಕೆ ಮುಖ್ಯ ಕಾರಣ ವಿವಿಗಳ ಸುತ್ತೋಲೆಗಳು. ಸದ್ಯದ ಸ್ಥಿತಿಯಲ್ಲಿ ವಿವಿಗಳಿಗೆ ಹಣ ಸಂಪಾದನೆ ಮಾಡುವ ವಿಭಾಗಗಳು ಮಾತ್ರ ಬೇಕು. ಆದಾಯ ಬಾರದಿರುವ ವಿಭಾಗಗಳನ್ನು ಮುಚ್ಚುವ ದುರುದ್ದೇಶದಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಲಾಗುತ್ತಿದೆ. ಅಲ್ಲದೆ ಶುಲ್ಕ ಹೆಚ್ಚಳ ಮಾಡುತ್ತಿದ್ದು, ವಿದ್ಯಾರ್ಥಿ ವೇತನವನ್ನೂ ನೀಡುತ್ತಿಲ್ಲ. ಉಪನ್ಯಾಸಕರ ವೇತನವನ್ನೂ ಕಡಿತ ಮಾಡುತ್ತಿದ್ದಾರೆ. ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಸಿಗಬೇಕಾದರೆ ಶುಲ್ಕ ಕಡಿತಗೊಳಿಸಬೇಕು. ಎಲ್ಲ ಉದ್ಯೋಗಿಗಳನ್ನು ಕಾಯಂಗೊಳಿಸಿ ಭ್ರಷ್ಟಾಚಾರ ಮುಕ್ತ ವಿಶ್ವವಿದ್ಯಾಲಯವನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಡಿ.22ರಂದು ಮೈಸೂರು ಅರಮನೆ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ



ಮೈಸೂರು, ಡಿ.18– ಮೈಸೂರು ಅರಮನೆ ಮಂಡಳಿ ವತಿಯಿಂದ ಆಯೋಜಿಸಲಾಗಿರುವ ಅರಮನೆ ಫಲಪುಷ್ಪ ಪ್ರದರ್ಶನ–2023ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಡಿ.22ರಂದು ಸಂಜೆ 5.30ಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ.

ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಐಸಿಸ್ ಸಂಪರ್ಕ ಜಾಲ: ಕರ್ನಾಟಕ ಸೇರಿ 4 ರಾಜ್ಯಗಳ 19 ಕಡೆಗಳಲ್ಲಿ ಎನ್‌ಐಎ ದಾಳಿ

ನವದೆಹಲಿ/ಬೆಂಗಳೂರು: ದೇಶಾದ್ಯಂತ ಇತ್ತೀಚೆಗೆ ರಾಷ್ಟ್ರೀಯ ತನಿಖಾ ದಳ ದಾಳಿ ಮುಂದುವರೆದಿದೆ. ಕೆಲ ದಿನಗಳ ಹಿಂದಷ್ಟೇ ಬೆಂಗಳೂರು ಸೇರಿದಂತೆ ಮಹಾರಾಷ್ಟ್ರದ 44 ಕಡೆಗಳಲ್ಲಿ ದಾಳಿ ನಡೆಸಿದ್ದ ಎನ್‌ಐಎ ವಾರದ ಆರಂಭದಲ್ಲಿಯೇ ಬೇಟೆ ಮುಂದುವರಿಸಿದೆ.



ಇಂದು ಕೂಡ ಕರ್ನಾಟಕದ 11 ಭಾಗಗಳು ಸೇರಿದಂತೆ 4 ರಾಜ್ಯಗಳ 19 ಕಡೆಗಳಲ್ಲಿ ಎನ್‌ಐಎ ದಾಳಿ ನಡೆಸಿದೆ. ಇಸ್ಲಾಮಿಕ್ ಸ್ಟೇಟ್ ಆಫ್ ಸಿರಿಯಾ ಮತ್ತು ಇರಾಕ್ (ISIS) ಜಾಲದೊಂದಿಗೆ ಸಂಪರ್ಕ ಹೊಂದಿರುವ ಮಾಹಿತಿ ಆಧಾರದ ಮೇಲೆ ಮೂಲಭೂತವಾದಿ ಜಿಹಾದಿ ಸಂಪರ್ಕ ಜಾಲವನ್ನು ಭೇದಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದಲ್ಲಿ ಕೇಂದ್ರ ಉಗ್ರಗಾಮಿ ನಿಗ್ರಹ ಪಡೆ ಬೆಂಗಳೂರು, ಬಳ್ಳಾರಿಯ ಕೆಲವು ಸ್ಥಳಗಳಲ್ಲಿ ದಾಳಿ ನಡೆಸಿ ಶೋಧ ನಡೆಸಿದೆ. ಜಾರ್ಖಂಡ್‌ನ 4 ಕಡೆಗಳಲ್ಲಿ, ಮಹಾರಾಷ್ಟ್ರದ ಮೂರು ಕಡೆ ಮತ್ತು ದೆಹಲಿಯಲ್ಲಿ ಒಂದು ಕಡೆ ದಾಳಿ ಮಾಡಲಾಗಿದ್ದು ಈ ವೇಳೆ ಲೆಕ್ಕಕ್ಕೆ ಸಿಗದ ನಗದು, ಡಿಜಿಟಲ್ ಸಾಧನಗಳು, ಸೂಕ್ಷ್ಮ ವಸ್ತುಗಳು ಸೇರಿದಂತೆ ಹಲವು ದಾಖಲೆ ಗಳನ್ನು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ದಾಳಿಯಲ್ಲಿ ಏನೇನು ಸಿಕ್ಕಿದೆ ಎಂಬ ಬಗ್ಗೆ ಅಧಿಕೃತ ಮಾಹಿತಿ ಸಿಗಬೇಕಿದೆ.

ಬೆಂಗಳೂರಿನ ಶಿವಾಜಿನಗರ, ಪುಲಿಕೇಶಿ ನಗರ, ಸುಲ್ತಾನ್‌ಪಾಳ್ಯ, ಆರ್.ಟಿ.ನಗರ, ಜೆ.ಸಿ.ನಗರದ ಚಿನ್ನಪ್ಪ ಗಾರ್ಡನ್ ಸೇರಿದಂತೆ ನಗರದ 20ಕ್ಕೂ ಹೆಚ್ಚು ಕಡೆಗಳಲ್ಲಿ ಹಾಗೂ ಬಳ್ಳಾರಿಯಲ್ಲಿ 9 ಕಡೆಗಳಲ್ಲಿ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಅದರಂತೆ, ಬೆಂಗಳೂರಿನ ಬ್ಯಾಡರಹಳ್ಳಿಯಲ್ಲಿ ಶಮಿವುಲ್ಲಾ ವಾಸವಿದ್ದ ಬಾಡಿಗೆ ಮನೆ ಮೇಲೆ ದಾಳಿ ನಡೆಸಿದಾಗ ಸ್ಫೋಟಕ ತಯಾರಿಕೆಗೆ ಬಳಸುವ 7 ಕೆಜಿ ಸೋಡಿಯಂ ನೈಟ್ರೇಟ್ ಪತ್ತೆಯಾಗಿದೆ. ದಾಳಿ ವೇಳೆ ಶಮಿವುಲ್ಲಾ, ಸೂಫಿಯಾನ್ ಆಗಿ ಮತಾಂತರಗೊಂಡಿದ್ದ ನಿಖಿಲ್, ನಿಷೇಧಿತ ಪಿಎಫ್‌ಐ ಬಳ್ಳಾರಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಸುಲೇಮಾನ್, ಅಜಾಜ್ ಅಹ್ಮದ್, ತಬ್ರೇಜ್, ಮುಜಾಮಿಲ್ ಎಂಬುವರನ್ನು ವಶಕ್ಕೆ ಪಡೆದಿದ್ದಾರೆ.

ಭಾರತದಲ್ಲಿ ಇದುವರೆಗೆ ಐಸಿಸ್ ಜಾಲದಲ್ಲಿ ನಡೆದ ತನಿಖೆಯಿಂದ ಈ ಅಂಶ ಬೆಳಕಿಗೆ ಬಂದಿದ್ದು, ಕೆಲವು ವಿದೇಶಿಯರು ಮುಸ್ಲಿಂ ಯುವಕರನ್ನು ಜಿಹಾದಿಗಳನ್ನಾಗಿ ಪರಿವರ್ತಿಸಲು ನೋಡುತ್ತಿರುವುದು, ತಮ್ಮ ಪ್ರದೇಶಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಿ ಅಸ್ಥಿರತೆಯ ಭಾವವನ್ನು ಸೃಷ್ಟಿಸಲು ನೋಡುತ್ತಿರುವುದು ಬೆಳಕಿಗೆ ಬಂದಿದೆ.

ಕಳೆದ ವಾರ ಬೆಂಗಳೂರಿನ ವಿವಿಧೆಡೆ ಎನ್‌ಐಎ ದಾಳಿ ನಡೆಸಿತ್ತು. ಅಂದು ಬೆಂಗಳೂರಿನಲ್ಲಿ ಶಂಕಿತ ಉಗ್ರ ಅಲಿ ಅಬ್ಬಾಸ್‌ನನ್ನು ಬಂಧಿಸಲಾಗಿತ್ತು. ಲಷ್ಕರ್–ಎ–ತೊಯ್ಬಾದಿಂದ ಕೆಲವು ಕೈದಿಗಳ ಆಮೂಲಾಗ್ರೀಕರಣಕ್ಕೆ ಸಂಬಂಧಿಸಿದ ಪ್ರಕರಣ (ಎಲ್‌ಇಟಿ) ಭಯೋತ್ಪಾದಕ ಮತ್ತು ಜೀವಾವಧಿ ಅಪರಾಧಿ–ಟಿ ನಜೀರ್ ಪ್ರಕರಣದಲ್ಲಿ ಬಂಧಿಸಲಾಯಿತು. ನಜೀರ್ 2008ರ ಸರಣಿ ಸ್ಫೋಟಗಳಲ್ಲಿ ಭಾಗಿಯಾಗಿದ್ದು, ಪ್ರಸ್ತುತ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ. ಕಳೆದ ವಾರ ಮಹಾರಾಷ್ಟ್ರದ 40 ಸ್ಥಳಗಳಲ್ಲಿ 15 ಮಂದಿಯನ್ನು ಬಂಧಿಸಿತ್ತು. ಇವರಲ್ಲಿ ಒಬ್ಬ ಬಂಧಿತ ಆರೋಪಿ ಐಸಿಸ್ ಘಟಕ ನಾಯಕ ಎಂದು ಹೇಳಲಾಗಿದೆ. ಈತ ಮೂಲಭೂತವಾದಿಗಳನ್ನಾಗಿ ಯುವಕರ ಮನಪರಿವರ್ತಿಸಿ ಭಯೋತ್ಪಾದಕ ಸಂಘಟನೆಗೆ ನೇಮಿಸುವವರಲ್ಲಿ ಪ್ರಮುಖ ಎಂದು ಹೇಳಲಾಗುತ್ತಿದೆ.

ನಾಳೆ ಮೈಸೂರಲ್ಲಿ ಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಡಿ.18 (ಎಂಟಿವೈ)–ಮೈಸೂರಿನ ಪುರಭವನದಲ್ಲಿ ಡಿ.20ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಪೌರಕಾರ್ಮಿಕರಿಗಾಗಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಸಮಾಜ ಸೇವಕ ಹಾಗೂ ವಿಷ್ಣುಮೂರ್ತಿ ರೇಖಾಮೂರ್ತಿ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಡಾ.ಸುಶ್ರುತಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಷ್ಣುಮೂರ್ತಿ ರೇಖಾಮೂರ್ತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದ್ದು, ಮೈಸೂರಿನ ಸ್ವಚ್ಛತಾ ರೂವಾರಿಗಳಾದ ಪೌರಕಾರ್ಮಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಶಿಬಿರ ನಡೆಸಲಾಗುತ್ತಿದೆ. ಶಿಬಿರಕ್ಕೆ ಶಾಸಕ ಕೆ.ಹರೀಶ್ ಗೌಡ ಚಾಲನೆ ನೀಡಲಿದ್ದಾರೆ. ಪೌರಕಾರ್ಮಿಕರು ತಮ್ಮ ಆರೋಗ್ಯದ ಬಗ್ಗೆ ಗಮನ ಹರಿಸುತ್ತಿಲ್ಲ. ಹೀಗಾಗಿ ಇವರಿಗೆ ಶುಗರ್, ಬಿಪಿ ಹಾಗೂ ಇನ್ನಿತರ ವಿಶೇಷ ಆರೋಗ್ಯ ತಪಾಸಣೆ ನಡೆಸಿ, ಒಂದು ವೇಳೆ ಅನಾರೋಗ್ಯ ಕಂಡು ಬಂದಲ್ಲಿ ಸಲಹೆ ಸೂಚನೆ ನೀಡಲಾಗುವುದು. ನಗರ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುವ ಎಲ್ಲಾ ಪೌರಕಾರ್ಮಿಕರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿದರು.



ಸಂಸದ ಪ್ರತಾಪ ಸಿಂಹ ಸ್ಪಷ್ಟನೆ ನೀಡಬೇಕು: ಸಂಸತ್ ಭವನದಲ್ಲಿ ನಡೆದ ಹೊಗೆ ಬಾಂಬ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಾಸ್ ನೀಡಿದ ಸಂಸದ ಪ್ರತಾಪ ಸಿಂಹ ಅವರು ಪ್ರತಿಕ್ರಿಯೆ ನೀಡದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಪ್ರಕರಣ ನಡೆದ 6 ದಿನ ಕಳೆದರೂ ಸಂಬಂಧ ಪಟ್ಟ ಕೇಂದ್ರ ಸಚಿವರು ಹಾಗೂ ಆರೋಪಿಗಳಿಗೆ ಪಾಸ್ ನೀಡಿದ ಸಂಸದರು ಸ್ಪಷ್ಟನೆ ನೀಡಿಲ್ಲ. ದೇಶದಾದ್ಯಂತ ಕಾಂಗ್ರೆಸ್ ವತಿಯಿಂದ ನಡೆದ ಪ್ರತಿಭಟನೆಯಿಂದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘಟನೆಗೆ ಪ್ರತಿಕ್ರಿಯೆ ನೀಡಿದ್ದಾರೆ. ಇದನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಸಂಬಂಧಪಟ್ಟ ಸಚಿವರು ಏನು ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಕಾಡುತ್ತಿದೆ ಎಂದು ತಿಳಿಸಿದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಯೋಜನೆಗಳನ್ನು ನಾನೇ ಅನುಷ್ಠಾನಗೊಳಿಸಿದ್ದು ಎಂದು ಮೈಕ್ ಸಿಕ್ಕಿದ ಕಡೆ ಭಾಷಣ ಮಾಡುತ್ತಾ, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಪೋಸ್ಟ್ ಮಾಡುತ್ತಿದ್ದ ಮೈಸೂರು–ಕೊಡಗು ಸಂಸದ ಪ್ರತಾಪಸಿಂಹ ಈಗ ಕಾಣೆಯಾಗಿದ್ದಾರೆ. ಎಲ್ಲರೂ ಪ್ರತಾಪ್ ಸಿಂಹ ಎಲ್ಲಿದ್ದೀರಪ್ಪಾ ಎಂದು ಕೂಗು ವಂತಾಗಿದೆ. ಘಟನೆಗೆ ಸಂಬಂಧಿಸಿದಂತೆ ಅವರು ಪ್ರತಿಕ್ರಿಯೆ ನೀಡಬೇಕು. ಪಾಸ್ ನೀಡುವ ವಿಚಾರ ನಿಮ್ಮ ಗಮನಕ್ಕೆ ಬರದಿದ್ದರೆ, ಅದು ಕಚೇರಿ ಸಿಬ್ಬಂದಿಗಳಿಂದ ತಪ್ಪಾಗಿದೆ ಎಂದು ಹೇಳಿ ದೇಶದ ಜನರ ಕ್ಷಮೆಯಾಚಿಸಬಹುದಾಗಿತ್ತು. ಆದರೆ, ಯಾವುದೇ ಹೇಳಿಕೆ ನೀಡದೆ ತಲೆ ಮರೆಸಿಕೊಂಡವರಂತೆ ಇರುವುದು ಸರಿಯಲ್ಲ. ಈ ಪ್ರಕರಣದಲ್ಲಿ ಕೇವಲ ಭದ್ರತಾ ಸಿಬ್ಬಂದಿಗಳನ್ನು ಅಮಾನತು ಮಾಡಲಾಗಿದೆ. ಆದರೆ, ಘಟನೆಗೆ ಕಾರಣರಾದವರ ವಿರುದ್ಧ ಏನನ್ನೂ ಮಾಡಿಲ್ಲ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರಾಜು, ಮಾರ್ಬಳ್ಳಿ ಕುಮಾರ್ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ ನನಗೊಂದು ತಮಟೆ ಕೊಡಿಸು, ನಾನು ಪ್ರಾಕ್ಟೀಸ್ ಮಾಡ್ತೀನಿ.
ಅಪ್ಪ : ಬೇಡ ಮಗು, ಅದು ತುಂಬಾ ಸದ್ದು ಮಾಡುತ್ತೆ. ನೀನು ಅದನ್ನು ಬಡೀತಾ ಇದ್ರೆ ನಾನು ಓದೋದು, ಟಿವಿ ನೋಡೋದು ಎಲ್ಲದಕ್ಕೂ ತೊಂದರೆ ಆಗುತ್ತೆ.
ಮಗ : ಯಾರಿಗೂ ತೊಂದರೆ ಆಗದ ಹಾಗೆ ಎಲ್ಲರೂ ಮಲಗಿಕೊಂಡ ಮೇಲೆ ನಾನು ಅದನ್ನ ಪ್ರಾಕ್ಟೀಸು ಮಾಡ್ತೀನಿ. ಸರೀನಾ...!

ಮೈಸೂರು ಮಿತ್ರ
ಮಂಗಳವಾರ, 19 ಡಿಸೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಚಿಟ್ಟೆಯ ಸೌಂದರ್ಯವನ್ನು ನಾವು ಶ್ಲಾಘಿಸುತ್ತೇವೆ. ಆದರೆ ಆ ಸೌಂದರ್ಯವನ್ನು ಪಡೆಯಲು ಅದು ಹೊಂದಿದ ರೂಪಾಂತರದ ಕಷ್ಟಗಳನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. –ಮಾಯಾ ಆ್ಯಂಗಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಡವರ ಮನೆ ಊಟ ಚೆಂದ, ಬಲ್ಲಿದರ ಮನೆ ಮಾತು ಚೆಂದ...

ನಿಮ್ಮ ಪತ್ರಗಳು

ಇಂತಹ ಅಮಾನವೀಯ ಕೃತ್ಯಗಳಿಗೆ ಕೊನೆ ಇಲ್ಲವೆ..!?


ಮಾನ್ಯರೆ,

ಶಿಕ್ಷಿತರು, ನಾಗರಿಕರೆನಿಸಿಕೊಂಡವರಿಂದಲೇ ಇಂತಹ ಅಮಾನವೀಯ ಕೃತ್ಯಗಳು ನಾಡಿನಲ್ಲಿ ಪದೇ ಪದೆ ಮರುಕಳಿಸುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಮಲಗುಂಡಿ ಸ್ವಚ್ಛಗೊಳಿಸಲು ಮಾನವರನ್ನು ಬಳಸಿಕೊಳ್ಳಬಾರದು. ಅದು ಕಾನೂನು ಬಾಹಿರವೆಂಬ ಅರಿವಿದ್ದರೂ ದಿನನಿತ್ಯ ಬೀದಿ ಬೀದಿಗಳಲ್ಲಿ ಮಲಗುಂಡಿ ಸ್ವಚ್ಛಗೊಳಿಸುವ ಕಾರ್ಯದಲ್ಲಿ ಇದೇ ಮಾನವರನ್ನು ಮತ್ತೆ ಮತ್ತೆ ಅದೇ ಕಾರ್ಯಕ್ಕೆ ಬಳಸಿಕೊಳ್ಳುತ್ತಿರುವುದು ಎಷ್ಟು ಸರಿ? ಈ ಬಗ್ಗೆ ಸಂಬಂಧಪಟ್ಟವರು ಏಕೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ? ಇಂದಿಗೂ ಅದೆಷ್ಟು ಕಡೆ ಮಲಗುಂಡಿಯನ್ನು ಸ್ವಚ್ಛಗೊಳಿಸಲೆಂದು ಮಾನವರನ್ನು ಮಲಗುಂಡಿ ಒಳಗಿಳಿಸುತ್ತಿಲ್ಲ? ಮಲಗುಂಡಿ ಸ್ವಚ್ಛಗೊಳಿಸಲೆಂದು ಒಳಗಿಳಿದ ಅದೆಷ್ಟು ಜನ ತಮ್ಮ ಪ್ರಾಣವನ್ನೇ ಬಿಟ್ಟಿಲ್ಲ..! ಇಷ್ಟಿದ್ದರೂ ಸಹ ಇಂತಹ ಹೇಯ ಕೃತ್ಯಗಳು ನಾಗರಿಕರೆನಿಸಿಕೊಂಡ ಸಮಾಜದಲ್ಲಿ ಎಗ್ಗಿಲ್ಲದೆ ಮತ್ತೆ ಮತ್ತೆ ಮರುಕಳಿಸುತ್ತಿರುವುದು ಎಷ್ಟು ಸರಿ? ಮಲಗುಂಡಿ ಸ್ವಚ್ಛಗೊಳಿಸುವ ಪ್ರಕರಣಗಳಿಗೆ ಸಂಬಂಧಿಸಿದ ಹಳೆಯ ಸಾವು ನೋವುಗಳು ಮಾಸುವ ಮುನ್ನವೆ ಇಂದು ಕೋಲಾರ ತಾಲೂಕಿನ ಮಾಲೂರಿನ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅಲ್ಲಿನ ನಾಗರಿ ಕರೆನಿಸಿಕೊಂಡ ಅನಾಗರಿಕರು ಸ್ವಚ್ಛತೆ ಹೆಸರಲ್ಲಿ ಅಲ್ಲಿನ ಪರಿಶಿಷ್ಟ ಜಾತಿಯ ಮಕ್ಕಳನ್ನು ಮಲಗುಂಡಿ ಸ್ವಚ್ಛತೆಗೆಂದು ಇಳಿಸಿರುವ ಘಟನೆ ನಿಜಕ್ಕೂ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹದ್ದು. ನಾವು ಮಂಗಳಯಾನ ಮಾಡಿ ಬೀಗಿದವರು. ಆದರೆ ಇಂದಿಗೂ ಸಹ ಮಲಗುಂಡಿ ಸ್ವಚ್ಛಗೊಳಿಸುವ ಒಂದೇ ಒಂದು ಆಧುನಿಕ ಯಂತ್ರವನ್ನು ಕಂಡು ಹಿಡಿಯಲಾಗಿಲ್ಲ ಎಂದ ಮೇಲೆ ನಾವು ಅದೆಷ್ಟು ಗ್ರಹಗಳಿಗೆ ಹೋಗಿ ಬಂದು ಬೀಗಿದರೇನು ಪ್ರಯೋಜನ? ಮಾನವ ಹಕ್ಕಿಯಂತೆ ಹಾರಬಲ್ಲ, ಮೀನಿನಂತೆ ಈಜಬಲ್ಲ ಆದರೆ ಮನುಷ್ಯ ಮನುಷ್ಯನಾಗಿ ಬದುಕುವುದನ್ನೆ ಇನ್ನೂ ಕಲಿತಿಲ್ಲ ಎಂಬುದಕ್ಕೆ ಮತ್ತೆ ಮತ್ತೆ ಮರುಕಳಿಸುವ ಇಂತಹ ಕರಾಳ ಘಟನೆಗಳೇ ಸಾಕ್ಷಿ. ಮುಂದಿನ ದಿನಗಳಲ್ಲಾದರೂ ಸಹ ನಮ್ಮ ವಿಜ್ಞಾನಿಗಳೆನಿಸಿಕೊಂಡವರು ಮಲಗುಂಡಿ ಸ್ವಚ್ಛಗೊಳಿಸಲು ಒಂದು ಅತ್ಯಾಧುನಿಕ ತಂತ್ರಜ್ಞಾನವನ್ನು ಸಿದ್ಧಪಡಿಸಿ ಆ ಮೂಲಕ ನಮ್ಮ ಮಾನವರ ಘನತೆಯ ಬದುಕಿಗೆ ನಾಂದಿಯಾಡುವಂತಾಗಲಿ. ಆಗ ನಿಜವಾಗಿಯೂ ವಿಜ್ಞಾನಿಗಳ ದೊಡ್ಡ ದೊಡ್ಡ ಉಡಾವಣೆಗಳಿಗೊಂದು ಅರ್ಥ ಬರಬಹುದು ಜೊತೆಗೆ ಇಂತಹ ಅಮಾನವೀಯ ಕೃತ್ಯಗಳಿಗೆ ತೆರೆ ಎಳೆಯಬಹುದು.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ಆದರ್ಶವಾದಿಯಾಗಿದ್ದ ವಕೀಲ ನಂಜೇಗೌಡ

ಮಾನ್ಯರೆ,



ಹಿರಿಯ ವಕೀಲರೂ, ಪ್ರಗತಿಪರ ಚಿಂತಕರೂ ಹಾಗೂ ರೈತ ಚಳವಳಿಗಳಲ್ಲಿ ಮುಂಚೂಣಿಯಲ್ಲಿದ್ದ ಆತ್ಮೀಯ ಮಿತ್ರರಾದ ಎನ್.ನಂಜೇಗೌಡರು ನಿಧನರಾಗಿರುವುದು ಮನಸ್ಸಿಗೆ ನೋವನ್ನುಂಟು ಮಾಡಿದೆ. ನನ್ನ ಹಿತ ಚಿಂತಕರೂ, ಲೇಖನಗಳ ವಿಮರ್ಶಕರೂ ಆಗಿದ್ದ ನಂಜೇಗೌಡ ಸರಳ ಜೀವಿ. ತಮ್ಮ ಮಗನ ಮದುವೆಯನ್ನು ಸರಳ ರೀತಿಯಲ್ಲಿ ಆಚರಿಸುವ ಮೂಲಕ ಅದ್ಧೂರಿ ವಿವಾಹಗಳಿಗೆ ಬೆನ್ನು ತೋರಿಸಿದ್ದ ಆದರ್ಶವಾದಿ. ಅವರ ಮಗನ ಮದುವೆಯಲ್ಲಿ ಹಾಡೊಂದನ್ನು ಹಾಡಿದ ನೆನಪು ಈಗಲೂ ಮನದಲ್ಲಿ ಹಸಿರಾಗಿದೆ. ಬಹಳ ಗಟ್ಟಿ ವ್ಯಕ್ತಿತ್ವ ಹೊಂದಿದ ನಂಜೇಗೌಡರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ರೈತ ಚಳವಳಿಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರು ನಮ್ಮ ಭ್ರಷ್ಟ ವ್ಯವಸ್ಥೆಯಿಂದಾಗಿ ಭ್ರಮ ನಿರಸನ ಹೊಂದಿದ ಹಾಗೆ ಕಾಣು ತ್ತಿದ್ದರು. ಯಾವುದೇ ಪಕ್ಷದ ಹಂಗಿಗೂ ಒಳಗಾಗದೇ, ತಮಗೆ ಸರಿ ಕಂಡದ್ದನ್ನು ಸರಿ ಎನ್ನುವುದು, ತಪ್ಪಿದ್ದರೆ ತಪ್ಪು ಎಂದು ನೇರವಾಗಿ ಹೇಳುವುದು ಅವರ ಜಾಯಮಾನವಾಗಿತ್ತು. ಇಂತಹ ಆದರ್ಶವಾದಿ ನಂಜೇಗೌಡರು ಇಂದು ನಮ್ಮೊಡನಿಲ್ಲ ಎಂಬುದು ನಿಜಕ್ಕೂ ತುಂಬಾ ಬೇಸರದ ಸಂಗತಿ. ಅವರ ಆತ್ಮಕ್ಕೆ ಸದ್ಗತಿ ಕೋರುತ್ತೇನೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಮೈಸೂರು ವಿಮಾನ ನಿಲ್ದಾಣಕ್ಕೆ 'ಒಡೆಯರ್ ವಿಮಾನ ನಿಲ್ದಾಣ' ನಾಮಕರಣ ಸೂಕ್ತ

ಮಾನ್ಯರೆ,



ಮೈಸೂರಿನ ವಿಮಾನ ನಿಲ್ದಾಣಕ್ಕೆ ಯಾರ ಹೆಸರನ್ನು ನಾಮಕರಣ ಮಾಡಬೇಕು ಎಂಬ ಗೊಂದಲದಲ್ಲಿ ಸರ್ಕಾರ ಇದೆ. ಮೊನ್ನೆ ಮುಕ್ತಾಯಗೊಂಡ ವಿಧಾನಸಭಾ ಅಧಿವೇಶನದಲ್ಲೂ ಈ ಬಗ್ಗೆ ಒಮ್ಮತದ ತೀರ್ಮಾನಗೊಳ್ಳಲು ಸಾಧ್ಯವಾಗಿಲ್ಲ.

ಹಳೆ ಮೈಸೂರು ಭಾಗಕ್ಕೆ ರಾಜಮನೆತನ ಒಡೆಯರ್ ಆಳ್ವಿಕೆಯ ಕಾಲದಲ್ಲಿ ಪ್ರಥಮ ಪ್ರಜಾಪ್ರತಿನಿಧಿ ಸಭೆ ನಡೆಸಿದ್ದು, ಸಾಮಾಜಿಕ ನ್ಯಾಯಕ್ಕಾಗಿ ಮೊದಲು ಮೀಸಲಾತಿ ಜಾರಿ ಮಾಡಿದ್ದು, ಕೆಆರ್‌ಎಸ್ ಅಣೆಕಟ್ಟು ಕಟ್ಟಲು ತಮ್ಮ ಚಿನ್ನವನ್ನು ಮಾರಿ ಅಣೆಕಟ್ಟು ನಿರ್ಮಾಣ ಮಾಡಿದ್ದು, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಅಪಾರ ಕೊಡುಗೆಗಳು, ಆರ್ಥಿಕ ಸುಧಾರಣೆಗಾಗಿ ಬ್ಯಾಂಕ್‌ಗಳ ಸ್ಥಾಪನೆ, ಹೀಗೆ ನೂರಾರು ಕೊಡುಗೆಗಳನ್ನು ನೀಡಿರುವ ಒಡೆಯರ್ ಮನೆತನವನ್ನು ಈ ಭಾಗದ ಜನರು ಮರೆಯುವಂತಿಲ್ಲ. ಈ ಕಾರಣಕ್ಕಾಗಿ ಮೈಸೂರು ವಿಮಾನ ನಿಲ್ದಾಣಕ್ಕೆ 'ಒಡೆಯರ್ ವಿಮಾನ ನಿಲ್ದಾಣ'ವೆಂದು ನಾಮಕರಣ ಮಾಡುವುದು ಸೂಕ್ತ. ಇದು ಎಲ್ಲರಿಗೂ ಒಪ್ಪುವಂತಹ ಹೆಸರು. ಇದಕ್ಕೆ ಯಾರೂ ವಿರೋಧ ವ್ಯಕ್ತಪಡಿಸುವುದಿಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಅಸಮರ್ಪಕ ಡಾಂಬರೀಕರಣ

ಮಾನ್ಯರೆ,

ಭಾರೀ ಗಾತ್ರದ ವಾಟರ್ ಪೈಪ್‌ಗಳ ಅಳವಡಿಸುವ ಸಲುವಾಗಿ ವಿ.ವಿ.ಪುರಂನಿಂದ ಗೋಕುಲಂನ ತ್ರಿನೇತ್ರ ಸರ್ಕಲ್‌ವರೆಗೆ ಕಾಂಟೂರು ರಸ್ತೆಯನ್ನು ಅಗೆಯಲಾಗಿತ್ತು. ಆದರೆ ಹಲವು ತಿಂಗಳು ಧೂಳುಮಯ ಪರಿಸ್ಥಿತಿ ಉಂಟು ಮಾಡಿದ್ದಲ್ಲದೆ ಕೊನೆಗೆ ಡಾಂಬರೀಕರಣ ಶಾಸ್ತ್ರ ಮುಗಿಸಿದ್ದಾರೆ. ಆದರೆ, ಮಾಡಿರುವ ಡಾಂಬರೀಕರಣ ಅಸಮರ್ಪಕವಾಗಿದ್ದು ಹಾಗೂ ಗುಣಮಟ್ಟದಿಂದ ಕೂಡಿಲ್ಲ. ಯಾವ ಪುಣ್ಯಾತ್ಮ ಇಂಜಿನಿಯರ್ ಇದರ ಉಸ್ತುವಾರಿ ಹೊತ್ತಿದ್ದಾರೋ ಕಾಣೆ. ವಾಹನ ಚಾಲನೆ ಮಾಡುವವರಿಗೆ ಒಂದು ರೀತಿಯ ಕಸಿವಿಸಿ ಉಂಟಾಗುವಂತಿದೆ. ಪಟ್ಟೆ ಪಟ್ಟೆಯಂತೆ ಮಾಡಿರುವ ಡಾಂಬರೀಕರಣದಿಂದಾಗಿ ದ್ವಿಚಕ್ರ ವಾಹನ ಸವಾರರು ಸರ್ಕಸ್ ಮಾಡಬೇಕಾಗಿದೆ. ಈ ಕೂಡಲೇ ಸಮರ್ಪಕ ರೀತಿಯಲ್ಲಿ ಡಾಂಬರೀಕರಣ ಮಾಡಲಿ ಎಂಬುದು ನಮ್ಮ ಆಗ್ರಹ. –ನಾಗೇಶ್, ಗೋಕುಲಂ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಎಲ್ಲರ ಮಾತು ಮುತ್ತಾಗಲ್ಲ, ಎಲ್ಲಾ ನಕ್ಷತ್ರಗಳು ನಾವಾಗಲ್ಲ



ಈ ಬದುಕು ವೈವಿಧ್ಯಮಯ, ನಿತ್ಯನೂತನ, ನಾವೂ ಕೂಡ ಗುಪ್ತರ ಸುವರ್ಣ ಯುಗದಲ್ಲಿ ಹುಟ್ಟಿದ್ದಿದ್ದರೆ ಚಿನ್ನದ ನಾಣ್ಯಗಳನ್ನು ಹುಣಸೆಪಚ್ಚಿಯಂತೆ ಚೆಡ್ಡಿ ಜೇಬಿನಲ್ಲಿ ತುಂಬಿಕೊಂಡು ಅಡ್ಡಾಡಬಹುದಿತ್ತು ಎಂಬುದು ಭ್ರಮೆ. ಹರಿದ ಕಾಗದದ ನೋಟನ್ನು ಬ್ಯಾಂಕಿನಲ್ಲಿ ಎಕ್ಸ್‌ಛೇಂಜ್ ಮಾಡಿಸಲು ಕ್ಯೂ ನಿಂತಿರುವುದು ವಸ್ತುಸ್ಥಿತಿ. ಅದೇ ನಮ್ಮ ಸ್ಥಿತಿಪ್ರಜ್ಞೆ. ಭ್ರಮೆ ಸುಖ ಕೊಡುತ್ತದೆ, ಸ್ಥಿತಿಪ್ರಜ್ಞೆ ಎಚ್ಚರ ಕಲಿಸುತ್ತದೆ. ಸದಾ ಸ್ಥಿತಿ ಪ್ರಜ್ಞೆಯಲ್ಲಿದ್ದವನಿಗೆ ಕಿಲಾಡಿತನ ಅವನ ಐಡೆಂಟಿಟಿಗೆ ಶ್ರಾಣೆ ಹಿಡಿದು ಅವನು ಬಯಸಿದ್ದನ್ನು ಕಲ್ಪಿಸುತ್ತದೆ. ಪಾಪ ವಾಸ್ತವದ ಕಟುಸತ್ಯ ಗೊತ್ತಿರದ ಅಮಾಯಕ ಅದೆಷ್ಟೇ ದುಡಿದರೂ, ಅದೆಷ್ಟೇ ಪ್ರಾಮಾಣಿಕವಾಗಿ ತನ್ನನ್ನು ತಾನು ಡೆಕೊರೇಟ್ ಮಾಡಿಕೊಂಡರೂ ಮೈತುಂಬುವುದಿಲ್ಲ. ಮಾಡಿದ ಕೆಲಸ ಕಾಳು ಕಟ್ಟುವುದಿಲ್ಲ.

ಯಾರು ಎಷ್ಟೇ ಶಂಖ ಊದಿದರೂ ವ್ಯವಸ್ಥೆ ಬದಲಾಗುವುದಿಲ್ಲ. ಅದು ಬದಲಾದರೂ ದನಿ ಇಲ್ಲದವರ ಪರ ನಿಲ್ಲುವುದಿಲ್ಲ. ಮನುಷ್ಯ ವ್ಯವಸ್ಥೆಯ ವಾಸ್ತವದ ಸುಡು ಬೇಸಿಗೆಯಲ್ಲಿ ಬೆಂದು ಬೆಂಡಾದ ಮೇಲೆಯೇ ಅವನು ವ್ಯವಸ್ಥೆಯ ವಿರುದ್ಧ ಮೊಂಡಾಗುವುದು. ಅಂದರೆ ಸರತಿಯ ಸಾಲಿನಲ್ಲಿ ನಿಂತ ನಮಗೆ ವ್ಯವಸ್ಥೆಯ ವಾಸ್ತವ ಕಾಣುತ್ತಿರುತ್ತದೆ. ಹೀಗೆ ಕಂಡ ನಮ್ಮ ಹಿರಿಯರು ತಡಕೊಳ್ಳಲಾರದೆ ಗಾದೆ ಮಾತುಗಳನ್ನು ಕಟ್ಟುತ್ತಾರೆ. ಹಾಗೆ ಕಟ್ಟಿಹೋದ ಸಾವಿರ ಸಾವಿರ ಗಾದೆ ಮಾತುಗಳಲ್ಲಿ ನಮ್ಮ ಕಾಲಕ್ಕೆ ಹೆಚ್ಚು ಚಲಾವಣೆಯಲ್ಲಿರುವುದು "ಬಲವಿದ್ದವನಿಗೆ ಜಯ", "ಬಾಯಿದ್ದವನು ಬರಗಾಲದಲ್ಲೂ ಬದುಕಿದ" ಅನ್ನೋ ಮಾತು ವಶೀಕರಣ ಶಕ್ತಿಯಂತೆ ನಮ್ಮನ್ನು, ನಮ್ಮ ಭ್ರಮೆಗಳನ್ನು ನವೀಕರಿಸಿ ಕೊಲ್ಲುತ್ತದೆ. ಇವತ್ತು ಯಾರೂ ಸನ್ಯಾಸಿಗಳಲ್ಲ; ಅವರವರ ಯೋಗ್ಯತೆಗೆ ತಕ್ಕಂತೆ ಅವಕಾಶಗಳು ಬೇಕು. ಪ್ರತಿಯೊಬ್ಬರೂ ತಮ್ಮಲ್ಲಿರುವ ಪ್ರತಿಭೆಯನ್ನೋ, ಕೈಚಳಕವನ್ನೋ, ಪಾಂಡಿತ್ಯವನ್ನೋ, ತಮ್ಮಲ್ಲೇ ಇರುವ ವಿಶೇಷತೆಯನ್ನೋ, ಏನೋ ಒಂದು ಮಾಡಿ, ತನ್ನಲ್ಲಿರುವ ವಿಶೇಷ ಆಸಕ್ತಿ ಮತ್ತು ಪರಿಣತಿ ಎರಡನ್ನೂ ತೋರಿಸಿ ತಾನು ಬೇರೆಯವರಿಗಿಂತ ಹೇಗೆ ಭಿನ್ನ ಎಂಬುದನ್ನು ಸಾಬೀತುಪಡಿಸುವುದರಲ್ಲೇ ನಮ್ಮ ಛಲವಿರುತ್ತದೆ. ಉದಾಹರಣೆಗೆ– ಅದು ತಮ್ಮದೇ ಹೆಂಗಸರ ಗುಂಪಲ್ಲೇ ಬಸ್ಸಿನ ಸ್ಟೈರಿಂಗ್ ಹಿಡಿದು ಗಂಡಸರ ಸಮಕ್ಕೆ ನಾನೂ ಬಸ್ಸು ಓಡಿಸುತ್ತೇನೆ ನೋಡಿ ಅಂತ ಒಬ್ಬ ಮಹಿಳಾ ಬಸ್ ಡ್ರೈವರ್ ತನ್ನ ಅಪರೂಪದ ಆಸಕ್ತಿಯನ್ನು ಪ್ರಚುರಪಡಿಸುತ್ತಾಳೆ. ನಿನಗಿಂತ ನಾನೇನು ಕಮ್ಮಿ ಅಂತ ಮತ್ತೊಬ್ಬ ಹೆಣ್ಣು ಮಗಳು ವಿಮಾನವನ್ನೇ ಹಾರಿಸಿಬಿಡುತ್ತಾಳೆ. ಮತ್ತೊಬ್ಬಳು ಪ್ಯಾರಾಸೇಲಿಂಗ್ ಮಾಡಿ ಮಗುವೊಂದನ್ನು ಹೆಗಲ ಮೇಲೆ ಕಟ್ಟಿಕೊಂಡು ಹಕ್ಕಿಯಂತೆ ಬಾನಿನಲ್ಲಿ ಹಾರಿ ಯಶಸ್ವಿಯಾಗಿ ಕೆಳಗಿಳಿಯುತ್ತಾಳೆ. ಯುದ್ಧ ವಿಮಾನವನ್ನೇ ಓಡಿಸಿ ಗೆಲುವಿನ ನಗೆನಕ್ಕ ಹೆಣ್ಣು ಮಗಳಿಗೆ ಆಂತರಿಕ್ಷದಲ್ಲಿ ಚಂದ್ರನ ಮೇಲೆ ವಾಕಿಂಗ್ ಮಾಡಿದ ಮಹಿಳೆ ನಾನೇನು ಕಮ್ಮಿ ಎಂದು ತನ್ನ ಸಾಮರ್ಥ್ಯದ ವಿಸ್ತಾರವನ್ನು ಚರಿತ್ರಾರ್ಹವಾಗಿ ದಾಖಲಿಸುತ್ತಾಳೆ.

ಪುರುಷ ಸಂಕುಲದಲ್ಲಿ ಸಿನಿಮಾ ಹೀರೋಯಿಂದ ಹಿಡಿದು ಆಡಳಿತದ ಚುಕ್ಕಾಣಿಯ ತನಕ ಎಲ್ಲಾ ಗಂಡಸರು ತಮ್ಮ ತಮ್ಮ ಶ್ರಮದ ಸಾಧ್ಯತೆಗಳನ್ನು ಹೊಟ್ಟೆ ಪಾಡಿಗೆ ದುಡಿಸಿಕೊಂಡರೂ, ತಮ್ಮಲ್ಲಿರುವ ಏನೋ ಒಂದು ವಿಶೇಷತೆಯನ್ನು ಸಮಾಜದ ಗಮನಕ್ಕೆ ತಂದು ಅದನ್ನು ರಿಜಿಸ್ಟರ್ ಮಾಡಲು ಪ್ರಯತ್ನಿಸುತ್ತಲೇ ಇರುತ್ತಾರೆ. ನೂರು ಜನ ಉಪನ್ಯಾಸಕರ ಪೈಕಿ ಯಾವನೋ ಒಬ್ಬ ನಾನು ವಿದ್ಯಾರ್ಥಿಸ್ನೇಹಿ ಅಂತಲೋ, ನಾನು ಜ್ಞಾನ ದಾಹಿ ಅಂತಲೋ, ನಾನೊಬ್ಬ ಅದ್ಭುತ ವಾಗ್ಮಿ ಅಂತಲೋ ಈ ಕಾರಣಕ್ಕೆ ನೋಡಿ! ನಾನು ಈ ನೂರು ಜನರ ಮಧ್ಯೆ ವಿಶೇಷ ಎಂತಲೋ ತನ್ನದೇ ಆದ ಐಡೆಂಟಿಟಿಯ ಮುದ್ರೆ ಒತ್ತಲು ಪ್ರತಿದಿನ ಪರದಾಡುತ್ತಾನೆ. ಸಿನಿಮಾ ನಟರು, ನಿರ್ದೇಶಕರು, ರಂಗಕಲಾವಿದರು ನಾವು ಕ್ಲಾಸಿಗೆ, ನೀವು ಮಾಸಿಗೆ ಅಂತ ಅವರವರೇ ತಮ್ಮ ಪ್ರತಿಭೆಯ ವಿವಿಧ ವಿನ್ಯಾಸಗಳನ್ನು ಗುಡ್ಡೆ ಮಾಂಸ ಹಂಚಿಕೊಂಡಂತೆ ಹಂಚಿಕೊಂಡಿರುತ್ತಾರೆ.

ಇನ್ನು ಆಯಕಟ್ಟಿನ ಜಾಗದಲ್ಲಿ ಕುಳಿತ ಅಧಿಕಾರಶಾಹಿ ನಾನೆಷ್ಟು ಜನಸ್ನೇಹಿ ನೋಡು! ನಾನೆಷ್ಟು ಸಮಾಜಮುಖಿ ನೋಡು! ಎಂಬಂತೆ ತನ್ನನ್ನು ತಾನು ಡೆಕೊರೇಟ್ ಮಾಡಿಕೊಳ್ಳುತ್ತಿರುವ ಹಿಂದಿರುವ ಅಸಲೀಯತ್ತೇ ನನಗೆ ಇಂಥದೊಂದು ಸಾರ್ವಜನಿಕ ಉಮ್ಮೇದಿ ಇದೆ ಎಂಬುದನ್ನೇ ಶಕ್ತಿಯನ್ನಾಗಿ ಪರಿವರ್ತಿಸಿಕೊಂಡು ಅವರ ಮನಸ್ಸು ಅಂತರಂಗಿಕವಾಗಿ ಸುಖ ಹುಡುಕುತ್ತಿರುತ್ತದೆ. ಇಲ್ಲವೇ ಪಬ್ಲಿಸಿಟಿ ಎಂಜಾಯ್ ಮಾಡುತ್ತಿರುತ್ತದೆ.

ಇದಾವುದರ ಉಸಾಬರಿಯೇ ಬೇಡವೆಂದ ಕೆಲವರು, ತಮ್ಮಷ್ಟಕ್ಕೆ ತಾವು ದುಡ್ಡು ಮಾಡುತ್ತಾ, ಆಸ್ತಿ ಖರೀದಿಸುತ್ತಾ ಐನೂರು ವರ್ಷಗಳವರೆಗೆ ತಲೆ ಮಾರುಗಳ ಲೆಕ್ಕದಲ್ಲಿ ಭ್ರಮೆಯಲ್ಲೇ ಬದುಕಿಬಿಟ್ಟಿರುತ್ತಾರೆ. ದುಡ್ಡು ಮಾಡುವುದೇ ಒಂದು ದೊಡ್ಡ ಕಲೆ! ಅದರಲ್ಲಿ ನಾನೆಷ್ಟು ನಿಷ್ಣಾತ ನೋಡು? ಎಷ್ಟು ದುಡ್ಡು ಮಾಡಿದರೂ ಯಾರಿಗೂ ಗೊತ್ತಾಗದಂತೆ ನನಗೆ ಬಚ್ಚಿಡುವ ಕಲೆ ಗೊತ್ತು ಎಂದು ಮೀಸೆಯ ತುದಿಯಲ್ಲೇ ನಕ್ಕವರ ಸಂಖ್ಯೆಯೂ ಜಾಸ್ತಿಯೇ ಇದೆ. ಆದರೆ ಡಿಜಿಟಲ್ ಇಂಡಿಯಾದ ಈ ಕಾಲ ಅಂಥವರನ್ನೂ ಬಲಿ ಹಾಕಿದೆ.

ಭೀಮಸೇನ, ನಳಮಹಾರಾಜರಂತೆ ನಾನೂ ಸೈ ಎನ್ನುತ್ತಾ ಕೈಯ್ಯಲ್ಲಿ ಸೌಟು ಹಿಡಿದು ಫೈವ್‌ಸ್ಟಾರ್ ರುಚಿಕಟ್ಟಿನ ಅಡುಗೆ ಮನೆ ಸೇರಿಕೊಂಡ ವಿಶ್ವವಿಖ್ಯಾತ ಅಡುಗೆ ಭಟ್ಟರು ಬಳೆಯಿಲ್ಲದ ತಮ್ಮ ಕೈ ತೋರಿಸಿ ಹೆಂಗಸರಿಗಿಂತ ನಮ್ಮ ಕೈಯ್ಯ ರುಚಿ ಯಾವುದಕ್ಕೆ ಕಮ್ಮಿ ಅಂತ ಹೇಳಿ, ಅಡುಗೆಯ ಐಡೆಂಟಿಟಿಯಲ್ಲೇ ಬದುಕು ಕಟ್ಟಿಕೊಳ್ಳುತ್ತಾರೆ. ಒಟ್ಟಾರೆ ನಮ್ಮ ಕಾಲದ ಬಹುದೊಡ್ಡ ಇರಾದೆ ಎಂದರೆ ಸಕ್ಸಸ್‌ಫುಲ್ ಐಡೆಂಟಿಟಿಗಾಗಿ ಪ್ರತಿಯೊಬ್ಬರೂ ಹಂಬಲಿಸುವುದೇ ನಿತ್ಯ ಮಂತ್ರ. ಪೊಲೀಸರಿಗೆ ಸಿಕ್ಕಿಕೊಳ್ಳದ ಕಳ್ಳನ ಎದುರಿಗೆ ಅವನೇ ಸೃಷ್ಟಿಸಿಕೊಂಡ ಭ್ರಮೆಯೊಂದಿರುತ್ತದೆ. ತಾನು ಪೊಲೀಸರಿಗೆ ಸಿಕ್ಕಿಕೊಳ್ಳದೆ ಅವರನ್ನೇ ಹೇಗೆ ಯಾಮಾರಿಸಿದೆ ನೋಡು? ಸಿ.ಸಿ. ಕ್ಯಾಮರಾ ಇದ್ದರೂ ಹೇಗೆ ಬಚಾವಾದೆ ನೋಡು? ಎಂದು ತನ್ನ ಚಾಲಾಕಿತನದ ಐಡೆಂಟಿಟಿಗಾಗಿ ತನ್ನಲ್ಲೇ ಹುಡುಕಾಟ ನಡೆಸುತ್ತಾ ಅದರ ಸುಖಕ್ಕಾಗಿ ಹಪಹಪಿಸುತ್ತಿರುತ್ತಾನೆ. ಅಂದರೆ ಪ್ರತಿನಿತ್ಯದ ತಮ್ಮ ದುಡಿಮೆಯ ಭಾಗದಲ್ಲಿ ಲಾಭಗಳನ್ನೋ, ಅನುಕೂಲಗಳನ್ನೋ ನಿರೀಕ್ಷಿಸಿ, ಮಾಡುವ ನಮ್ಮ ಕೆಲಸಗಳಲ್ಲೇ ಇದು ನಮ್ಮಿಂದಲೇ, ಇದು ನನೊಬ್ಬನ್ನದೇ ಆದ ವಿಶೇಷ ವೈವಿಧ್ಯ ಎಂಬುದನ್ನು ತೋರಿಸಲಿಕ್ಕೆ ಪರದಾಡುವವರ ಗುಂಪಿನಲ್ಲಿ ಯಾರಿಲ್ಲ? ಯಾರುಂಟು ಅಂತ ಕೇಳಿದರೆ, ಭಿಕ್ಷೆ ಬೇಡುವವನಿಂದ ಹಿಡಿದು ಜಗತ್ತಿನ ಅತಿ ದೊಡ್ಡ ಸಿರಿವಂತನವರೆಗೆ ಎಲ್ಲರೂ ಕ್ಯೂನಲ್ಲಿ ಇರುವವರೆ! ತನ್ನ ಕೊರತೆಗಳನ್ನೂ, ಕಷ್ಟಗಳನ್ನೂ ಡಿಸೈನ್ ಡಿಸೈನ್ ಆಗಿ ವಿವರಿಸಿಕೊಳ್ಳುವ ಕಲೆ ಕಲಿತ ಭಿಕ್ಷುಕ ಕೂಡ ನಿಜಕ್ಕೂ ಕೈಲಾಗದಿದ್ದರೂ ಹತ್ತು ರೂಪಾಯಿ ಭಿಕ್ಷೆ ಸಂಪಾದಿಸಲು ಆಗದೆ ಅಸಹಾಯಕನಾಗಿ ಕುಳಿತಿದ್ದರೆ, ಅಂಥವನ ಎದುರು ನಾನೆಷ್ಟು ಪ್ರತಿಭಾವಂತ, ನಾನೆಷ್ಟು ವೆರೈಟಿಯಲ್ಲಿ ಜನರ ಮನಸ್ಸು ಕರಗಿಸುತ್ತೇನೆ ನೋಡು! ಎಂದು ತನ್ನ ಪ್ರತಿಭಾ ಸಂಪನ್ನತೆಯ ಐಡೆಂಟಿಟಿಯಲ್ಲಿ ಸೋತ ಭಿಕ್ಷುಕನ ಎದುರು ಗೆದ್ದವನು ತನ್ನ ಅಂಗೈಯಲ್ಲಿ ಗಾಂಧಿ ತಲೆಯ ನೂರರ ನೋಟನ್ನು ಬೀಳಿಸದಂತೆ ಆಡಿಸುತ್ತಾನೆ. ಒಟ್ಟಾರೆ ಐಡೆಂಟಿಟಿ ಎಂಬ ಆತ್ಮತೃಪ್ತಿಗಾಗಿ, ತನ್ನೊಳಗೆ ಕೇಂದ್ರೀಕೃತವಾದ ಶಕ್ತಿ ಸಂಚಯನವನ್ನು ಪ್ರದರ್ಶಿಸಲೆಂದೇ ಪ್ರತಿದಿನದ ರಂಗಪ್ರವೇಶ ನಡೆದಿದೆ.

ದೊಡ್ಡ ನಾಯಕರ ಮನೆಯ ಮುಂದೆ ಯುವ ನಾಯಕನೊಬ್ಬ ಹೂಗುಚ್ಛವಿಡಿದು ನಿಲ್ಲದೆ ಹೋದರೇ ಆತನಿಗೆ ಮುಂದೊಂದು ದಿನ ಯಾವುದೇ ಚಿಕ್ಕ ಅಧಿಕಾರವೂ ದೊರೆಯುವುದಿಲ್ಲ. ಅದಕ್ಕಾಗಿ ಸರತಿ ಸಾಲಿನಲ್ಲಿ ಸಾವಿರ ಜನರಿದ್ದರೂ ಅವರಾರಲ್ಲೂ ಇರದ ಏನೋ ಒಂದು ವಿಶೇಷ ಪ್ರತಿಭೆಯಿಂದ ದೊಡ್ಡವರ ಗಮನ ಸೆಳೆದುಬಿಡುವ ತಂತ್ರಗಳನ್ನು ಹಗಲಿರುಳೂ ಯೋಚಿಸುವ ತಂತ್ರಗಾರನೊಬ್ಬ ಆಡಳಿತ ಯಂತ್ರದಲ್ಲಿ ಜಾಗ ಗಿಟ್ಟಿಸಿಯೇ ಬಿಡುತ್ತಾನೆ. ನಾನು ನಿಮ್ಮ ಕಟ್ಟಾ ಬೆಂಬಲಿಗ ಎಂಬುದಕ್ಕೆ ಸಾಕ್ಷಿ ಪುರಾವೆಗಳನ್ನು ಒದಗಿಸಲು ಏನೇನು ಕ್ರಿಯಾಶೀಲತೆ ಬೇಕೋ ಅಷ್ಟೆಲ್ಲವನ್ನೂ ಆತ ನಿರಂತರವಾಗಿ ಮಾಡುತ್ತಾನೆ. ಆದರೆ ಸರತಿಯ ಸಾಲಿನಲ್ಲಿ ನಿಂತ ಅನೇಕರಿಗೆ ಏನೂ ದಕ್ಕುವುದಿಲ್ಲ. ಕೆಲವರಿಗೆ ಮಾತ್ರ ಅಧಿಕಾರ, ಹಣ, ಕೀರ್ತಿ, ಅಂತಸ್ತು ಐಡೆಂಟಿಟಿ ಎಲ್ಲವೂ ಒದಗಿ ಬರುತ್ತದೆ. ಅದಕ್ಕೆ ಕಾರಣ ಪರಿಣತಿಯ? ಅಥವಾ ಅಹರ್ನಿಶಿ ಅದನ್ನೇ ಯೋಚಿಸಿ ಚಿಂತಿಸಿ, ಉಸಿರಾಡಿ, ಗಳಿಸಿ, ಗಿಟ್ಟಿಸಿಕೊಂಡ ಐಡೆಂಟಿಟಿಯ?

ಆದರೆ ಇದಾವುದನ್ನೂ ಮಾಡಲಾಗದೆ ಸೋತವರ ಕಣ್ಣಲ್ಲಿ ಮೋಡ ಕಟ್ಟುತ್ತದೆ. ಅವನಂತೆ ನಾನೂ ಬ್ಯಾನರ್ ಕಟ್ಟಿದೆ, ಪೋಸ್ಟರ್ ಹಚ್ಚಿದೆ, ಪಾಂಪ್ಲೆಟ್ ಹಂಚಿದೆ. ಆದರೆ ನನಗೇಕೆ ಹೀಗೆ? ಅವನೇಕೆ ಹಾಗೆ? ಎಂಬ ಅಂತರಂಗದ ಪ್ರಶ್ನೆಗಳು ಏಳುತ್ತವೆ? ದಶಕಗಳ ಲೆಕ್ಕದಲ್ಲಿ ಮೊಳೆ ಜೋಡಿಸಿದ ಪತ್ರಕರ್ತ ಇನ್ನೂ ಜೋಡಿ ಸುತ್ತಲೇ ಇರುತ್ತಾನೆ. ಅದು ಅವನ ಅಕ್ಷರ ಪ್ರತಿಭೆ; ಅವನ ಪಕ್ಕದಲ್ಲೇ ಮೊಳೆ ಜೋಡಿಸಿದವನು ಮುಂದೊಂದು ದಿನ ಉದ್ಯಮಿ. ಕಾರಣ ಇಷ್ಟೆ ಅವನು ಅಕ್ಷರ ವಿನ್ಯಾಸದಲ್ಲೇ ತನ್ನ ಪಾಂಡಿತ್ಯ ಪ್ರದರ್ಶನ ಮಾಡಿದವನು. ಇವನು ವಿನ್ಯಾಸದ ಜೊತೆಗೆ ವ್ಯವಹಾರ ಚಾತುರ್ಯವನ್ನೂ ವಿಸ್ತರಿಸಿಕೊಂಡವನು. ಅದಕ್ಕೇ ಅವನಿನ್ನೂ ಹಂಗಾಮಿ; ಇವತ್ತು ಈತ ಪತ್ರಿಕೋದ್ಯಮಿ. ಹೇಗೆ ಡ್ರೈವರ್ ಆಗಿದ್ದವನು, ಮುಂದೊಂದು ದಿನ ಮಾಲೀಕನಾಗುತ್ತಾನೆ. ವೈದ್ಯರಾದವರೂ ನರ್ಸಿಂಗ್ ಹೋಂ ಕಟ್ಟುತ್ತಾರೆ. ಅವರೊಟ್ಟಿಗೇ ಇದ್ದವರು ಮುಂದೆಯೂ ಅವರ ನರ್ಸಿಂಗ್ ಹೋಂನಲ್ಲೇ ರಾತ್ರಿ ಪಾಳಿಯಲ್ಲಿ ಸ್ಟೆಥಾಸ್ಕೋಪ್ ಹಿಡಿದು ರೋಗಿಗಳ ನಾಡಿ ಪರೀಕ್ಷೆ ಮಾಡು ತ್ತಿರುತ್ತಾರೆ. ಅಂದರೆ ಕಟ್ಟಿದ ಕಾಚಕ್ಕಿಯೆಲ್ಲ ರಾಗಿಯ ತೆನೆಯಾಗಲ್ಲ. ಎಲ್ಲರ ಮಾತು ಮುತ್ತಾಗಲ್ಲ. ಎಲಾ ನಕ್ಷತ್ರಗಳು ನಾವಾಗಲ್ಲ. ಸಾವಿರ ಜಾತಿಯ ಹೂವಿನಲ್ಲೆಲ್ಲ ಒಂದೇ ಪರಿಮಳ ತುಂಬೇ ಇಲ್ಲ.

ಈ ಬದುಕು ವೈವಿಧ್ಯಮಯ, ನಿತ್ಯನೂತನ, ನಾವೂ ಕೂಡ ಗುಪ್ತರ ಸುವರ್ಣಯುಗದಲ್ಲಿ ಹುಟ್ಟಿದ್ದಿದ್ದರೆ ಚಿನ್ನದ ನಾಣ್ಯಗಳನ್ನು ಹುಣಸೆಪಚ್ಚಿಯಂತೆ ಚೆಡ್ಡಿ ಜೇಬಿನಲ್ಲಿ ತುಂಬಿಕೊಂಡು ಅಡ್ಡಾಡಬಹುದಿತ್ತು ಎಂಬುದು ಭ್ರಮೆ. ಹರಿದ ಕಾಗದದ ನೋಟನ್ನು ಬ್ಯಾಂಕಿನಲ್ಲಿ ಎಕ್ಸ್‌ಛೇಂಜ್ ಮಾಡಿಸಲು ಕ್ಯೂ ನಿಂತಿರುವುದು ವಸ್ತುಸ್ಥಿತಿ. ಅದೇ ನಮ್ಮ ಸ್ಥಿತಿಪ್ರಜ್ಞೆ, ಭ್ರಮೆ ಸುಖ ಕೊಡುತ್ತದೆ, ಸ್ಥಿತಿಪ್ರಜ್ಞೆ ಎಚ್ಚರ ಕಲಿಸುತ್ತದೆ. ಸದಾ ಸ್ಥಿತಿ ಪ್ರಜ್ಞೆಯಲ್ಲಿದ್ದವನಿಗೆ ಕಿಲಾಡಿತನ ಅವನ ಐಡೆಂಟಿಟಿಗೆ ಶ್ರಾಣೆ ಹಿಡಿದು ಅವನು ಬಯಸಿದ್ದನ್ನು ಕಲ್ಪಿಸುತ್ತದೆ. ಪಾಪ ವಾಸ್ತವದ ಕಟುಸತ್ಯ ಗೊತ್ತಿರದ ಅಮಾಯಕ ಅದೆಷ್ಟೇ ದುಡಿದರೂ, ಅದೆಷ್ಟೇ ಪ್ರಾಮಾಣಿಕವಾಗಿ ತನ್ನನ್ನು ತಾನು ಡೆಕೊರೇಟ್ ಮಾಡಿಕೊಂಡರೂ ಮೈತುಂಬುವುದಿಲ್ಲ. ಮಾಡಿದ ಕೆಲಸ ಕಾಳು ಕಟ್ಟುವುದಿಲ್ಲ.

ಆದರೂ ಸತತ ಸೋಲುಗಳ ನಡುವೆಯೂ ನಾವು ಸೋಲನ್ನೊಪ್ಪುವುದಿಲ್ಲ. ಮತ್ತದೇ ರಂಗಭೂಮಿ, ಮತ್ತದೇ ಪಾತ್ರ, ಮತ್ತದೇ ಪ್ರೇಕ್ಷಕರ ಮುಂದೆ ಎರಡನೇ ಷೋಗಾಗಿ ಗೆಜ್ಜೆ ಕಟ್ಟುತ್ತೇವೆ. ಗೆದ್ದೇ ಗೆಲ್ಲುತ್ತೇವೆಂಬ ಭ್ರಮೆಯಲ್ಲಿ; ವಾಸ್ತವದಲ್ಲಿ ಹೆಜ್ಜೆ ಹಾಕುತ್ತೇವೆ. ಬಾಯಲ್ಲಿ ಮಾತ್ರ ಇಲ್ಲಿ ಬಲವಿದ್ದವನಿಗೆ ಜಯ, ಬಾಯಿದ್ದವನು ಬರಗಾಲದಲ್ಲೂ ಗೆದ್ದ ಎಂಬ ಡೈಲಾಗ್ ಹೊಡೆಯುತ್ತಿರುತ್ತೇವೆ. ಅದಕ್ಕೆ ಇಲ್ಲಿ ಭ್ರಮೆ ಮತ್ತು ವಾಸ್ತವಗಳ ವ್ಯತ್ಯಾಸ ತಿಳಿಯದೆ ಗೊಂದಲದಲ್ಲಿರುವ ಅನೇಕರು ಹೇಳುವ ಹಾಗೆ ಇಲ್ಲಿ

ಯಾರು ಏನಾಗಬೇಕಿತ್ತೋ ಅವರು ಅದಾಗದೇ!
ಯಾರು ಏನಾಗಬಾರದಿತ್ತೋ
ಅವರು ಎಲ್ಲವೂ ಆಗಿಹೋಗಿ!
ಎಲ್ಲವೂ ಆಗಬೇಕಾದವರೂ ಏನೇನೂ
ಆಗದೇ ಉಳಿದು ಹೋದವರ
ಕಥೆಯೇ ಭರತಖಂಡದ ಚರಿತ್ರೆ

ಈಗ ಹೇಳಿ ನಮಗೆ ಬೇಕಿರುವುದು ನಮ್ಮನ್ನು ಅತಂತ್ರಕ್ಕೆ ತಳ್ಳುವ ಭ್ರಮೆಯ ಅಪೂರ್ಣತೆಯೋ! ವಾಸ್ತವದ ಸತ್ಯಕತೆಯೋ, ಯಾವುದಿರಲಿ ಏನಂತೀರಿ?

ಮೈಸೂರಲ್ಲಿ ಭಕ್ತಿಭಾವದಿಂದ ಷಷ್ಠಿ ಆಚರಣೆ

ಹುತ್ತಕ್ಕೆ ಹಾಲೆರೆದು ಪೂಜೆ ಸಲ್ಲಿಸಿದ ಮಹಿಳೆಯರು



ಮೈಸೂರು,ಡಿ.18(ಎಸ್‌ಪಿಎನ್)– ಚಂಪಾ ಷಷ್ಠಿ ಹಿನ್ನೆಲೆಯಲ್ಲಿ ನಗರದಲ್ಲೆಡೆ ಮಹಿಳೆಯರು ಹುತ್ತಕ್ಕೆ, ನಾಗರಕಟ್ಟೆಗೆ ಹಾಲು(ತನಿ) ಎರೆದು ಭಕ್ತಿ–ಭಾವದಿಂದ ಸೋಮವಾರ ಪೂಜೆ ಸಲ್ಲಿಸಿದರು.


ನಗರದ ವಿವಿಧ ಬಡಾವಣೆಗಳಾದ ವಿದ್ಯಾರಣ್ಯಪುರಂನ ಬೂತಾಳೆ ಮೈದಾನ, ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಾಲಯ, ಕುರುಬಾರಹಳ್ಳಿ ಬನ್ನಿ ಮಹಾಕಾಳೇಶ್ವರಿ ದೇವಾಲಯ ಬಳಿ, ಅಗ್ರಹಾರ ಗಣಪತಿ ದೇವಾಲಯ, ಕೆ.ಜಿ.ಕೊಪ್ಪಲಿನ ಬಂದಂತಮ್ಮ ದೇವಾಲಯ, ಜಿಲ್ಲಾಧಿಕಾರಿ ಕಚೇರಿ ಸಮೀಪ ಕಾಡುಮಲ್ಲೇಶ್ವರ ದೇವಾಲಯ, ಯರಗನಹಳ್ಳಿ, ಸಿದ್ಧಾರ್ಥಬಡಾವಣೆ, ಆಲನಹಳ್ಳಿ, ಸರಸ್ವತಿಪುರಂ, ಟಿ.ಕೆ.ಲೇಔಟ್, ಜನತಾನಗರ, ಬಿಸಿಲು ಮಾರಮ್ಮ ದೇವಾಲಯ, ದಟ್ಟಗಳ್ಳಿ, ಬೋಗಾದಿ, ಮೇಟಗಳ್ಳಿ, ಕುಂಬಾರ ಕೊಪ್ಪಲು, ಕೆಸರೆ, ಜೆ.ಪಿ.ನಗರ, ರಮಾಬಾಯಿನಗರ, ಶಾರದಾದೇವಿನಗರ, ಕುವೆಂಪುನಗರ, ವಿದ್ಯಾರಣ್ಯಪುರಂ, ಚಾಮುಂಡಿಪುರಂ, ಜೆಎಸ್‌ಎಸ್ ಬಡಾವಣೆ, ಮಂಚೇಗೌಡನ ಕೊಪ್ಪಲು, ಸೇರಿದಂತೆ ಇತರೆಡೆ ಮಹಿಳೆಯರು ಹುತ್ತಕ್ಕೆ ಮತ್ತು ನಾಗರಕಟ್ಟೆಗೆ ಹಾಲೆರೆದು ಭಕ್ತಿ–ಭಾವದಿಂದ ಪೂಜೆ ಸಲ್ಲಿಸಿದರು.

ಜಾತ್ರೆ ರದ್ದು: ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಸಿದ್ದಲಿಂಗಪುರ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನದ ನವೀಕರಣ ಕಾರ್ಯ ನಡೆಯುತ್ತಿರುವುದರಿಂದ ಈ ಬಾರಿ ಜಾತ್ರೆ ನಡೆಯಲಿಲ್ಲ. ಪ್ರತಿವರ್ಷ ವೈಭವದಿಂದ ನಡೆಯುತ್ತಿದ್ದ ಸುಬ್ರಮಣ್ಯ ಚಂಪಾ ಷಷ್ಠಿ ಪೂಜೆಗೆ ಮೈಸೂರು, ಮಂಡ್ಯ ಸೇರಿದಂತೆ ವಿವಿಧ ಭಾಗಗಳಿಂದ ಸಾವಿರಾರು ಭಕ್ತಾದಿಗಳು ಜಮಾಯಿಸುತ್ತಿದ್ದರು.

ಆದರೆ, ಈ ಬಾರಿ ದೇವಸ್ಥಾನದ ಆವರಣದಲ್ಲೇ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಲಾಯಿತು. ಮುಂಜಾನೆಯೇ ಸುಬ್ರಹ್ಮಣ್ಯಸ್ವಾಮಿಗೆ ವಿವಿಧ ಪೂಜೆಗಳು ನಡೆದವು. ಸಾರ್ವಜನಿಕರಿಗೆ ಅವಕಾಶ ನಿರ್ಬಂಧಿಸಲಾಗಿತ್ತು. ಆದರೂ ಕೆಲವರು ದೇವಸ್ಥಾನ ಪಕ್ಕದ ಖಾಲಿ ಜಾಗದಲ್ಲಿ ಪೂಜೆ ಸಲ್ಲಿಸಿ ತೆರಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಭೂಗತ ಪಾತಕಿ ದಾವೂದ್ ಇಬ್ರಾಹಿಂಗೆ ವಿಷ ಪ್ರಾಶನ?

ಪಾಕಿಸ್ತಾನದ ಕರಾಚಿ ಆಸ್ಪತ್ರೆಗೆ 2 ದಿನಗಳ ಹಿಂದೆ ದಾಖಲು!



ಕರಾಚಿ(ಪಾಕಿಸ್ತಾನ): ಭೂಗತ ಪಾತಕಿ ದಾವೂದ್ ಇಬ್ರಾಹಿಂನನ್ನು (Dawood Ibrahim) ಪಾಕಿಸ್ತಾನದ ಕರಾಚಿಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವರದಿಯಾಗಿದೆ, ಆಸ್ಪತ್ರೆ ಸುತ್ತಮುತ್ತ ತೀವ್ರ ಭದ್ರತೆ ಕಲ್ಪಿಸಲಾಗಿದೆ.

ಕ್ರಿಮಿನಲ್ ಚಟುವಟಿಕೆಗಳಿಗೆ ಹೆಸರಾದ ಕುಖ್ಯಾತಿ ದಾವೂದ್ ಇಬ್ರಾಹಿಂಗೆ ವಿಷಪ್ರಾಶನ ಮಾಡಲಾಗಿದೆ. ಇದರಿಂದ ಹಠಾತ್ ಆರೋಗ್ಯ ಕೆಟ್ಟು ಆಸ್ಪತ್ರೆಗೆ ದಾಖಲಾಗಿದ್ದಾನೆ ಎಂದು ಹೇಳಲಾಗುತ್ತಿದೆ.

ಕಳೆದ ಎರಡು ದಿನಗಳಿಂದ ವೈದ್ಯಕೀಯ ಆರೈಕೆಯಲ್ಲಿದ್ದು, ವಿಷಪ್ರಾಶನವಾಗಿರಬಹುದು ಎಂಬ ಊಹಾಪೋಹಗಳಿಗೆ ಪುಷ್ಟಿ ನೀಡಿದೆ. ಸದ್ಯಕ್ಕೆ, ಆಸ್ಪತ್ರೆಯಿಂದ ಯಾವುದೇ ಅಧಿಕೃತ ಹೇಳಿಕೆ ಬಂದಿಲ್ಲ. ದಾವೂದ್ ಇಬ್ರಾಹಿಂ ಆಸ್ಪತ್ರೆಯ ಮಹಡಿಯಲ್ಲಿ ಏಕೈಕ ನಿವಾಸಿಯಾಗಿದ್ದು, ಉನ್ನತ ಆಸ್ಪತ್ರೆ ಅಧಿಕಾರಿಗಳು ಮತ್ತು ಆತನ ಹತ್ತಿರದ ಕುಟುಂಬ ಸದಸ್ಯರಿಗೆ ಮಾತ್ರ ಪ್ರವೇಶವನ್ನು ಕಲ್ಪಿಸಲಾಗಿದೆ.

ಭಾರತಕ್ಕೆ ಮೋಸ್ಟ್ ವಾಂಟೆಡ್ ಭೂಗತ ಪಾತಕಿಯಾಗಿರುವ ದಾವೂದ್ ಇಬ್ರಾಹಿಂಗಾಗಿ ಮುಂಬೈ ಪೊಲೀಸರು ಆತನ ಸಂಬಂಧಿಕರಾದ ಅಲಿಶಾ ಪಾರ್ಕರ್ ಮತ್ತು ಸಾಜಿದ್ ವಾಗ್ಲೆ ಅವರಿಂದ ಹೆಚ್ಚಿನ ಮಾಹಿತಿ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಜನವರಿಯಲ್ಲಿ, ದಾವೂದ್‌ನ ಸಹೋದರಿ ಹಸೀನಾ ಪಾರ್ಕರ್‌ನ ಮಗ ರಾಷ್ಟ್ರೀಯ ತನಿಖಾ ಸಂಸ್ಥೆಗೆ ಭೂಗತ ಲೋಕದ ಡಾನ್ ಎರಡನೇ ಬಾರಿಗೆ ಮದುವೆಯಾದ ನಂತರ ಕರಾಚಿಯಲ್ಲಿ ಉಳಿದುಕೊಂಡಿದ್ದಾನೆ ಎಂದು ತಿಳಿಸಿದ್ದನು. ದಾವೂದ್ ಇಬ್ರಾಹಿಂ ವಿರುದ್ಧ ಎನ್‌ಐಎ ತನ್ನ ಚಾರ್ಜ್‌ಶೀಟ್‌ನಲ್ಲಿ ಅವನು ಮತ್ತು ಅವನ ಉನ್ನತ ಸಹಾಯಕರು ಪಾಕಿಸ್ತಾನದ ಕರಾಚಿ ವಿಮಾನ ನಿಲ್ದಾಣವನ್ನು ನಿಯಂತ್ರಿಸುತ್ತಾರೆ ಎಂದು ಹೇಳಿದೆ.

ಮುಂಬೈನಲ್ಲಿ 1993ರಲ್ಲಿ ಸರಣಿ ಬಾಂಬ್ ಸ್ಫೋಟ ಸಂಭವಿಸಿತ್ತು. ಈ ಸ್ಫೋಟದಲ್ಲಿ 250ಕ್ಕೂ ಹೆಚ್ಚು ಅಮಾಯಕ ನಾಗರಿಕರು ಮೃತಪಟ್ಟು, 750ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿದ್ದರು. ಭೀಕರ ಮುಂಬೈ ಸ್ಫೋಟದ ಮಾಸ್ಟರ್ ಮೈಂಡ್ ದಾವೂದ್ ಇಬ್ರಾಹಿಂ ಆಗಿದ್ದಾನೆ. ಅಲ್ಲಿಂದ ಆತ ಭಾರತಕ್ಕೆ ಬೇಕಾದ ಮೋಸ್ಟ್ ವಾಂಟೆಂಡ್ ಕ್ರಿಮಿನಲ್ ಎನಿಸಿಕೊಂಡಿದ್ದಾನೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಸತಿ ಶಾಲೆಯಲ್ಲಿ ಮಕ್ಕಳಿಂದ ಶೌಚಾಲಯ ಸ್ವಚ್ಛತೆಗೆ ಖಂಡನೆ



ಮೈಸೂರು,ಡಿ.18(ಎಂಟಿವೈ)– ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಕ್ಕಳಿಂದ ಶೌಚಾಲಯ ಸ್ವಚ್ಛತೆ ಮಾಡಿಸಿರುವುದು ಖಂಡನೀಯ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗ ಅಧ್ಯಕ್ಷ ಸಿದ್ದರಾಜು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಸತಿ ಶಾಲೆಯಲ್ಲಿ ಶೌಚಾಲಯ ಸ್ವಚ್ಛತೆ ಮಾಡಲು ಸಿಬ್ಬಂದಿ ಇರುತ್ತಾರೆ. ಆದರೆ, ಮಕ್ಕಳಿಂದ ಮಾಡಿಸಿರುವುದು ಅಮಾನವೀಯ ಕೃತ್ಯ. ಮಕ್ಕಳು ಶಾಲೆಗೆ ಹೋಗುವುದು ವಿದ್ಯಾಭ್ಯಾಸಕ್ಕೆ, ಶೌಚಾಲಯ ಸ್ವಚ್ಛತೆ ಮಾಡಲು ಅಲ್ಲ. ಹೀಗಾಗಿ ಮಕ್ಕಳಿಂದ ಈ ಕೆಲಸ ಮಾಡಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂಸದ ಪ್ರತಾಪಸಿಂಹ ಅವರಿಂದ ಪಾಸ್ ಪಡೆದು ಮನೋರಂಜನ್ ಮತ್ತು ಆತನ ಸ್ನೇಹಿತರು ಸಂಸತ್ತಿನಲ್ಲಿ ಹೊಗೆ ಬಾಂಬ್ ಹಾಕಿ ಭದ್ರತಾ ಲೋಪಕ್ಕೆ ಕಾರಣವಾಗಿದ್ದಾರೆ. ಹೀಗಾಗಿ ಈ ಪ್ರಕರಣದ ವಿಚಾರಣೆ ನಡೆಸಿ ಆರೋಪಿಗಳಿಗೆ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಧ್ಯಮ ವಕ್ತಾರ ರವಿಪ್ರಕಾಶ್ ಪಿ, ಉಪಾಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ರಾಮಸ್ವಾಮಿ, ರೇವಣ್ಣ ಇದ್ದರು.

ಶಸ್ತ್ರಾಸ್ತ್ರಗಳನ್ನು ಬಳಸದಂತೆ ನಿಷೇಧ

ಮೈಸೂರು,ಡಿ.18– ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ನಗರಸಭೆಯ ಉಪಚುನಾವಣೆ ನಡೆಯಲಿದ್ದು, ಚುನಾವಣಾ ನೀತಿ ಸಂಹಿತೆಯು ಡಿ.8ರಿಂದ 30ರವರೆಗೆ ಜಾರಿಯಲ್ಲಿರುವುದರಿಂದ ನಗರಸಭೆ ವ್ಯಾಪ್ತಿಯಲ್ಲಿ ಚುನಾವಣಾ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಶಸ್ತ್ರಾಸ್ತ್ರ ಕಾಯಿದೆಯಡಿ ಆಯುಧ ರಹದಾರಿ ಹೊಂದಿರುವವರು ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡಲು ಮತ್ತು ಯಾವುದೇ ವ್ಯಕ್ತಿ ಸ್ಫೋಟಕ ಹಾಗೂ ಮಾರಕಾಸ್ತ್ರಗಳನ್ನು ಒಯ್ಯುವುದಾಗಲೀ ಅಥವಾ ಕಾನೂನುಬಾಹಿರ ಚಟುವಟಿಕೆಗಳಿಗೆ ಬಳಸದಂತೆ ನಿಷೇಧಿಸಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶ ಹೊರಡಿಸಿರುತ್ತಾರೆ.

ಟ್ರಾಫಿಕ್ ಪೊಲೀಸರು ದಂಡ ಸಂಗ್ರಹಿಸಲು ಅವಕಾಶ ಇಲ್ಲ

ಹೈಕೋರ್ಟ್ ಸದಸ್ಯ ಪೀಠದ ಆದೇಶ





ಬೆಂಗಳೂರು, ಡಿ.18– ವಾಹನ ಸವಾರರು ಟ್ರಾಫಿಕ್ ನಿಯಮ ಉಲ್ಲಂಘಿಸುವ ಪ್ರಕರಣಗಳಲ್ಲಿ ಸಂಚಾರ ಪೊಲೀಸರು ಯಾವುದೇ ಸಂದರ್ಭದಲ್ಲಿ ಆರೋಪಿಯಿಂದ ದಂಡದ ಮೊತ್ತ ಸಂಗ್ರಹಿಸಲು ಅವಕಾಶವಿಲ್ಲ ಎಂದು ಹೈಕೋರ್ಟ್ ತಿಳಿಸಿದೆ.

ಹೆಲ್ಮೆಟ್ ಧರಿಸದೇ ಇರುವುದಕ್ಕೆ ದಂಡ ಪಾವತಿಸಲು ನಿರಾಕರಿಸಿದ ಮತ್ತು ಬಲ ಪ್ರಯೋಗ ನಡೆಸಿ ಸರ್ಕಾರಿ ಅಧಿಕಾರಿಯ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ್ದ ಆರೋಪ ಸಂಬಂಧ ತಮ್ಮ ವಿರುದ್ಧದ ದೋಷಾರೋಪ ಪಟ್ಟಿ ರದ್ದು ಮಾಡುವಂತೆ ಕೋರಿ ಕೆ.ಆರ್. ಪೇಟೆ ಪಟ್ಟಣದ ಸುಭಾಷ್‌ನಗರದ ನಿವಾಸಿ ಕೆ.ಟಿ. ನಟರಾಜು ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿದ ನ್ಯಾಯಮೂರ್ತಿ ಹೇಮಂತ್ ಚಂದನ್‌ಗೌಡರ್ ಅವರ ಪೀಠ ಈ ಆದೇಶ ನೀಡಿದೆ. 2019ರ ಪ್ರಕರಣವೊಂದರ ತೀರ್ಪನ್ನು ಉಲ್ಲೇಖಿಸಿರುವ ನ್ಯಾಯಪೀಠ, ಸಂಚಾರ ನಿಯಮ ಉಲ್ಲಂಘಿಸುವ ಪ್ರಕರಣಗಳಲ್ಲಿ ಪೊಲೀಸರು ತಪಾಸಣೆ ಮಾಡುವುದನ್ನು ವಿಡಿಯೋ ಚಿತ್ರೀಕರಣ ಮಾಡಬೇಕಾಗುತ್ತದೆ ಹಾಗೂ ಸಂಚಾರ ಪೊಲೀಸರು ವಾಹನ ಸವಾರರಿಂದ ದಂಡದ ಮೊತ್ತ ಸಂಗ್ರಹಿಸಲು ಅವಕಾಶವಿಲ್ಲ ಎಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ ತಿಳಿಸಿದೆ.

ವಾಹನ ತಪಾಸಣಾ ಚಟುವಟಿಕೆಯನ್ನು ವಿಡಿಯೋ ಚಿತ್ರೀಕರಣ ಮಾಡಬೇಕು. ಪೊಲೀಸ್ ಅಧಿಕಾರಿಯ ಮೇಲೆ ಹಲ್ಲೆಗೆ ಮುಂದಾದರೆ ವ್ಯಕ್ತಿಯನ್ನು ತಡೆಯಬೇಕು. ಘಟನಾ ಸ್ಥಳಕ್ಕೆ ಸಂಬಂಧಪಟ್ಟ ಠಾಣೆಯ ಪೊಲೀಸರನ್ನು ಕರೆಸಿ, ಆರೋಪಿಯನ್ನು ವಶಕ್ಕೆ ನೀಡಬೇಕು. ಇಲ್ಲದಿದ್ದರೆ ಹಲ್ಲೆ ಹಾಗೂ ಬಲಪ್ರಯೋಗ ನಡೆಸಿ ಸರ್ಕಾರಿ ಅಧಿಕಾರಿಯ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಪ್ರಕರಣವನ್ನು ಸಾಬೀತುಪಡಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

ಹೈಕೋರ್ಟ್ ಆದೇಶ ಪಾಲಿಸುತ್ತೇವೆ...!




“ಹೈಕೋರ್ಟ್ ಆದೇಶ ಪಾಲಿಸಲಾಗುವುದು. ಆದರೆ ಹೈಕೋರ್ಟ್ ಆದೇಶದನ್ವಯ ಪೊಲೀಸ್ ಇಲಾಖೆ ಹಾಗೂ ಸರ್ಕಾರದ ಸೂಚನೆ ಬಂದಿಲ್ಲ. ದಂಡ ವಸೂಲಿ ಮಾಡುವಂತಿಲ್ಲ ಎಂದು ಹೈಕೋರ್ಟ್ ತಿಳಿಸಿದೆ ಎನ್ನಲಾಗಿದೆ. ಆದರೆ ಸಂಚಾರ ನಿಯಮ ಉಲ್ಲಂಘನೆ ತಪಾಸಣೆಯನ್ನು ನಡೆಸಬೇಕೋ ಅಥವಾ ಬೇಡವೋ ಎಂಬುದರ ಕುರಿತು ಮಾಹಿತಿ ಪಡೆದುಕೊಂಡು ಕಾರ್ಯರೂಪಿಸಲಾಗುವುದು.

–ರಮೇಶ್ ಬಾನೋತ್, ಮೈಸೂರು ನಗರ ಪೊಲೀಸ್ ಆಯುಕ್ತ

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಮೈಸೂರು,ಡಿ.18– ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ, ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ, ಸವಿತಾ ಸಮಾಜ ಅಭಿವೃದ್ಧಿ ನಿಗಮ, ಮಡಿವಾಳ ಮಾಚೀದೇವ ಅಭಿವೃದ್ಧಿ ನಿಗಮ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಅಲೆಮಾರಿ, ಅರೆಅಲೆಮಾರಿ ಅಭಿವೃದ್ಧಿ ನಿಗಮ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ, ಉಪ್ಪಾರ ಅಭಿವೃದ್ಧಿ ನಿಗಮ. 2023–24ನೇ ಸಾಲಿಗೆ ಅರಿವು ಶೈಕ್ಷಣಿಕ ಹಾಗೂ ವಿದೇಶ ವ್ಯಾಸಂಗ ಸಾಲಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದ್ದು, ನಿಗಮಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು ನ.10 ಎಂದು ನಿಗದಿಪಡಿಸಲಾಗಿತ್ತು. ಪ್ರಸ್ತುತ ಅರ್ಜಿಗಳನ್ನು ಸಲ್ಲಿಸಲು ದಿನಾಂಕವನ್ನು ಡಿಸೆಂಬರ್ 25ರವರೆಗೆ ವಿಸ್ತರಿಸಲಾಗಿದೆ. ಈ ಯೋಜನೆಗಳಲ್ಲಿ ಸೌಲಭ್ಯ ಪಡೆಯಬಯಸುವ ಅರ್ಜಿದಾರರು ಗ್ರಾಮ್ ಒನ್, ಮೈಸೂರು ಒನ್, ಸೇವಾಸಿಂಧು ಪೋರ್ಟಲ್ ಮೂಲಕ (https://sevasindhu.karnataka.gov.in, http://gramaone.karnataka.gov.in, https://www.karnatakaone.gov.in) ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಾಲತಾಣ https://dbcdc.karnataka.gov.in ಅಥವಾ ಜಿಲ್ಲಾ ಕಚೇರಿ ದೂ. ಸಂಖ್ಯೆ: 0821–2341194 ಸಂಪರ್ಕಿಸುವುದು ಎಂದು ಡಿದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು: ನಾಳೆ (ಮಂಗಳವಾರ) ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ದೊಡ್ಡಕೆರೆ ಮೈದಾನ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ರಾಮಾನುಜ ರಸ್ತೆ 1ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂ ಸುತ್ತಮುತ್ತ, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್‌ಗೇಟ್, ತಾವರೆಕೆರೆ, ಜಾಕಿ ಕ್ವಾರ್ಟ್ರಸ್, ರೇಸ್‌ಕೋರ್ಸ್ ಹಿಂಭಾಗ, ಸಬರ್ಬನ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತಮುತ್ತ, ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ ಬಿ.ಎನ್. ರಸ್ತೆ, ಸಿದ್ಧಾರ್ಥನಗರ, ಆಲನಹಳ್ಳಿ ಸುತ್ತಮುತ್ತ, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತ ಮುತ್ತ, ಶ್ರೀ ಹರ್ಷ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತ, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬ್ಯಾಂಕ್‌ನಲ್ಲಿ ಮೊದಲೇ ಅಡಮಾನವಿಟ್ಟು ಸಾಲ ಪಡೆದ ಮನೆ ಮಾರಾಟ ಮಾಡಿ ವಿದೇಶಕ್ಕೆ ಪರಾರಿ!

ಎನ್‌ಆರ್ ಠಾಣೆಯಲ್ಲಿ ಮಹಾವಂಚನೆ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಮೈಸೂರು, ಡಿ. 18– ಮಾರಾಟ ಮಾಡಿದ ಮನೆಯನ್ನು ಬ್ಯಾಂಕ್‌ನಲ್ಲಿ ಅಡಮಾನವಿಟ್ಟು ಸಾಲ ಮರುಪಾವತಿ ಮಾಡದೇ ಬಿಲ್ಡರ್‌ಗೆ 29.50 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಕೆಸರೆ ನಿವಾಸಿ ಜಬೀವುಲ್ಲಾ(38) ವಂಚನೆಗೊಳಗಾದವರಾಗಿದ್ದು, ಎನ್‌ಆರ್ ಮೊಹಲ್ಲಾ ನಿವಾಸಿ ಮೊಹಮ್ಮದ್ ರಮೀಜ್(27) ಇವರಿಗೆ ಮಾರಾಟ ಮಾಡಿದ್ದ ಮನೆಯನ್ನು ಖಾಸಗಿ ಬ್ಯಾಂಕ್‌ನಲ್ಲಿ ಅಡಮಾನವಿಟ್ಟು ವಿದೇಶಕ್ಕೆ ಪಲಾಯನಗೈದಿರುವವನಾಗಿದ್ದಾನೆ.

ವಿವರ: ಬಿಲ್ಡರ್ ಜಬೀವುಲ್ಲಾ ಅವರಿಗೆ ಸಿರಾಜುನ್ನೀಸಾ ಝುಬೇರಾ ಎಂಬುವವರ ಮೂಲಕ ಮೊಹಮ್ಮದ್ ರಮೀಜ್ ಪರಿಚಯವಾಗಿದ್ದು, ಬೆಲವತ್ತ ಗ್ರಾಮದ ಸರ್ವೆ ನಂ.182/1ರ ನಿವೇಶನ ಸಂಖ್ಯೆ 5ರಲ್ಲಿ 20x30 ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಿಸಿರುವ 6 ಚದುರದ ಮನೆಯನ್ನು ಮಾರಾಟ ಮಾಡುವುದಾಗಿ ಮೊಹಮ್ಮದ್ ರಮೀಜ್ ತಿಳಿಸಿದ್ದಾನೆ. ಜಬೀವುಲ್ಲಾ ಅವರು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸಿದ ನಂತರ ಮನೆ ಖರೀದಿಗೆ ಮುಂದಾಗಿದ್ದಾರೆ.

2020ನೇ ವರ್ಷ ರಮೀಜ್ ತನಗೆ ತುರ್ತಾಗಿ ಹಣ ಬೇಕಿದೆ ಎಂದು ತಿಳಿಸಿ, ಜಬೀವುಲ್ಲಾ ಅವರಿಂದ 29.50 ಲಕ್ಷ ರೂ. ಪಡೆದು ನೋಟರಿ ಮೂಲಕ ಕ್ರಯಪತ್ರ ಮಾಡಿಕೊಟ್ಟಿದ್ದಲ್ಲದೇ, ಒಂದು ವಾರದಲ್ಲಿ ನೋಂದಣಿ ಮಾಡಿಕೊಡುವುದಾಗಿ ತಿಳಿಸಿ, ಮನೆಯನ್ನು ಅವರ ಸ್ವಾಧೀನಕ್ಕೆ ನೀಡಿದ್ದಾನೆ. ನಂತರ ರಮೀಜ್ ನಾಪತ್ತೆ. ಆತನ ಬಗ್ಗೆ ಸಿರಾಜುನ್ನೀಸಾ ಝುಬೇರ್ ಬಳಿ ವಿಚಾರಿಸಿದಾಗ, ಆತ ದುಬೈಗೆ ತೆರಳಿರುವುದಾಗಿಯೂ ಕೆಲವು ತಿಂಗಳ ನಂತರ ಬರುವುದಾಗಿಯೂ ತಿಳಿಸಿದ್ದಾರೆ.

ಆದರೆ, ದಿಢೀರನೇ ಒಂದು ದಿನ ಜಾನಾ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಉದ್ಯೋಗಿಗಳು ಮನೆ ಬಳಿಗೆ ತೆರಳಿ, ಈ ಮನೆಯನ್ನು ತಮ್ಮ ಬ್ಯಾಂಕ್‌ನಲ್ಲಿ ಅಡಮಾನವಿಟ್ಟಿದ್ದು, ಸಾಲ ಮರುಪಾವತಿಯಾಗದ ಕಾರಣ ಅದನ್ನು ಸ್ವಾಧೀನಪಡಿಸಿಕೊಳ್ಳಲು ಬಂದಿರುವುದಾಗಿ ತಿಳಿಸಿದ್ದಾರೆ. ನಂತರ ಸದರಿ ಬ್ಯಾಂಕ್‌ಗೆ ಹೋಗಿ ವಿಚಾರಿಸಿದಾಗ ಮೊಹಮ್ಮದ್ ರಮೀಜ್ ಮನೆಯ ಕ್ರಯಪತ್ರದ ಮೂಲಕ ದಾಖಲೆ ನೀಡಿ ತಮ್ಮ ಬ್ಯಾಂಕ್‌ನಿಂದ ಸಾಲ ಪಡೆದಿದ್ದಾನೆ. ಸಾಲ ಮರುಪಾವತಿ ಮಾಡದ ಕಾರಣ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಮನೆ ಸ್ವಾಧೀನಕ್ಕೆ ಆದೇಶ ಪಡೆಯಲಿರುವುದಾಗಿ ಬ್ಯಾಂಕ್ ಮ್ಯಾನೇಜರ್, ಜಬೀವುಲ್ಲಾ ಅವರಿಗೆ ತಿಳಿಸಿದ್ದಾರೆ.

ಈ ಸಂಬಂಧ ಜಬೀವುಲ್ಲಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಎನ್‌ಆರ್ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ವಿಚಿತ್ರವೆಂದರೆ ಮೊಹಮ್ಮದ್ ರಮೀಜ್ ತಮಗೆ ಮನೆಯ ಮೂಲ ದಾಖಲೆಗಳನ್ನು ನೀಡಿ 29.50 ಲಕ್ಷ ರೂ. ಪಡೆದಿದ್ದಾನೆ. ಆದರೆ, ರಮೀಜ್, ಸಿರಾಜುನ್ನೀಸಾ ಝುಬೇರ್ ಮತ್ತು ಬ್ಯಾಂಕ್‌ನ ವ್ಯವಸ್ಥಾಪಕರು ಹಾಗೂ ಕೆಲವು ಸರ್ಕಾರಿ ಅಧಿಕಾರಿಗಳು ಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮಗೆ 29.50 ಲಕ್ಷ ವಂಚಿಸಿದ್ದಾರೆ ಎಂದು ಜಬೀವುಲ್ಲಾ ದೂರಿನಲ್ಲಿ ತಿಳಿಸಿದ್ದು, ವಂಚಕ ರಮೀಜ್ ಸಾಲ ಪಡೆಯಲು ಬ್ಯಾಂಕ್‌ಗೆ ನೀಡಿರುವುದು ನಕಲಿ ದಾಖಲೆಯೇ ಅಥವಾ ಜಬೀವುಲ್ಲಾ ಅವರಿಗೆ ನೀಡಿದ್ದು ನಕಲಿ ದಾಖಲೆಯೇ ಎಂಬುದು ಪೊಲೀಸರ ತನಿಖೆಯಿಂದ ತಿಳಿಯಬೇಕಾಗಿದೆ.

ಉದ್ಯೋಗದ ಆಮಿಷ; ಕಮಿಷನ್ ಆಸೆ ತೋರಿಸಿ ಇಬ್ಬರಿಗೆ ಲಕ್ಷಾಂತರ ರೂ. ವಂಚನೆ

ಮುಂದುವರೆದ ಆನ್‌ಲೈನ್ ದೋಖಾ

ಮೈಸೂರು, ಡಿ. 18– ಡೆನ್ಮಾರ್ಕ್‌ನ ಕಂಪನಿಯೊಂದರಲ್ಲಿ ಉದ್ಯೋಗ ದೊರೆತಿರುವುದಾಗಿ ಆಫರ್ ಲೆಟರ್ ಕಳುಹಿಸಿ ವ್ಯಕ್ತಿಯೊಬ್ಬರಿಗೆ ಆನ್‌ಲೈನ್ ಮೂಲಕ 2.20 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಕುವೆಂಪುನಗರ 2ನೇ ಹಂತದ ನಿವಾಸಿ ಸಿ.ಕೆ.ಗಣೇಶ್(62) ವಂಚನೆಗೊಳಗಾದವರಾಗಿದ್ದು, ಇವರಿಗೆ ಡೆನ್ಮಾರ್ಕ್‌ನ ಕಂಪನಿಯೊಂದರಲ್ಲಿ ಕೆಲಸ ಕೊಡುವ ಬಗ್ಗೆ ಆಫರ್ ಲೆಟರ್ ಅನ್ನು ಇ–ಮೇಲ್ ಮೂಲಕ ರವಾನಿಸಲಾಗಿತ್ತು. ಇವರು ಕೆಲಸಕ್ಕೆ ಸೇರಲು ಒಪ್ಪಿಗೆ ಸೂಚಿಸಿದ ನಂತರ ನವದೆಹಲಿಯಲ್ಲಿ ನೋರಾ ಎಂಬ ವಕೀಲರನ್ನು ಸಂಪರ್ಕಿಸುವಂತೆ ಅವರಿಗೆ ತಿಳಿಸಲಾಗಿತ್ತು. ಅದರಂತೆ ಗಣೇಶ್ ಅವರು, ವಕೀಲ ನೋರಾ ಅವರ ಮೊಬೈಲ್ ಸಂಖ್ಯೆ 8119881706ಗೆ ಕರೆ ಮಾಡಿದಾಗ ಪ್ರಾರಂಭದಲ್ಲಿ ವೀಸಾ ಪಡೆಯಲು 31,400 ರೂ. ಹಣ ಪಾವತಿಸಬೇಕೆಂದು ತಿಳಿಸಿ ವರ್ಗಾವಣೆ ಮಾಡಿಸಿಕೊಳ್ಳಲಾಯಿತು. ನಂತರ ವಿವಿಧ ಕಾರಣಗಳನ್ನು ಹೇಳಿ ಒಟ್ಟು 2,20,550 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮಹಿಳೆಗೆ ವಂಚನೆ: ಮತ್ತೊಂದು ಪ್ರಕರಣದಲ್ಲಿ ಬೋಗಾದಿ ಎರಡನೇ ಹಂತದ ಮಹಿಳೆ ಆರ್.ಜಮುನಾ(43) ಅವರಿಗೆ ವಾಟ್ಸಾಪ್ ಮೂಲಕ ಯುಟ್ಯೂಬ್‌ನಲ್ಲಿ ರಿವಿವ್ಯೂ ಮಾಡಿದರೆ ಹೆಚ್ಚಿನ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿ 1.33 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಮದುವೆಗೆ ಮುನ್ನವೇ ‘ವರದಕ್ಷಿಣೆ ಡಿಮ್ಯಾಂಡ್’; ವಿದ್ಯಾರ್ಥಿನಿ ಆತ್ಮಹತ್ಯೆ

ಮೈಸೂರು, ಡಿ. 18– ಪ್ರೀತಿಸಿದ ಯುವಕ ಹಾಗೂ ಆತನ ಮನೆಯವರು ಮದುವೆಗೂ ಮುನ್ನವೇ ವರದಕ್ಷಿಣೆಗೆ ಒತ್ತಾಯಿಸಿದ್ದರಿಂದ ಮನನೊಂದ ಕಾನೂನು ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಊಟಿ ನಿವಾಸಿಯಾಗಿದ್ದು, ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ 4ನೇ ವರ್ಷದ 7ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿ.ಕವಿಶ(21) ಆತ್ಮಹತ್ಯೆಗೆ ಶರಣಾದವರಾಗಿದ್ದು, ಈಕೆ ಕಿರಣ್ ಎಂಬಾತನನ್ನು ಪ್ರೀತಿಸುತ್ತಿದ್ದಳು. ಎರಡೂ ಮನೆಯವರು ಇವರಿಬ್ಬರಿಗೂ ಮದುವೆ ಮಾಡಲು ತೀರ್ಮಾನಿಸಿ ಕಳೆದ ಸೆಪ್ಟೆಂಬರ್ 17ರಂದು ನಿಶ್ಚಿತಾರ್ಥ ಕಾರ್ಯವೂ ನಡೆದಿತ್ತು. ಆದರೆ, ನಿಶ್ಚಿತಾರ್ಥದ ನಂತರ ಕವಿಶ ಪ್ರಿಯಕರ ಕಿರಣ್, ಆತನ ತಂದೆ ಸೇತುಮಾಧವನ್, ತಾಯಿ ಲತಾ ಹಾಗೂ ಕಿರಣ್‌ನ ಮಾವ ಮದುವೆಗೆ ಚಿನ್ನ ಮತ್ತು ಎಕ್ಸ್‌ಯುವಿ ಕಾರ್ ವರದಕ್ಷಿಣೆಯಾಗಿ ಕೊಡಬೇಕು. ಇಲ್ಲದಿದ್ದರೆ ಮದುವೆ ಸಾಧ್ಯವಿಲ್ಲ ಎಂದು ಹೇಳಿದ್ದರಿಂದ ಮಾನಸಿಕವಾಗಿ ಜರ್ಝರಿತಳಾಗಿದ್ದ ಕವಿಶ, ಡಿ.16ರಂದು ಸಂಜೆ ತಾನು ವಾಸ್ತವ್ಯವಿದ್ದ ಹಾಸ್ಟೆಲ್‌ನ ಕೊಠಡಿಯಲ್ಲಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಈ ಸಂಬಂಧ ಕವಿಶ ತಂದೆ, ಉದ್ಯಮಿ ಬಿ.ವಿಜಯಕುಮಾರನ್ ನೀಡಿದ ದೂರಿನನ್ವಯ ಕುವೆಂಪುನಗರ ಠಾಣೆ ಪೊಲೀಸರು ವರದಕ್ಷಿಣೆ ಕಿರುಕುಳ ಹಾಗೂ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಅಮೆಜಾನ್ ಕಂಪನಿ ಹೆಸರಲ್ಲಿ ಗೃಹಿಣಿಗೆ 1.6 ಲಕ್ಷ ವಂಚನೆ

ಬನ್ನೂರು,ಡಿ.18–ಅಮೆಜಾನ್ ಕಂಪನಿಯ ಪ್ರಾಡಕ್ಟ್‌ಗಳನ್ನು ಖರೀದಿಸಿ, ಹಣ ಹೂಡಿಕೆ ಮಾಡಿ ರೇಟಿಂಗ್ ನೀಡಿದರೆ ಕಮಿಷನ್ ದೊರೆಯುತ್ತದೆ ಎಂದು ನಂಬಿಸಿ ಗೃಹಿಣಿಗೆ ಆನ್‌ಲೈನ್ ಮೂಲಕ 1.64 ಲಕ್ಷ ರೂ. ವಂಚಿಸಲಾಗಿದೆ. ತಿ.ನರಸೀಪುರ ತಾಲೂಕು ದೊಡ್ಡಮುಲಗೂಡು ಗ್ರಾಮದ ಗೃಹಿಣಿ ವಿದ್ಯಾಶ್ರೀ(32) ವಂಚನೆಗೊಳಗಾದವರಾಗಿದ್ದು, 9821814045 ಸಂಖ್ಯೆಯಿಂದ ಇವರಿಗೆ ವಾಟ್ಸಾಪ್ ಮಾಡಿ ಅಮೆಜಾನ್ ಕಂಪನಿಯಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿ, ಪ್ರಾಡಕ್ಟ್‌ಗಳನ್ನು ಖರೀದಿಸಿ ರೇಟಿಂಗ್ ನೀಡಿದರೆ ಕಮಿಷನ್ ದೊರೆಯುತ್ತದೆ ಎಂದು ನಂಬಿಸಲಾಗಿದೆ. ವಿದ್ಯಾಶ್ರೀಯವರು 1,64,220 ರೂ. ಹೂಡಿಕೆ ಮಾಡಿದ ನಂತರ ಅವರಿಗೆ 1,37,250 ರೂ. ಕಮಿಷನ್ ಬಂದಿರುವುದಾಗಿಯೂ, ಹೂಡಿಕೆ ಹಣ ಮತ್ತು ಕಮಿಷನ್ ಸೇರಿ ಒಟ್ಟು 3,01,470 ರೂ.ಗಳನ್ನು ನೀಡುವುದಾಗಿ ತಿಳಿಸಿದ ವಂಚಕರು, ಈ ಹಣಕ್ಕೆ ಹಂತ ಹಂತವಾಗಿ ತೆರಿಗೆ ಪಾವತಿಸಿ ಪಡೆಯಬೇಕು ಎಂದು ಷರತ್ತು ವಿಧಿಸಿದ್ದಾರೆ. ವಿದ್ಯಾಶ್ರೀ ಅವರು ಈ ಸಂಬಂಧ ಅಮೆಜಾನ್ ಕಂಪನಿಯನ್ನು ಸಂಪರ್ಕಿಸಿದಾಗ ತಾವು ಹಣ ಹೂಡಿಕೆ ಮಾಡಿರುವುದು ನಕಲಿ ಕಂಪನಿ ಎಂದು ಮನವರಿಕೆಯಾದ ನಂತರ ಬನ್ನೂರು ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

ಟ್ರೇಸೇಬಲ್ ‘ರ್‍ಯಾಂಡ್‌ಪ್ಯೂರ್’ ಚಿನ್ನದ ಖರೀದಿಗಾಗಿ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಿಂದ ರ್‍ಯಾಂಡ್ ರಿಫೈನರಿ ಜೊತೆ ಒಪ್ಪಂದ



ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಅಂತಾರಾಷ್ಟ್ರೀಯ ಕಾರ್ಯಾಚರಣೆಗಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶಾಮ್‌ಲಾಲ್ ಅಹ್ಮದ್, ರ್‍ಯಾಂಡ್ ರಿಫೈನರಿಯ ಸಿಇಒ ಪ್ರವೀಣ್ ಬೈಜನಾಥ್ ಅವರಿಂದ ಶೇ.100ರಷ್ಟು ಟ್ರೇಸೇಬಲ್ ಮತ್ತು ಎಥಿಕಲಿ ಮೂಲದಿಂದ ತೆಗೆದ ‘ರ್‍ಯಾಂಡ್‌ಪ್ಯೂರ್’ ಚಿನ್ನದ ಮೊದಲ ಶಿಪ್‌ಮೆಂಟ್ ಅನ್ನು ಸ್ವೀಕರಿಸಿದರು. ಈ ವೇಳೆ ರ್‍ಯಾಂಡ್ ರಿಫೈನರಿಯ ಸಿಎಫ್‌ಒ ಡೀನ್ ಸುಬ್ರಮಣ್ಯನ್ ಮತ್ತು ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಬೆಂಗಳೂರು,ಡಿ.18– ಮುಂಚೂಣಿಯಲ್ಲಿರುವ ರೀಟೇಲರ್ ಜ್ಯುವೆಲ್ಲರಿ ಸಂಸ್ಥೆಯಾಗಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್ ಸಂಸ್ಥೆಯು ವಿಶ್ವದ ಹೆಸರಾಂತ ಚಿನ್ನ ಮತ್ತು ಬೆಳ್ಳಿ ರಿಫೈನರಿ ಸಂಸ್ಥೆಗಳಲ್ಲಿ ಒಂದಾಗಿರುವ ರ್‍ಯಾಂಡ್ ರಿಫೈನರಿಯೊಂದಿಗೆ ಪಾಲುದಾರಿಕೆಯನ್ನು ಮಾಡಿಕೊಂಡಿದೆ. ‘ರ್‍ಯಾಂಡ್‌ಪ್ಯೂರ್’ ಚಿನ್ನವನ್ನು ಖರೀದಿ ಮಾಡಲು ಈ ಪಾಲುದಾರಿಕೆಯನ್ನು ಮಾಡಿಕೊಳ್ಳಲಾಗಿದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಅಂತಾರಾಷ್ಟ್ರೀಯ ಕಾರ್ಯಾಚರಣೆಗಳ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶಾಮ್‌ಲಾಲ್ ಅಹ್ಮದ್ ಅವರು ರ್‍ಯಾಂಡ್ ರಿಫೈನರಿಯ ಸಿಇಒ ಪ್ರವೀಣ್ ಬೈಜನಾಥ್ ಅವರಿಂದ ಶೇ.100ರಷ್ಟು ಟ್ರೇಸೇಬಲ್ ಮತ್ತು ಎಥಿಕಲಿ ಮೂಲದ ‘ರ್‍ಯಾಂಡ್‌ಪ್ಯೂರ್’ ಚಿನ್ನದ ಮೊದಲ ಶಿಪ್‌ಮೆಂಟ್ ಅನ್ನು ಸ್ವೀಕರಿಸಿದರು.

ಈ ವೇಳೆ ರ್‍ಯಾಂಡ್ ರಿಫೈನರಿಯ ಸಿಎಫ್‌ಒ ಡೀನ್ ಸುಬ್ರಮಣ್ಯನ್ ಮತ್ತು ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಲಂಡನ್ ಬುಲಿಯನ್ ಮಾರ್ಕೆಟ್ ಅಸೋಸಿಯೇಶನ್‌ನಿಂದ ಮಾನ್ಯತೆ ಪಡೆದಿರುವ ರ್‍ಯಾಂಡ್ ರಿಫೈನರಿ ಜಗತ್ತಿನ ದಕ್ಷಿಣ ಭಾಗದಲ್ಲಿ ಏಕೈಕ ರಿಫೈನರ್ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ.

ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ. ಅಹ್ಮದ್ ಮಾತನಾಡಿ, ಸುಸ್ಥಿರತೆ ಮತ್ತು ಜವಾಬ್ದಾರಿಯುತವಾದ ವ್ಯಾಪಾರ ಅಭ್ಯಾಸಗಳು ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿನ ನಮ್ಮ ಕಾರ್ಯಾಚರಣೆಗಳ ತಿರುಳನ್ನು ರೂಪಿಸಿವೆ. ರ್‍ಯಾಂಡ್ ರಿಫೈನರಿಯೊಂದಿಗಿನ ನಮ್ಮ ಸಹಯೋಗ ಮತ್ತು ರ್‍ಯಾಂಡ್‌ಪ್ಯೂರ್ ಚಿನ್ನದ ಸಂಗ್ರಹದ ಮೂಲಕ ನಾವು ಕಟ್ಟುನಿಟ್ಟಾದ ಉದ್ಯಮದ ಮಾನದಂಡಗಳನ್ನು ಪೂರೈಸುವ ಚಿನ್ನವನ್ನು ಆಯ್ಕೆ ಮಾಡುವ ಜವಾಬ್ದಾರಿಯುತವಾದ ಮತ್ತು ನೈತಿಕ ಸೋರ್ಸಿಂಗ್‌ಗೆ ಬದ್ಧತೆಯನ್ನು ಪುನರುಚ್ಚರಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಮಲಬಾರ್ ಗೋಲ್ಡ್ & ಡೈಮಂಡ್ಸ್ ಜಗತ್ತಿನಾದ್ಯಂತ 12 ದೇಶಗಳಲ್ಲಿ 335 ಸ್ಟೋರ್‌ಗಳನ್ನು ಹೊಂದಿದ್ದು, ವಿಶ್ವದ 6 ನೇ ಅತಿ ದೊಡ್ಡ ಆಭರಣ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 1993ರಲ್ಲಿ ಆರಂಭವಾದ ದಿನದಿಂದ ಇಎಸ್‌ಜಿ (ಪರಿಸರ, ಸಾಮಾಜಿಕ & ಆಡಳಿತ) ಉಪಕ್ರಮವನ್ನು ಮುಂದುವರಿಸಿಕೊಂಡು ಬಂದಿದ್ದು, ಬರುವ ನಿವ್ವಳ ಲಾಭದಲ್ಲಿ ಶೇ.5ರಷ್ಟು ಲಾಭಾಂಶವನ್ನು ಈ ಕಾರ್ಯಗಳಿಗಾಗಿ ಮೀಸಲಿಟ್ಟಿದೆ.

ಕೌಶಲ್ಯ ಬಲವರ್ಧನೆ ಮೂಲಕ ಉದ್ಯಮಗಳ ಮೌಲ್ಯ ವೃದ್ಧಿ



ಮೈಸೂರು, ಡಿ. 18(ಆರ್‌ಕೆ)– ಕೌಶಲ್ಯ ಬಲವರ್ಧನೆ ಮೂಲಕ ಕೈಗಾರಿಕಾ ಉದ್ಯಮಗಳ ಮೌಲ್ಯ ವೃದ್ಧಿಯಾಗಲಿದೆ ಎಂದು ಎಂಸಿಎಕ್ಸ್ (ಬ್ಯುಸಿನೆಸ್ ಡೆವೆಲಪ್‌ಮೆಂಟ್) ಮುಖ್ಯಸ್ಥ ಜಿ.ಅಂಜನ ಕುಮಾರ್ ತಿಳಿಸಿದ್ದಾರೆ.

ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯಮಶೀಲತೆ ಮಂತ್ರಾಲಯ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ ಮತ್ತು ಮೈಸೂರು ಕೈಗಾರಿಕೆಗಳ ಸಂಘ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಎಂಐಎ ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ ವಿಶ್ವಬ್ಯಾಂಕ್ ನೆರವಿನ ಕೈಗಾರಿಕೆ ಮತ್ತು ಎಂಎಸ್‌ಎಂಇ, ಉದ್ಯಮಗಳಲ್ಲಿ ಅಪ್ರೆಂಟಿಶಿಪ್ ತರಬೇತಿ ಮುನ್ನಡೆಗಾಗಿ ಕೌಶಲ್ಯ ಬಲವರ್ಧನೆ ಮೂಲಕ ಉದ್ಯಮಗಳ ಮೌಲ್ಯ ವೃದ್ಧಿ ಯೋಜನೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಅಲ್ಯೂಮಿನಿಯಂ, ಕಾಪರ್, ಲೀಡ್, ನಿಕ್ಕಲ್ ಹಾಗೂ ಇತರ ಮೂಲ ಮೆಟಲ್‌ಗಳ ಬದಲಾವಣೆ ಹಾಗೂ ಫೆರ್ರಸ್ ಅಲ್ಲದೆ ಮೆಟಲ್‌ಗಳು, ಕೈಗಾರಿಕಾ ಉತ್ಪನ್ನಗಳ ಬೆಲೆ ಮೇಲೆ ಪರಿಣಾಮ ಬೀರಲಿವೆ. ಅಲ್ಲದೇ ಬೆಲೆ ಅಪಾಯವನ್ನು ಎದುರಿಸಲು ಬೇಸ್ ಮೆಟಲರ್‌ಗಳ ಡೆಲಿವರಿ ಪ್ರಕ್ರಿಯೆಗಳನ್ನು ನಿಯಂತ್ರಿಸುತ್ತವೆ ಎಂದರು. ಮೈಸೂರು ಕೈಗಾರಿಕೆಗಳ ಸಂಘದ ಕಾರ್ಯಾಧ್ಯಕ್ಷ ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಕಾರ್ಯದರ್ಶಿ ಎನ್.ಸತೀಶ್, ಕೋಶಾಧಿಕಾರಿ ಶ್ರೀಶೈಲ ರಾಮಣ್ಣವರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮದ್ಯ ತಯಾರಿಕೆ; ಮಾರಾಟ ನಿಷೇಧ



ಮೈಸೂರು, ಡಿ. 18– ಮೈಸೂರು ಜಿಲ್ಲೆಯ ನಂಜನಗೂಡು ನಗರಸಭೆ ವ್ಯಾಪ್ತಿಯ ವಾರ್ಡ್ ನಂ.20ರ ಉಪಚುನಾವಣೆ ಡಿ.27ರಂದು ನಡೆಯಲಿದ್ದು, ವಾರ್ಡಿನ ವ್ಯಾಪ್ತಿಯಲ್ಲಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮತ್ತು ಶಾಂತಿಯುತವಾಗಿ ಮತದಾನ ನಡೆಸುವ ಸಂಬಂಧ ಮುನ್ನೆಚ್ಚರಿಕೆಯಿಂದ ನಂಜನಗೂಡು ನಗರ ವ್ಯಾಪ್ತಿಯಲ್ಲಿ ಡಿ.25 ಮಧ್ಯರಾತ್ರಿ 12ರಿಂದ ಡಿ.27 ಮಧ್ಯರಾತ್ರಿ 12ರವರೆಗೆ ಎಲ್ಲಾ ವಿಧದ ಮದ್ಯ ತಯಾರಿಕೆ, ಮಾರಾಟ, ಶೇಖರಣೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿರುತ್ತಾರೆ.

ಗ್ರಾಹಕರ ಆರೋಗ್ಯ ದೃಷ್ಟಿಯಿಂದ ವ್ಯಾಪಾರಿಗಳು ಎಫ್‌ಎಸ್‌ಎಸ್‌ಎಐ ಪರವಾನಗಿ ಪಡೆಯಬೇಕು

ಜಿಲ್ಲಾ ಅಂಕಿತ ಅಧಿಕಾರಿ ಡಾ.ಕಾಂತರಾಜು ಸೂಚನೆ



ಮೈಸೂರು, ಡಿ.18(ಎಸ್‌ಬಿಡಿ)– ಗ್ರಾಹಕರ ಆರೋಗ್ಯ ಕಾಳಜಿ ದೃಷ್ಟಿಯಿಂದ ಆಹಾರ ಪದಾರ್ಥ ತಯಾರಿಸುವ ಹಾಗೂ ಮಾರುವ ವ್ಯಾಪಾರಸ್ಥರು ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ)ದಿಂದ ಕಡ್ಡಾಯವಾಗಿ ಪರವಾನಗಿ ಪಡೆದಿರಬೇಕು ಎಂದು ಮೈಸೂರು ಜಿಲ್ಲಾ ಅಂಕಿತ ಅಧಿಕಾರಿ ಡಾ.ಕಾಂತರಾಜ್ ತಿಳಿಸಿದರು.

ಮೈಸೂರಿನ ಹೂಟಗಳ್ಳಿ ಕೆಎಚ್‌ಬಿ ಬಡಾವಣೆಯ ವರ್ತಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಘದ ಸಭಾಂಗಣದಲ್ಲಿ ನಡೆದ ನೂತನ ಸದಸ್ಯರಿಗೆ ಸಂಘದ ಗುರುತಿನ ಚೀಟಿ ಹಾಗೂ ಪ್ರಮಾಣ ಪತ್ರ ವಿತರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಆಹಾರ ಉತ್ಪನ್ನಗಳನ್ನು ತಯಾರಿಸುವ ಹಾಗೂ ಸಂಗ್ರಹಿಸುವ ಸ್ಥಳದ ಮೇಲೆ ದಾಳಿ ನಡೆಸಿ, ಪರಿಶೀಲಿಸುವ ಅಧಿಕಾರ ಆಹಾರ ಇಲಾಖೆ ಅಧಿಕಾರಿಗಳಿಗಿದೆ. ಕಲಬೆರಕೆ ಹಾಗೂ ಗುಣಮಟ್ಟವಿಲ್ಲದ ಆಹಾರ ಉತ್ಪನ್ನಗಳನ್ನು ತಯಾರಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಅವಕಾಶವಿದೆ. ಪ್ರತಿ ಜಿಲ್ಲೆಗಳಲ್ಲೂ ನಿಯೋಜಿತ ಅಧಿಕಾರಿಗಳು ಆಹಾರ ಉತ್ಪನ್ನಗಳನ್ನು ತಯಾರಿಸುವವರಿಗೆ ಪರವಾನಗಿಯನ್ನು ನೀಡುವ, ರದ್ದು ಮಾಡುವ, ಪರಿಶೀಲನೆ ನಡೆಸುವ, ದೂರುಗಳನ್ನು ಸ್ವೀಕರಿಸುವ ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗಾಗಿ ವ್ಯಾಪಾರಸ್ಥರು ಇಲಾಖೆಯ ಕಾನೂನು ಪಾಲನೆಗೆ ಸ್ಪಂದಿಸಬೇಕು ಎಂದು ತಿಳಿಸಿದರು.

ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ವ್ಯಾಪಾರಸ್ಥರು ಪೈಪೋಟಿ ನಡುವೆ ಒತ್ತಡದ ಬದುಕು ಸಾಗಿಸುತ್ತಿದ್ದಾರೆ. ನಿತ್ಯ ಒಂದು ಗಂಟೆಯಾದರೂ ಬಿಡುವು ಮಾಡಿಕೊಂಡು ವ್ಯಾಯಾಮ ಇನ್ನಿತರ ಚಟುವಟಿಕೆಗಳ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಜೊತೆಗೆ ಗ್ರಾಹಕರ ಆರೋಗ್ಯದ ಕಾಳಜಿಗಾಗಿ ಆಹಾರ ಪದಾರ್ಥ ತಯಾರಿಸುವ ಹಾಗೂ ಮಾರುವ ವ್ಯಾಪಾರಸ್ಥರು ಎಫ್‌ಎಸ್‌ಎಸ್‌ಎಐ ಪರವಾನಗಿ ಪಡೆದು ನಿಯಮಬದ್ಧವಾಗಿ ಕಾರ್ಯ ನಿರ್ವಹಣೆ ಮಾಡಬೇಕು ಎಂದು ಸಲಹೆ ನೀಡಿದರು.

ಆಹಾರ ಸುರಕ್ಷತೆ ಇಲಾಖೆ ತರಬೇತಿ ಅಧಿಕಾರಿ ರಮ್ಯಾ ಮಾತನಾಡಿ, ಆಹಾರ ಉತ್ಪನ್ನಗಳಲ್ಲಿ ಉತ್ತಮ ಗುಣಮಟ್ಟ ಕಾಪಾಡಲು ತಯಾರಕರ ಮೇಲಿನ ಹಿಡಿತವನ್ನು ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ ಮತ್ತಷ್ಟು ಬಿಗಿಗೊಳಿಸಿದೆ. ಹಾಗಾಗಿ ವರ್ತಕರು ತಮ್ಮ ಆರೋಗ್ಯದ ಜೊತೆಗೆ ಗ್ರಾಹಕರ ಆರೋಗ್ಯವನ್ನೂ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕು. ಇದಕ್ಕೆ ಪೂರಕವಾಗಿ ಇಲಾಖೆ ಅಧ್ಯಯನ ಕೇಂದ್ರದಲ್ಲಿ ಸೂಕ್ತ ತರಬೇತಿ ನೀಡಿ, ಪ್ರಮಾಣ ಪತ್ರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಎಂ.ಶಿವಣ್ಣ ಮಾತನಾಡಿ, ವ್ಯಾಪಾರಕ್ಕೆ ಅಗತ್ಯವಾದ ಎಲ್ಲಾ ರೀತಿಯ ಪರವಾನಗಿ ಪಡೆಯಲು ಮಾಹಿತಿ ಕೊರತೆಯಿಂದ ಮಧ್ಯವರ್ತಿಗಳ ಮೊರೆ ಹೋಗಿ ಹೆಚ್ಚು ಹಣ ಕಳೆದುಕೊಳ್ಳುತ್ತಿದ್ದರು. ಹಲವರು ಪರವಾನಗಿಯೂ ಸಿಗದೆ ಮೋಸಹೋಗಿರುವ ನಿದರ್ಶನಗಳೂ ಇವೆ. ಇದನ್ನು ತಪ್ಪಿಸುವುದರ ಜೊತೆಗೆ ವರ್ತಕರಿಗೆ ಸೂಕ್ತ ಮಾರ್ಗದರ್ಶನ ಹಾಗೂ ನೆರವು ನೀಡುವ ಉದ್ದೇಶದಿಂದ ಸ್ಥಳೀಯ ವರ್ತಕರೆಲ್ಲಾ ಸೇರಿ ಕ್ಷೇಮಾಭಿವೃದ್ಧಿ ಸಂಘ ಸ್ಥಾಪಿಸಿದ್ದೇವೆ ಎಂದರು. ಇದೇ ವೇಳೆ ಸಂಘಕ್ಕೆ ನೂತನವಾಗಿ ಸದಸ್ಯತ್ವ ಪಡೆದಿರುವ 81 ಸದಸ್ಯರಿಗೆ ಗುರುತಿನ ಚೀಟಿ ಹಾಗೂ ಪ್ರಮಾಣಪತ್ರ ವಿತರಿಸಲಾಯಿತು. ಮಾತೃಶ್ರೀ ಡಯಾಗ್ನಸಿಸ್ ಲ್ಯಾಬ್ ವತಿಯಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಿತು. ಕಾರ್ಯಕ್ರಮದಲ್ಲಿ ಸಂಘದ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

ಮಂಡ್ಯದಲ್ಲಿ ಭ್ರೂಣ ಹತ್ಯೆ ನಂತರ ಪ್ರಾಣಿಗಳ ಮೂಳೆಗಳು ಪತ್ತೆ

ಕೊಳೆತ ಸ್ಥಿತಿಯಲ್ಲಿ ದನ, ಎಮ್ಮೆಯ ತಲೆಗಳು, ಮೂಳೆಗಳ ಸಂಗ್ರಹ





ಮಂಡ್ಯ, ಡಿ.18– ಇಡೀ ರಾಜ್ಯವೇ ಬೆಚ್ಚಿ ಬೀಳಿಸುವ ರೀತಿಯಲ್ಲಿ ಮಂಡ್ಯದ ಆಲೆಮನೆಯಲ್ಲಿ ಭ್ರೂಣ ಪತ್ತೆ ಮತ್ತು ಹತ್ಯೆ ಪ್ರಕರಣ ಮಾಸುವ ಮುನ್ನವೇ ಪ್ರಾಣಿಗಳಿಂದ ಸಂಗ್ರಹಿಸಿದ ಮೂಳೆಗಳಿಂದ ಪೌಡರ್ ಮಾಡುವ ಜಾಲಕ್ಕೆ ಆಲೆಮನೆ ಬಳಕೆಯಾಗುತ್ತಿದೆ ಎಂಬ ಆರೋಪವು ಕೇಳಿಬಂದಿದೆ.

ತಾಲೂಕಿನ ತೂಬಿನಕೆರೆ ಗ್ರಾಮದ ಹೊರವಲಯದಲ್ಲಿರುವ ಗ್ರಾಮದ ಲಿಂಗರಾಜು ಅವರಿಗೆ ಸೇರಿದ ಜಮೀನಿನ ಒಂದು ಗೋದಾಮುವಿನಲ್ಲಿ ಖಾಸಗಿ ವ್ಯಕ್ತಿಯೊಬ್ಬರು ದನ, ಎಮ್ಮೆ ಮೂಳೆಗಳು ಮತ್ತು ತಲೆಗಳ ಸಂಗ್ರಹಿಸಿರುವ ವೀಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಾ ಜಿಲ್ಲೆಯಲ್ಲಿ ಆತಂಕ ಉಂಟುಮಾಡಿದೆ.

ಕಳೆದ ಒಂದು ವಾರದಿಂದೀಚೆಗೆ ಗಬ್ಬುನಾರುವ ವಾಸನೆ ಊರೆಲ್ಲ ಹಬ್ಬಿದ್ದು, ಅಲ್ಲಿನ ಕೃಷಿಕರು ತಮ್ಮ ಹೊಲಗಳಿಗೆ ಹೋಗುವುದಕ್ಕೆ ಮತ್ತು ನಿವಾಸದ ಮನೆಗಳಿಗೆ ಹೋಗಲು ಬಾಯಿ ಮತ್ತು ಮೂಗು ಮುಚ್ಚಿಕೊಂಡು ಹೋಗುವ ಸ್ಥಿತಿಯಿಂದ ಜನರು ಹೆಣಗಾಡುವಂತಾಗಿದೆ.

ಈ ವಾಸನೆಯು ಏನಿರಬಹುದು? ಎಂಬುದನ್ನು ಗ್ರಾಮಸ್ಥರು ಗಮನಿಸಿ ಸ್ಥಳಕ್ಕೆ ಹೋಗಿ ನೋಡಿದಾಗ, ಕೊಳೆತು ನಾರುತ್ತಿರುವ ದನ, ಎಮ್ಮೆಯ ಮೂಳೆಗಳು ಮತ್ತು ಅದರ ತಲೆಗಳು ನಾರುತ್ತಿರುವ ದೃಶ್ಯ ನೋಡಿ ಗ್ರಾಮಸ್ಥರು ಆಶ್ಚರ್ಯಪಟ್ಟಿದ್ದಾರೆ. ತಕ್ಷಣವೇ ತನ್ನೂರಿನ ಗ್ರಾಮ ಪಂಚಾಯಿತಿಗೆ ದೂರು ನೀಡಿದ್ದಾರೆ. ಪಿಡಿಒ ಅವರು ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿ ಕಳುಹಿಸಿದ್ದಾರೆ. ಆದರೆ ಇಷ್ಟು ದಿನಗಳಾದರೂ ಸಹ ಕ್ರಮ ತೆಗೆದುಕೊಳ್ಳದಿರುವುದಕ್ಕೆ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತದನಂತರ ಭಾನುವಾರ ಭರ್ಜರಿ ಬಾಯ್ಸ್ ಯುವಕರ ತಂಡದವರು ಸ್ಥಳಕ್ಕೆ ಹೋಗಿ ವಿಡಿಯೋ ಮತ್ತು ಫೋಟೋಗಳನ್ನು ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಇದರಿಂದ ಎಚ್ಚೆತ್ತ ಗೋಡೌನ್ ಮಾಲೀಕ ಲಿಂಗರಾಜು ಅವರು ಬಾಡಿಗೆಗೆ ಪಡೆದಿದ್ದ ವ್ಯಕ್ತಿಯನ್ನು ಖಾಲಿ ಮಾಡುವಂತೆಯೂ ತಾಕೀತು ಮಾಡಿದ್ದಾರೆ ಎನ್ನಲಾಗಿದೆ. ಗ್ರಾಮಸ್ಥರಿಗೆ ಗಬ್ಬು ನಾರುತ್ತಿರುವ ವಾಸನೆ ಬಡಿದಿದೆ, ಕೃಷಿ ಚಟುವಟಿಕೆಗಳಿಗೆ ರೈತರು ಹಾಗೂ ವಾಸದ ಮನೆಗಳಿಗೆ ಹೋಗುವ ಜನರು ಮೂಗು ಮುಚ್ಚಿಕೊಂಡು ಕೆಟ್ಟ ವಾಸನೆ ಸಹಿಸಲಾರದೇ ಹೋಗುತ್ತಿದ್ದಾರೆ. ಜೊತೆಗೆ ಪ್ರಾಣಿಗಳ ಮೂಳೆಗಳನ್ನು ಇಲ್ಲಿ ಒಣಗಿಸಿ ಗ್ರಾಮದೊಳಗಿರುವ ಆಲೆಮನೆಯಲ್ಲಿ ಪೌಡರ್ ಮಾಡಲಾಗುತ್ತಿತ್ತು ಎಂಬ ಆರೋಪವನ್ನು ಗ್ರಾಮದ ಕೆಲವು ಯುವಕರು ಮಾಡುತ್ತಿದ್ದಾರೆ.

ರಾತ್ರೋರಾತ್ರಿ ಖಾಲಿ: ಲಿಂಗರಾಜು ಅವರಿಂದ ಗೋಡೌನ್ ಬಾಡಿಗೆ ಪಡೆದಿದ್ದ ಎನ್ನಲಾದ ವ್ಯಕ್ತಿ ರಾತ್ರೋರಾತ್ರಿಯೇ ಗೋಡೌನ್ ಅನ್ನು ಖಾಲಿ ಮಾಡಿದ್ದು, ಸೋಮವಾರ ಬೆಳಿಗ್ಗೆ ದೃಶ್ಯ ಮಾಧ್ಯಮದ ಪತ್ರಕರ್ತರು ಹಾಗೂ ಇನ್ನಿತರರು ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಒಂದು ಕುರುಹು ಸಹ ಇಲ್ಲದೇ ಇಡೀ ಗೋಡೌನ್ ಖಾಲಿಯಾಗಿತ್ತು.

ಅಧಿಕಾರಿಗಳ ನಿರ್ಲಕ್ಷ್ಯ: ಸಾವಿರಾರು ಮೂಕ ಪ್ರಾಣಿಗಳ ಮೂಳೆ ಮತ್ತು ತಲೆ ಪತ್ತೆಯಾದರೂ ಅಧಿಕಾರಿಗಳು ನೋಟೀಸ್ ನೀಡಿ ಸುಮ್ಮನಾಗಿದ್ದು, ಸ್ಥಳಕ್ಕೆ ಹೋಗಿ ಮಹಜರು ಅಥವಾ ಸಂಬಂಧಿಸಿದವರನ್ನು ವಿಚಾರಣೆ ಮಾಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯ ಹೀಗೇ ಮುಂದುವರೆದರೆ ಆಲೆಮನೆ, ಗೋಡೌನ್ ಅಂತಹ ಕಟ್ಟಡಗಳನ್ನು ಬಾಡಿಗೆ ಪಡೆದು ದುಷ್ಕರ್ಮಿಗಳು ಏನು ಬೇಕಾದರೂ ದಂಧೆ ನಡೆಸುವುದಕ್ಕೆ ಸಹಕಾರ ಕೊಟ್ಟಂತಾಗುತ್ತದೆ. ಅಧಿಕಾರಿಗಳು ಇನ್ನಾದರೂ ಇಂತಹ ಘಟನೆಗಳ ಬಗ್ಗೆ ತಕ್ಷಣವೇ ಜಾಗರೂಕತೆಯಿಂದ ಕ್ರಮ ವಹಿಸಬೇಕಿದೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಸಾದತ್ ನಗರದ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಾಗಿದೆ.

ಖಾಲಿ ಮಾಡಲು ತಿಳಿಸಿರುವೆ

ಖಾಲಿ ಬಾಟಲು ಮತ್ತು ಹಳೆಯ ಪೇಪರ್ ಸಂಗ್ರಹಕ್ಕೆ ಬೇಕು ಎಂದು ಮಂಡ್ಯದ ಸಾದತ್ ನಗರದ ವ್ಯಕ್ತಿ ಗೋಡೌನ್ ಬಾಡಿಗೆಗೆ ಪಡೆದಿದ್ದ. ಗ್ರಾಮಸ್ಥರ ಹಿತದೃಷ್ಟಿಯಿಂದ ಅವರನ್ನು ಖಾಲಿ ಮಾಡುವಂತೆ ಹೇಳಿರುವೆ.

– ಲಿಂಗರಾಜು, ಗೋಡೌನ್ ಮಾಲೀಕ, ತೂಬಿನಕೆರೆ.

ದೂರು ಬಂದ ಕೂಡಲೇ ನೋಟೀಸ್

ತೂಬಿನಕೆರೆ ಗ್ರಾಮಸ್ಥರು ದೂರು ನೀಡಿದ ತಕ್ಷಣವೇ ಜಮೀನು ಮಾಲೀಕ ಲಿಂಗರಾಜು ಅವರಿಗೆ ನೋಟೀಸ್ ನೀಡಿದ್ದೇನೆ. ಜೊತೆಗೆ ತಕ್ಷಣವೇ ಖಾಲಿ ಮಾಡಿಸುವಂತೆಯೂ ಸೂಚಿಸಲಾಗಿದೆ. ಪರವಾನಗಿಯನ್ನು ತೆಗೆದುಕೊಂಡಿಲ್ಲ ಇದು ಅಪರಾಧವಾಗಿದೆ, ತಕ್ಷಣವೇ ಖಾಲಿ ಮಾಡುತ್ತಾರೆ.

–ಸಿ.ಸ್ವಾಮಿ, ಪಿಡಿಒ, ತೂಬಿನಕೆರೆ.

ಎರಡು ವಾರ್ಡ್‌ಗಳ ಉಪಚುನಾವಣೆ: 7 ಮಂದಿ ಸ್ಪರ್ಧೆ

ಪಾಂಡವಪುರ, ಡಿ.18– ಪುರಸಭೆ 2 ಮತ್ತು 9 ನೇ ವಾರ್ಡ್ ಸದಸ್ಯ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಯ ನಾಮಪತ್ರ ವಾಪಸ್ಸು ಪಡೆಯುವ ಅಂತಿಮ ದಿನವಾದ ಸೋಮವಾರ ಮೂವರು ನಾಮಪತ್ರ ವಾಪಸ್ಸು ಪಡೆದರು. ಎರಡು ವಾರ್ಡ್‌ಗಳಿಂದ ಚುನಾವಣಾ ಕಣದಲ್ಲಿ 7 ಮಂದಿ ಇದ್ದಾರೆ.

2ನೇ ವಾರ್ಡ್‌ನಲ್ಲಿ ಮಧು(ಬಿಜೆಪಿ), ಯಶವಂತ್ ಕುಮಾರ್ (ಜೆಡಿಎಸ್), ಆರ್.ರಾಜೇಂದ್ರ (ಸರ್ವೋದಯ ಕರ್ನಾಟಕ ಪಕ್ಷ), ರೂಪ ಶಾಂತಿಪ್ರಸಾದ್ (ಕೆಆರ್ ಎಸ್ ಪಕ್ಷ) ಅಂತಿಮವಾಗಿ ಚುನಾವಣ ಕಣದಲ್ಲಿದ್ದಾರೆ. ಸರ್ವೋದಯ ಪಕ್ಷದ ಸ್ವಾಮಿ, ಪಕ್ಷೇತರ ಅಭ್ಯರ್ಥಿ ಗೀತಾ ನಾಮಪತ್ರ ಹಿಂಪಡೆದರು. 9ನೇ ವಾರ್ಡ್‌ನಲ್ಲಿ ಎನ್.ಸೋಮ ಶೇಖರ್ (ಬಿಜೆಪಿ), ಜ್ಯೋತಿಲಕ್ಷ್ಮೀ (ಜೆಡಿಎಸ್), ಎಸ್.ರಾಜು (ಸರ್ವೋದಯ ಕರ್ನಾಟಕ ಪಕ್ಷ) ಅಂತಿಮ ಕಣದಲ್ಲಿದ್ದಾರೆ. ಸರ್ವೋದಯ ಕರ್ನಾಟಕ ಪಕ್ಷದ ಸಂತೋಷ್ ನಾಮಪತ್ರ ವಾಪಸ್ಸು ಪಡೆದುಕೊಂಡಿದ್ದಾರೆ.

ಜಿಲ್ಲೆಯ ವಿವಿಧೆಡೆ ಅದ್ಧೂರಿ ಷಷ್ಠಿ ಪೂಜೆ



ಮಂಡ್ಯ, ಡಿ.18– ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಅದ್ಧೂರಿಯಾಗಿ ಷಷ್ಠಿ ಪೂಜೆ ನೆರವೇರಿಸಲಾಯಿತು.

ನಗರದ ಡಿಸಿ ಕಚೇರಿ ಹಿಂಭಾಗದಲ್ಲಿರುವ ಸುಬ್ರಹ್ಮಣ್ಯ ದೇಗುಲದಲ್ಲಿ ನಡೆದ ಷಷ್ಠಿ ಪೂಜೆಯಲ್ಲಿ 20 ಸಾವಿರಕ್ಕೂ ಅಧಿಕ ಭಕ್ತರು ಆಗಮಿಸಿ, ದೇವರ ದರ್ಶನ ಪಡೆದು ಪ್ರಸಾದ ಸವಿದರು. ಅದೇ ರೀತಿ ಶಂಕರನಗರದ ಸುಬ್ರಹ್ಮಣ್ಯ ದೇಗುಲ ಸೇರಿದಂತೆ ವಿವಿಧ ಕಡೆ ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪ್ರಸಾದ ಸವಿದರು. ಮಳವಳ್ಳಿ ತಾಲೂಕಿನ ಕಂದೇಗಾಲ ಹಾಗೂ ಕಲ್ಲುವೀರನಹಳ್ಳಿಯಲ್ಲಿ ನೆಲೆಗೊಂಡಿರುವ ಶ್ರೀಮತ್ತಿತಾಳೇಶ್ವರ ದೇವಾಲಯದಲ್ಲಿ ಷಷ್ಠಿ ಪೂಜೆಯ ಸಂಭ್ರಮೋತ್ಸವದ ಆಚರಣೆ ಮಾಡಲಾಯಿತು.

ಸಹಸ್ರಾರು ಭಕ್ತರು ಮತ್ತಿತಾಳೇಶ್ವರ ದೇವಾಲಯಕ್ಕೆ ಬಂದು ಭಕ್ತಿ ಭಾವೈಕ್ಯತೆಯಿಂದ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ನಾಗರಕಲ್ಲಿಗೆ ಮಹಿಳೆಯರು ಹಾಲು ತುಪ್ಪ ಹಣ್ಣು ಹೂಗಳನ್ನು ಅರ್ಪಿಸಿ ಧನ್ಯರಾದರು.

ದೇವಸ್ಥಾನದ ಆವರಣದಲ್ಲಿ ಅಡುಗೆ ಮಾಡಿ ಪ್ರಸಾದವನ್ನು ಭಕ್ತರಿಗೆ ವಿತರಣೆ ಮಾಡಲಾಯಿತು. ಶ್ರೀಮತ್ತಿತಾಳೇಶ್ವರ ದೇವರ ಉತ್ಸವ ಮೂರ್ತಿ ರಥೋತ್ಸವ ಬಹಳ ಸಂಭ್ರಮದಿಂದ ಜರುಗಿತು. ಮತ್ತಿತಾಳೇಶ್ವರಬಸಪ್ಪ ಹಾಗೂ ಹೊನ್ನಕನಹಳ್ಳಿ ಶ್ರೀ ಮಂಟೇಸ್ವಾಮಿ ಬಸಪ್ಪಾಳಿಗೆ ಕೊಳದ ಬಳಿ ಪೂಜೆ ಪುರಸ್ಕಾರಗಳನ್ನು ನೆರವೇರಿಸಿದರು.

ಪಾಂಡವಪುರ ವರದಿ: ಷಷ್ಠಿ ಹಬ್ಬದ ಪ್ರಯುಕ್ತ ಪಟ್ಟಣದ ಶ್ರೀ ಸುಬ್ರಮಣ್ಯ ದೇವಸ್ಥಾನದಲ್ಲಿ ಭಕ್ತಾದಿಗಳು ದೇವರಿಗೆ ಪೂಜೆ ಸಲ್ಲಿಸಿ, ನಾಗರ ದೇವತೆಗೆ ಹಾಲಿನ ಅಭಿಷೇಕ ಮಾಡಿ, ಹುತ್ತಕ್ಕೆ ಹಾಲೆರೆದು ಪೂಜೆ ಸಲ್ಲಿಸಿದರು.

ತಾಲೂಕಿನ ವಿವಿಧ ಗ್ರಾಮಗಳಿಂದ ಭಕ್ತಾದಿಗಳು ಬೆಳಗ್ಗಿನ ಜಾವದಿಂದಲೇ ದೇವಸ್ಥಾನದ ಆವರಣದಲ್ಲಿರುವ ನಾಗರ ದೇವರಿಗೆ ಪೂಜೆ ಸಲ್ಲಿಸಿ, ಶ್ರೀ ಸುಬ್ರಮಣ್ಯ ದೇವರಿಗೆ ಪೂಜೆ ಸಲ್ಲಿಸಿ, ಪ್ರಸಾದ ಪಡೆದುಕೊಂಡರು. ಬೆಳಗ್ಗಿನ ಜಾವದಿಂದ ರಾತ್ರಿ ತನಕ ಸಾವಿರಾರು ಭಕ್ತಾದಿಗಳು ದೇವಸ್ಥಾನಕ್ಕೆ ಆಗಮಿಸಿ, ದೇವರ ದರ್ಶನ ಪಡೆದು ಧನ್ಯರಾದರು.

ಅನೇಕ ಪುರುಷ ಭಕ್ತರು ದೇವಸ್ಥಾನದ ಹಿಂಭಾಗದಲ್ಲಿ ದೇವರಿಗೆ ಮುಡಿ ಅರ್ಪಿಸಿ, ವಿಶ್ವೇಶ್ವರಯ್ಯ ನಾಲೆಯಲ್ಲಿ ಸ್ನಾನ ಮಾಡುವ ಮೂಲಕ ಹರಕೆ ತೀರಿಸಿ, ದೇವರಿಗೆ ಪೂಜೆ ಸಲ್ಲಿಸಿದರು. ಭಕ್ತಾದಿಗಳು ಉಪವಾಸ ಮತ್ತು ಪೂಜೆಯಿಂದ ಪಾಪಗಳು ನಿವಾರಣೆಯಾಗುತ್ತದೆ, ತೊಂದರೆಗಳು ದೂರವಾಗುತ್ತವೆ, ಇಷ್ಟಾರ್ಥಗಳು ಈಡೇರುತ್ತವೆ ಎಂದು ನಂಬಲಾಗುತ್ತದೆ.



ಬರ ಪರಿಹಾರ ಫ್ರೂಟ್ಸ್ ಐಡಿಯಲ್ಲಿ ನೋಂದಣಿ ಕಡ್ಡಾಯ: ಡಿಸಿ ಕುಮಾರ



ಮಂಡ್ಯ, ಡಿ.18– ಸರ್ಕಾರದಿಂದ ರೈತರಿಗೆ ನೀಡಲಾಗುವ ಬರ ಪರಿಹಾರ ಹಣವನ್ನು ರೈತರ ಖಾತೆಗೆ ಜಮೆ ಮಾಡಲು ರೈತರು ಫ್ರೂಟ್ಸ್ ಐ.ಡಿ ಯಲ್ಲಿ ನೋಂದಣಿ ಮಾಡಿಕೊಂಡು ಜಮೀನಿನ ವಿವರ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದರು.

ಅವರು ಇಂದು ತಮ್ಮ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ನಾಲ್ಕು ದಿನದಲ್ಲಿ ಶೇ 100 ಸಾಧನೆಯಾಗಬೇಕು ಜಿಲ್ಲೆಯಲ್ಲಿ 1611337 ಪ್ಲಾಟ್‌ಗಳಿದ್ದು, 1211626 ಪ್ಲಾಟ್‌ಗಳು ನೋಂದಣಿಯಾಗಿ ಶೇ 75.2 ಸಾಧನೆಯಾಗಿರುತ್ತದೆ. ಬರ ಪರಿಹಾರ ಹಣ ಬಿಡುಗಡೆಯಾದರೆ ಪಾವತಿ ಕೆಲಸ ಪ್ರಾರಂಭವಾಗುತ್ತದೆ. ಈ ಸಮಯದಲ್ಲಿ ನೋಂದಣಿ ಕಷ್ಟಕರವಾಗಿರುತ್ತದೆ. ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಿ ನಾಲ್ಕು ದಿನಗಳಲ್ಲಿ ರೈತರ ಪ್ಲಾಟ್ ವಿವರ ಅಪ್‌ಲೋಡ್ ಮಾಡಿ ಶೇ.100 ಸಾಧನೆಯಾಗಬೇಕು ಎಂದರು.

ರೈತರಿಗೆ ಹಲವಾರು ಬಾರಿ ಫ್ರೂಟ್ಸ್ ಐ.ಡಿಯಲ್ಲಿ ನೋಂದಣಿ ಮಾಡಿಕೊಂಡು ವಿವರ ಅಪ್‌ಲೋಡ್ ಮಾಡುವಂತೆ ತಿಳಿಸಲಾಗಿದೆ. ಆದರೂ ಸಹ 399711 ಪ್ಲಾಟ್‌ಗಳು ನೋಂದಣಿ ಮಾಡಿಕೊಂಡಿರುವುದಿಲ್ಲ. ರೈತರು ಸಹ ಈ ಬಗ್ಗೆ ಕಾಳಜಿ ವಹಿಸಿ ತಮ್ಮ ಗ್ರಾಮದ ಕೃಷಿ, ಕಂದಾಯ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ 4 ದಿನದೊಳಗಾಗಿ ನೋಂದಣಿ ಮಾಡಿಕೊಳ್ಳುವುದು ಎಂದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಹೆಚ್ ಎಲ್ ನಾಗರಾಜು, ಜಂಟಿ ಕೃಷಿ ನಿರ್ದೇಶಕ ಅಶೋಕ, ತೋಟಗಾರಿಕೆ ಉಪನಿರ್ದೇಶಕಿ ರೂಪಶ್ರೀ, ತಹಶೀಲ್ದಾರ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅರಮನೆ ಅಂಗಳದಲ್ಲಿ ಫಲಪುಷ್ಪ ಪ್ರದರ್ಶನ

ಒಂದನೇ ಪುಟದಿಂದ



ಅಲ್ಲದೆ, ಉದ್ದೇಶಿತ ಆಕೃತಿಗಳಿಗಾಗಿ ವಿವಿಧ ಬಣ್ಣದ ಗುಲಾಬಿ, ಕ್ರೈಸಾಂಥಿಮಮ್, ಪಿಂಗ್ ಪಾಂಗ್, ಕಾರ್ನೇಷನ್, ಆಸ್ಟ್ರಮೇರಿಯ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂಡೈಸಿ ಹಾಗೂ ಇತರೆ ಅಲಂಕಾರಿಕ ಹೂವುಗಳು, ಊಟಿಯಿಂದಲೂ ಕಟ್ ಫ್ಲವರ್‌ಗಳನ್ನು ತರಲು ಉದ್ದೇಶಿಸಲಾಗಿದೆ. ಸುಮಾರು 4 ಲಕ್ಷ ಹೂವುಗಳಿಂದ ಆಕೃತಿಗಳು ಮೈದಳೆಯಲಿವೆ.

ಹೂವಿನಿಂದಲೇ ಅರಳುವ ಆಕೃತಿಗಳು: ಈ ಬಾರಿ ಸೋಮನಾಥಪುರದ ಚೆನ್ನಕೇಶವ ದೇವಾಲಯದ ಆಕೃತಿ ಪ್ರಮುಖ ಆಕರ್ಷಣೆಯಾಗಲಿದೆ. 50 ಅಡಿ ಅಗಲ, 20 ಅಡಿ ಉದ್ದ, 28 ಅಡಿ ಎತ್ತರದ ಈ ಆಕೃತಿ ಬಣ್ಣ ಬಣ್ಣದ ಗುಲಾಬಿ ಹೂವುಗಳಿಂದ ತಲೆ ಎತ್ತಲಿದೆ. ಯುನೆಸ್ಕೋ ಪಟ್ಟಿಗೆ ಚೆನ್ನಕೇಶವ ದೇವಾಲಯ ಸೇರಿದ ಹಿನ್ನೆಲೆಯಲ್ಲಿ ಈ ಸಲದ ಫಲಪುಷ್ಪ ಪ್ರದರ್ಶನದಲ್ಲಿ ಅದರ ಆಕೃತಿ ನಿರ್ಮಿಸಿ, ಮತ್ತಷ್ಟು ಪ್ರವಾಸಿಗರಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ.

ಇದರೊಂದಿಗೆ ದೀಪದ ಬೆಳಕಿನ ಅಲಂಕಾರದೊಂದಿಗೆ 'ಕರ್ನಾಟಕ'ಕ್ಕೆ 50 ವರ್ಷ ಸಂದ ಹಿನ್ನೆಲೆಯಲ್ಲಿ 'ಕರ್ನಾಟಕ ರಾಜ್ಯದ ನಕ್ಷೆ', ಹಂಪಿ ಕಲ್ಲಿನ ರಥ, ವಿರೂಪಾಕ್ಷ, ಶಿವಲಿಂಗ, ಓರೆಯಾಗಿರುವ ಹೂವಿನ ಕುಂಡ ಮಾದರಿ ಚಿತ್ರ, ಕುರ್ಚಿಯ ಮೇಲೆ ಕುಳಿತಿರುವಂತೆ ಮಹಾರಾಣಿ ಕೆಂಪ ಚೆಲುವನಂಜಮ್ಮಣಿ ಆಕೃತಿ, ರಾಜವಂಶದವರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ನಿಂತಿರುವ ಆಕೃತಿ, ಹುಲಿ ಮೇಲಿನ ಮಲೈಮಹದೇಶ್ವರಸ್ವಾಮಿ ಆಕೃತಿಯನ್ನು ಹೂವುಗಳಿಂದ ರೂಪಿಸಲಾಗುತ್ತಿದೆ. ತರಕಾರಿ ಮತ್ತು ಹಣ್ಣಿನ ಬುಟ್ಟಿಯನ್ನು ತಲೆಯ ಮೇಲೆ ಹೊತ್ತಿರುವ ಮಹಿಳೆಯ ಮಾದರಿ ಚಿತ್ರವನ್ನು ಹೂಗಳಿಂದ ಅಲಂಕರಿಸಲು ಉದ್ದೇಶಿಸಲಾಗಿದೆ. 'ಉಳುವ ಯೋಗಿಯ ನೋಡಲ್ಲಿ' ಗೀತೆಯಲ್ಲಿ ವರನಟ ಡಾ. ರಾಜಕುಮಾರ್ ಅವರನ್ನು ಎತ್ತುಗಳಿಂದ ಉಳುಮೆ ಮಾಡುತ್ತಿರುವ ಮಾದರಿ, ಹಳೆ ಕಾಲದ ಜಟಕಾ ಬಂಡಿ ಮಾದರಿ, ಬೈನಾಕ್ಯುಲಾರ್ ಹೂವುಗಳಿಂದ ರೂಪಿಸಲು ಉದ್ದೇಶಿಸಲಾಗಿದ್ದು, ಅದೇ ಬೈನಾಕ್ಯುಲಾರ್‌ನಿಂದ ಅರಮನೆಯನ್ನು ವೀಕ್ಷಿಸಬಹುದಾಗಿದೆ.

ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಕಬ್ಬಿನ ಗದ್ದೆ ಮತ್ತು ಬಾಳೆ ಗಿಡಗಳ ಮಧ್ಯೆ ಮರಿಯೊಂದಿಗೆ ಆನೆಯ ಮಾದರಿ, ಪ್ರವೇಶ ದ್ವಾರಗಳಲ್ಲಿ ನವಿಲು ಮಾದರಿಯ ಚಿತ್ರವನ್ನು ಹೂವುಗಳಿಂದ ಅಲಂಕರಿಸಲಾಗುತ್ತದೆ. ಫೋಟೊ ಪಾಯಿಂಟ್‌ನಲ್ಲಿ ಚಿಟ್ಟೆಯ ಮಾದರಿ, ಸೆಲ್ಫಿ ಪಾಯಿಂಟ್‌ನಲ್ಲಿ ಹದ್ದು ಹಾಗೂ ಬಲೂನ್‌ಗಳನ್ನು ಹಿಡಿದುಕೊಂಡು ವ್ಯಕ್ತಿ ನಿಂತಿರುವ ಮಾದರಿ, ಸಂವಿಧಾನದ ಪೀಠಿಕೆ ಮಾದರಿಯನ್ನು ಅಲಂಕರಿಸಲಾಗುತ್ತಿದೆ. ತರಕಾರಿ ಕೆತ್ತನೆಗಳಿಂದ ವಿವಿಧ ಆಕೃತಿ, ಫೋಟೊ ಪಾಯಿಂಟ್‌ನಲ್ಲಿ ಹೃದಯದ ಮಾದರಿ ಹೂವುಗಳಿಂದ ರೂಪ ತಾಳಲಿದೆ. ಮಕ್ಕಳ ಆಕರ್ಷಣೆಗೆ ವಿವಿಧ ಕಾರ್ಟೂನ್ ಮಾದರಿಯ ವ್ಯಂಗ್ಯ ಚಿತ್ರಗಳೂ ಹೂವುಗಳಿಂದ ರಚನೆಯಾಗಲಿವೆ. ಹೂವಿನಿಂದ ನಿರ್ಮಿಸುವ ಆಕೃತಿಗಳ ತಾಜಾತನ ಕಾಪಾಡಲು 5 ದಿನದ ನಂತರ ಒಮ್ಮೆ ಹೂವನ್ನು ಬದಲಿಸಲಾಗುತ್ತದೆ.

500 ಮಂದಿಗೆ ಗಿಡ ಹಂಚಿಕೆ: ಪುಷ್ಪ ಪ್ರದರ್ಶನ ವೀಕ್ಷಿಸಲು ಬರುವ ಗಣ್ಯರು ಹಾಗೂ ಸಾರ್ವಜನಿಕರಿಗೆ ಸಾಂಕೇತಿಕವಾಗಿ 500 ಮಂದಿಗೆ ಔಷಧಿಯುಕ್ತ ಅಲೋವೆರ, ತುಳಸಿ, ಮಲ್ಲಿಗೆ, ವೀಳ್ಯದೆಲೆ ಹಾಗೂ ಚಕ್ರಮುನಿ ಗಿಡಗಳನ್ನು ವಿತರಿಸಲಾಗುತ್ತಿದೆ. ಫಲಪುಷ್ಪ ಪ್ರದರ್ಶನ ವೀಕ್ಷಣೆ ವೇಳೆ ಜಯಚಾಮರಾಜ ಒಡೆಯರ್ ರಚಿಸಿರುವ ಕೀರ್ತನೆಗಳು ಹಾಗೂ ಕ್ಲಾಸಿಕಲ್ ಇನ್‌ಸ್ಟ್ರುಮೆಂಟಲ್ ಮ್ಯೂಸಿಕ್ ಬಿತ್ತರಿಸಲು ಕ್ರಮ ಕೈಗೊಳ್ಳಲಾಗಿದೆ. ಫಲಪುಷ್ಪ ಪ್ರದರ್ಶನಕ್ಕೆ ಮೆರಗು ನೀಡಲು 10 ದಿನವೂ ಸಂಜೆ 7ರಿಂದ 9 ಗಂಟೆವರೆಗೆ ಅರಮನೆಗೆ ದೀಪಾಲಂಕಾರವಿರುತ್ತದೆ. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ಅರಮನೆ ಆವರಣಕ್ಕೆ ಮುಕ್ತ ಪ್ರವೇಶಾವಕಾಶವಿದೆ.

ಪೊಲೀಸ್ ಬ್ಯಾಂಡ್ ವಾದನ, ಹಸಿರು ಪಟಾಕಿ ಸಿಡಿತ

ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಡಿ.31ರಂದು ಪೊಲೀಸ್ ಇಲಾಖೆಯಿಂದ ಕರ್ನಾಟಕ ಮತ್ತು ಆಂಗ್ಲ ಪೊಲೀಸ್ ಬ್ಯಾಂಡ್ ಕಾರ್ಯಕ್ರಮ ಜರುಗಲಿದೆ. ಅರಮನೆ ಮುಂಭಾಗದ ಪ್ರಾಂಗಣದಲ್ಲಿ ಅಂದು ರಾತ್ರಿ 11 ಗಂಟೆಯಿಂದ 12 ಗಂಟೆವರೆಗೆ ಪೊಲೀಸ್ ಬ್ಯಾಂಡ್ ವಾದನ ನಡೆಯಲಿದೆ. ನೂತನ ವರ್ಷದ ಅಂಗವಾಗಿ ಮಧ್ಯರಾತ್ರಿ 12 ರಿಂದ 12.15 ರವರೆಗೆ ಬಣ್ಣಗಳ ಚಿತ್ತಾರಗಳಿಂದ ಕೂಡಿದ ಶಬ್ದ ರಹಿತ ಹಸಿರು ಪಟಾಕಿ ಸಿಡಿಸಲಾಗುತ್ತದೆ.

ಛಾಯಾಚಿತ್ರ ಮತ್ತು ವೀಡಿಯೋ ಪ್ರದರ್ಶನ

ಫಲಪುಷ್ಪ ಪ್ರದರ್ಶನದಲ್ಲಿ ಛಾಯಾಚಿತ್ರ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಈ ಪ್ರದರ್ಶನದಲ್ಲಿ ದಸರಾ ಅಂದು–ಇಂದು, ಒಡೆಯರ್ ಆಡಳಿತ ಹಾಗೂ ಹಳೆಯ ದಸರಾ (ಆರಂಭವಾದ ವರ್ಷದಿಂದ) ಇಂದು ನಾಡಹಬ್ಬವಾದ ಮೈಸೂರು ದಸರಾವರೆಗಿನ ವೀಡಿಯೋ ಚಿತ್ರೀಕರಣದ ಸಾಕ್ಷ್ಯಚಿತ್ರ ಪ್ರದರ್ಶಿಸಲಾಗುತ್ತದೆ.

ಬೊಂಬೆ ಪ್ರದರ್ಶನ

ನವರಾತ್ರಿಯ ಹಾಗೂ ವಿಶೇಷ ಸಂದರ್ಭಗಳಲ್ಲಿ ಮನೆಗಳಲ್ಲಿ ಅತ್ಯುತ್ತಮವಾಗಿ ಬೊಂಬೆಗಳನ್ನು ಪ್ರದರ್ಶಿಸುವ ಆಯ್ದ ಐದು ಜನರಿಂದ ಗೊಂಬೆ ಪ್ರದರ್ಶನ ಏರ್ಪಡಿಸಲಾಗಿದೆ. 5 ಬ್ಲಾಕ್‌ಗಳಲ್ಲಿ ಭವ್ಯ ಬೊಂಬೆ ಪ್ರದರ್ಶನ ಜರುಗಲಿದೆ. **ಗೀತಾ ಶ್ರೀಹರಿ** ಅವರಿಂದ ಶಂಕರ ವಿಭಾವರಿ ಕನಕಧಾರಾ ಗೊಂಬೆ ಪ್ರದರ್ಶನ, **ಜಯಶ್ರೀ ನಾಗಪ್ರಸಾದ್** ಸಿ ಅವರಿಂದ ಓಂ ನಮೋ ನಾರಾಯಣಾಯ ಗೊಂಬೆ ಪ್ರದರ್ಶನ, **ಹೇಮಲತಾ ಕುಮಾರಸ್ವಾಮಿ** ಅವರಿಂದ ಶ್ರೀ ರಾಮಾಯಣ ದರ್ಶನಂ, **ಅನ್ನಪೂರ್ಣ ಗೋಪಾಲಕೃಷ್ಣ** ಅವರಿಂದ ಪನ್ನಗಭೂಷಣ ಸದಾಶಿವ–ಪನ್ನಗಶಯನ ನಾರಾಯಣ ಹಾಗೂ **ಸರ್ವಮಂಗಳ ಕೃಷ್ಣಭಟ್** ಅವರಿಂದ ಶ್ರೀನಿವಾಸ ವೈಭವ ಗೊಂಬೆ ಪ್ರದರ್ಶನ ಜರುಗಲಿದೆ.

ಸುಳಿವು ಕೊಟ್ಟರೆ ಲಕ್ಷ ನಗದು ಬಹುಮಾನ

ಲಕ್ಷ ರೂಪಾಯಿ ಬಹುಮಾನ ನೀಡುತ್ತೇವೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಇನ್ನು ಸಾರ್ವಜನಿಕರ ಸಹಾಯಕ್ಕಾಗಿ ಆರೋಗ್ಯ ಇಲಾಖೆ ಸಹಾಯವಾಣಿ ತೆರೆದಿದ್ದು, 080–25202264/65ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ತಿಳಿಸಿದೆ. ಹೆಣ್ಣು ಭ್ರೂಣ ಹತ್ಯೆ ತಡೆಗೆ ರಾಜ್ಯ ಸರ್ಕಾರ ಕಾನೂನು ತಿದ್ದುಪಡಿ, ರಾಜ್ಯಮಟ್ಟದ ಕಾರ್ಯಪಡೆ ರಚನೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಲಿಂಗ ಪತ್ತೆ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಚಿವರು, ಕಳೆದ ವರ್ಷ 1,000 ಪುರುಷರಿಗೆ 947 ಮಹಿಳೆಯರಿದ್ದರು. ಈ ವರ್ಷ 929 ಇದ್ದಾರೆ. ಮಹಿಳೆಯರ ಸಂಖ್ಯೆ ಕಡಿಮೆಯಾಗಿದೆ ಎಂದರು.

ವಿಜೃಂಭಣೆಯಿಂದ ನೆರವೇರಿದ ಶ್ರೀ ಬಲಮುರಿ ಗಣಪತಿ ದೇವಸ್ಥಾನದ 34ನೇ ವಾರ್ಷಿಕೋತ್ಸವ

ಶ್ರೀ ಬಲಮುರಿ ಗಣಪತಿಗೆ ಭಕ್ತ ಮಾರ್ಕಂಡಯ್ಯ ಅಲಂಕಾರ

ಮೈಸೂರು, ಡಿ. 18– ಮೈಸೂರಿನ ರೈಲ್ವೆ ನಿಲ್ದಾಣದಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನದಲ್ಲಿ ಶನಿವಾರ, ಭಾನುವಾರ 34ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ನೆರವೇರಿತು.

ವಾರ್ಷಿಕೋತ್ಸವದ ಅಂಗವಾಗಿ ಈ ಬಾರಿ ಮೃತ್ಯ ನಿವಾರಣೆ, ಉತ್ತಮ ಆರೋಗ್ಯಕ್ಕಾಗಿ ಮಹಾಮೃತ್ಯುಂಜಯ ಹೋಮ ಯಶಸ್ವಿಯಾಗಿ ನೆರವೇರಿತು.

ಶನಿವಾರ ಬೆಳಗ್ಗೆ ಗಣಪತಿ ಹೋಮ, ಶ್ರೀ ಸುಬ್ರಹ್ಮಣ್ಯ ಹೋಮ, ಶರೀ ಧರ್ಮ ಶಾಸ್ತ್ರ ಹೋಮ, ಶ್ರೀ ಗುರುದತ್ತಾತ್ರೇಯ ಹೋಮ, ಶ್ರೀ ಆಂಜನೇಯ ಹೋಮ, ಶ್ರೀ ನವಗ್ರಹ ಹೋಮ, ನಾಗದೇವತಾ ಹೋಮ, ಕುಂಭಾಭಿಷೇಕ ನೆರವೇರಿತು.

ಭಾನುವಾರ ಪಂಚಮಿ ಶ್ರವಣ ನಕ್ಷತ್ರ ಬೆಳಗ್ಗೆ ಪ್ರಧಾನ ಹೋಮ, ಮೃತ್ಯು ನಿವಾರಣೆಗಾಗಿ, ಆರೋಗ್ಯಕ್ಕಾಗಿ ಮಹಾ ಮೃತ್ಯುಂಜಯ ಹೋಮ, ಮಹಾ ಪೂರ್ಣಾಹುತಿ ನೆರವೇರಿತು. ನಂತರ ಮಹಾಮಂಗಳಾರತಿ, ತೀರ್ಥಪ್ರಸಾದ ಮಾಡಲಾಯಿತು.







ಭಕ್ತರ ಕಣ್ಮನ ಸೆಳೆದ ಅಲಂಕಾರಗಳು: ವಾರ್ಷಿಕೋತ್ಸವದ ಅಂಗವಾಗಿ ಬಲಮುರಿ ಗಣಪತಿ, ಶ್ರೀ ಅನಂತ ಸುಬ್ರಮಣ್ಯಸ್ವಾಮಿ ಹಾಗೂ ಶ್ರೀ ಅಯ್ಯಪ್ಪ ಸ್ವಾಮಿಗೆ ಮಾಡಿದ ಅಲಂಕಾರ ಭಕ್ತರ ಕಣ್ಮನ ಸೆಳೆಯಿತು.

ಶ್ರೀ ಬಲಮುರಿ ಗಣಪತಿಗೆ ಭಕ್ತ ಮಾರ್ಕಂಡಯ್ಯ, ಶ್ರೀ ಅನಂತ ಸುಬ್ರಹ್ಮಣ್ಯ ಸ್ವಾಮಿಗೆ ಏಕಾಂತದಲ್ಲಿ ಶಿವ, ಕೈಲಾಸ ಪರ್ವತ ಹಾಗೂ ಶ್ರೀ ಅಯ್ಯಪ್ಪಸ್ವಾಮಿಗೆ ಕಲ್ಕಿ ಅವತಾರದ ಅಲಂಕಾರವು ಭಕ್ತರನ್ನು ಆಕರ್ಷಿಸಿತು. ವಾರ್ಷಿಕೋತ್ಸವ ಯಶಸ್ವಿಯಾಗಿ ನೆರವೇರಿದ್ದು, ಭಕ್ತಾದಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಕರಿಸಿದ್ದಕ್ಕೆ ಪ್ರಧಾನ ಅರ್ಚಕರಾದ ಜಿ.ಎಸ್. ನಾಗೇಶ್‌ದೀಕ್ಷಿತ್, ಅರ್ಚಕರಾದ ಎನ್.ನಾಗೇಂದ್ರ ಪ್ರಸಾದ್ ದೀಕ್ಷಿತ್ ಹಾಗೂ ಎನ್.ಹೇಮಂತ್ ಕುಮಾರ್ ದೀಕ್ಷಿತ್ ಕೃತಜ್ಞತೆ ಸಲ್ಲಿಸಿದ್ದಾರೆ.

ರಾಷ್ಟ್ರೀಯ ಗುಣ ನಿಯಂತ್ರಣ ನಿರ್ವಾಹಕರಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪರಿವೀಕ್ಷಣೆ

ಮೈಸೂರು,ಡಿ.18– ರಾಷ್ಟ್ರೀಯ ಗುಣ ನಿಯಂತ್ರಣ ನಿರ್ವಾಹಕರಾದ ಹೊಟ್ವಾನಿ ರಮೇಶ್ ನಾನಕ್ ರಾಮ್ ಮತ್ತು ನೂರುಲ್ ಅನಿ ಇಶ್ರತ್ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಮೈಸೂರು ಮತ್ತು ಟಿ.ನರಸೀಪುರ ತಾಲೂಕುಗಳ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ–3ರ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಡಿ.23ರಿಂದ 27ರವರೆಗೆ ಪರಿವೀಕ್ಷಿಸಲಿದ್ದಾರೆ ಎಂದು ಮೈಸೂರು ಆರ್‌ಡಿಪಿಆರ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಶ್ರೀ ಕೃಷ್ಣ ರಾಜೇಂದ್ರ ಸಹಕಾರಿ ಬ್ಯಾಂಕ್ 2024ರ ಕ್ಯಾಲೆಂಡರನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು. ಬ್ಯಾಂಕ್‌ನ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಉಪಾಧ್ಯಕ್ಷ ಬಸವರಾಜ್ ಬಸಪ್ಪ, ನಿರ್ದೇಶಕರಾದ ನಂ. ಸಿದ್ದಪ್ಪ, ತಾಯೂರು ವಿಠ್ಠಲ್ ಮೂರ್ತಿ, ಎಂ.ಡಿ.ಪಾರ್ಥಸಾರಥಿ, ಹೆಚ್.ವಿ.ಭಾಸ್ಕರ್, ಎಂ.ಎಸ್.ಅರುಣ್, ಕೆ.ಜೆ.ಶಂಕರ್ ನಾರಾಯಣ್ ಶಾಸ್ತ್ರಿ, ಎಚ್.ಎನ್.ಸರ್ವಮಂಗಳ, ಎಂ.ಎನ್.ನವೀನ್ ಕುಮಾರ್, ಎಚ್ ವಾಸು, ಬಿ.ನಾಗರಾಜ್, ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕ ಡಿ.ಅನಂತವೀರಪ್ಪ, ಸಿಬ್ಬಂದಿ ಪ್ರಕಾಶ್, ಮಹದೇವಸ್ವಾಮಿ ಇನ್ನಿತರರು ಹಾಜರಿದ್ದರು.

ಸಾಮಾಜಿಕ ಕಳಕಳಿ ಮೆರೆದ ಮ.ವಿ.ರಾಮಪ್ರಸಾದ್



ಮೈಸೂರು, ಡಿ. 18–ಮೈಸೂರು ನಗರ ಪಾಲಿಕೆಯ ವಾರ್ಡ್ ನಂ. 55ರ ನಿಕಟ ಪೂರ್ವ ಸದಸ್ಯ ಮಾ.ವಿ.ರಾಮಪ್ರಸಾದ್, ತಮ್ಮ ಸದಸ್ಯ ಅವಧಿ ಮುಗಿದರೂ ಸಾಮಾಜಿಕ ಕಳಕಳಿಗೆ ಆದ್ಯತೆ ನೀಡುತ್ತಿದ್ದಾರೆ. ತಾವು ಪ್ರತಿನಿಧಿಸಿದ್ದ ವಾರ್ಡ್‌ನ ಸಮಸ್ಯೆಗಳಿಗೆ ಈಗಲೂ ಸ್ಪಂದಿಸುತ್ತಿದ್ದಾರೆ. ಅಕ್ಕಮ್ಮಣ್ಣಿ ಆಸ್ಪತ್ರೆಯ ಉದ್ಯಾನವನದ ಸ್ವಚ್ಛತಾ ಕಾರ್ಯ ಕೈಗೊಂಡಿದ್ದಾರೆ. ಲಕ್ಷಾಂತರ ರೂ ವೆಚ್ಚ ಮಾಡಿ ನಿರ್ಮಾಣ ಮಾಡಿದ ಪಾರ್ಕ್ ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿದೆ. ಪ್ರತಿದಿನ ನೂರಾರು ಮಂದಿ ಈ ಪಾರ್ಕ್‌ನಲ್ಲಿ ವಾಯುವಿಹಾರ ಮಾಡುತ್ತಾರೆ. ಪಾರ್ಕ್ ಆವರಣದಲ್ಲಿ ಪಾರ್ಥೇನಿಯಂ, ಇನ್ನಿತರೆ ಗಿಡಗಂಟಿಗಳು ಬೆಳೆದು, ಪಾಲಿಕೆ ಅಧಿಕಾರಿಗಳನ್ನು ಅಣಕಿಸುತ್ತಿವೆ. ನಿರ್ವಹಣೆ ಕಾಣದ ಉದ್ಯಾನವನದ ಸ್ವಚ್ಛತೆಗೆ ಮ.ವಿ.ರಾಮಪ್ರಸಾದ್ ಮುಂದಾಗಿದ್ದಾರೆ. ಖುದ್ದು ಸ್ವಚ್ಛತಾ ಪರಿಕರಗಳನ್ನು ಹಿಡಿದು ಗಿಡಗಂಟಿಗಳನ್ನು ತೆರವುಗೊಳಿಸುತ್ತಿದ್ದಾರೆ. ಪಾರ್ಕ್ ನಿರ್ವಹಣೆಗೆ ಸಿಬ್ಬಂದಿಗಳನ್ನು ನೇಮಿಸುವಂತೆಯೂ ಪಾಲಿಕೆ ಆಯುಕ್ತರನ್ನು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆಯ ವಲಯ 1ರ ಆಯುಕ್ತ ಮಂಜು ನಾಥ್ ರೆಡ್ಡಿ, ಮುಖಂಡರಾದ ಸಂದೀಪ್, ಧರ್ಮೇಂದ್ರ, ಬಸವರಾಜು ಘೋರ್ಪಡೆ, ಮಂಜುನಾಥ್, ಸುತೋಷ್, ಲಕ್ಷ್ಮಣ್, ಸೋಮೇಶ್, ತೀರ್ಥ, ರಾಮಚಂದ್ರ ಅರವಿಂದ್, ಶಿವು, ರವಿ ಇತರರು ಸ್ವಚ್ಛತೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪತ್ನಿ ಕೊಂದು ಪತಿ ಆತ್ಮಹತ್ಯೆ

ಶ್ರೀಮಂಗಲ ಟಿ.ಶೆಟ್ಟಿಗೇರಿಯಲ್ಲಿ ಘಟನೆ

ಗೋಣಿಕೊಪ್ಪ, ಡಿ.18– ಮಕ್ಕಳಾಗಲಿಲ್ಲ ಎಂದು ಮದ್ಯದ ಅಮಲಿನಲ್ಲಿ ಪತ್ನಿಯನ್ನು ಕೊಂದು ಬಳಿಕ ಪತಿಯೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ರಾತ್ರಿ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಟಿ.ಶೆಟ್ಟಿಗೇರಿಯಲ್ಲಿ ನಡೆದಿದೆ.

ಶ್ರೀಮಂಗಲ ಟಿ.ಶೆಟ್ಟಿಗೇರಿ ನಿವಾಸಿ ಪಣಿ ಎರವರ ಮಂಜು (26) ತನ್ನ ಪತ್ನಿ ನಂದಿನಿ (25)ಯನ್ನು ಹತ್ಯೆಗೈದು, ನಂತರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಘಟನೆ ಹಿನ್ನೆಲೆ: ಪಣಿ ಎರವರ ಮಂಜು, ಪತ್ನಿ ನಂದಿನಿಯೊಂದಿಗೆ ಶ್ರೀಮಂಗಲ ಟಿ.ಶೆಟ್ಟಿಗೇರಿಯ ತೋಟದ ಲೈನ್ ಮನೆಯಲ್ಲಿ ವಾಸವಾಗಿದ್ದ. ಆದರೆ, ವಿವಾಹವಾಗಿ ಒಂದೂವರೆ ವರ್ಷ ಕಳೆದರೂ ಈ ದಂಪತಿಗೆ ಮಕ್ಕಳಾಗಿರಲಿಲ್ಲ. ಇದರಿಂದ ಪತಿ ಮಂಜು, ಪತ್ನಿ ನಂದಿನಿಯೊಂದಿಗೆ ಹಲವು ಬಾರಿ ಜಗಳವಾಡಿದ್ದ.

ಭಾನುವಾರ ರಾತ್ರಿ ಮದ್ಯ ಸೇವಿಸಿದ್ದ ಅಮಲಿನಲ್ಲಿ ಪತ್ನಿಯೊಂದಿಗೆ ಜಗಳ ವಾಡಿದ ಮಂಜು, ಪತ್ನಿಗೆ ದೊಣ್ಣೆಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ. ಇದರಿಂದ ಈಕೆ ಸ್ಥಳದಲ್ಲೇ ಮೃತ ಪಟ್ಟಿದ್ದಾಳೆ. ಪತ್ನಿ ಸಾವಿಗೀಡಾಗಿರುವುದನ್ನು ಕಂಡು ಭಯದಿಂದ ಈತನೂ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಘಟನಾ ಸ್ಥಳಕ್ಕೆ ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ಶ್ರೀಮಂಗಲ ಪೊಲೀಸ್ ಠಾಣೆಯ ಪ್ರಭಾರ ಠಾಣಾಧಿಕಾರಿ ಕೆಮೆಂಟ್ ಸಾಲ್ದಾನ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ಸುದೀರ್ಘ ವಿಚಾರಣೆ

ದೆಹಲಿ ಪೊಲೀಸ್‌ನ ವಿಶೇಷ ತನಿಖಾ ತಂಡದ ಅಧಿಕಾರಿಗಳು, ಮನೋರಂಜನ್ ತಂದೆ ದೇವರಾಜೇಗೌಡ, ತಾಯಿ ಶೈಲಜಾ ಹಾಗೂ ಆತನ ಸಹೋದರಿಗೆ ಪ್ರಶ್ನೆಗಳ ಸುರಿಮಳೆಗೈಯ್ದರು. ಹಿಂದಿ ಹಾಗೂ ಇಂಗ್ಲಿಷ್ ಭಾಷೆ ತಿಳಿಯದ ಕಾರಣ ಭಾಷಾಂತರಕಾರರನ್ನು ಕೂರಿಸಿಕೊಂಡು ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆದರು ಎಂದು ಮೂಲಗಳು ತಿಳಿಸಿವೆ. ಓರ್ವ ಮಹಿಳಾ ಅಧಿಕಾರಿ ಸೇರಿದಂತೆ ಇಬ್ಬರು ದೆಹಲಿ ಪೊಲೀಸ್ ಅಧಿಕಾರಿಗಳು ತನಿಖಾ ಪ್ರಕ್ರಿಯೆ ನಡೆಸಿದ್ದು, ಇವರಿಗೆ ಐಬಿ ಅಧಿಕಾರಿಗಳು ಹಾಗೂ ಸ್ಥಳೀಯ ಪೊಲೀಸರು ಸಹಕಾರ ನೀಡಿದರು. ಮೊದಲ ಅಂತಸ್ತಿನಲ್ಲಿ ದೇವರಾಜೇಗೌಡ ಕುಟುಂಬ ವಾಸವಾಗಿದ್ದು, ನೆಲ ಅಂತಸ್ತನ್ನು ಬಾಡಿಗೆಗೆ ನೀಡಲಾಗಿದೆ. ಇನ್ನು ಎರಡನೇ ಅಂತಸ್ತಿನಲ್ಲಿರುವ ಮನೋರಂಜನ್ ಕೊಠಡಿಯಲ್ಲಿದ್ದ ಪ್ರತಿಯೊಂದು ವಸ್ತುವಿನ ಬಗ್ಗೆ ದೆಹಲಿ ಪೊಲೀಸ್ ಅಧಿಕಾರಿಗಳು ಮಾಹಿತಿ ಕಲೆ ಹಾಕಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ.

ಮನೋರಂಜನ್ ಈ ಪ್ರಕರಣದಲ್ಲಿ ಭಾಗಿಯಾಗಲು ಕಾರಣವೇನು? ಅವನ ದಿನಚರಿ ಹೇಗಿತ್ತು? ಇಂಜಿನಿಯರಿಂಗ್ ವ್ಯಾಸಂಗ ಮೊಟಕುಗೊಳಿಸಿದ್ದೇಕೆ? ಸ್ಥಳೀಯವಾಗಿ ಯಾರೊಂದಿಗೆ ಸ್ನೇಹವಿತ್ತು? ಮನೆಯಲ್ಲಿ ಏನು ಮಾಡುತ್ತಿದ್ದನು? ಯಾರ ಜೊತೆ ಹೆಚ್ಚಿನ ಒಡನಾಟ ಇಟ್ಟುಕೊಂಡಿದ್ದನು? ದೆಹಲಿಗೆ ಎಷ್ಟು ಬಾರಿ ಹೋಗಿದ್ದನು? ಮನೆ ಬಿಟ್ಟು ಎಷ್ಟು ದಿನ ಹೊರಗೆ ಇರುತ್ತಿದ್ದನು? ಇದಕ್ಕೆ ಹಣದ ಮೂಲ ಯಾವುದು? ಯಾವ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಿದ್ದನು? ಯಾವ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದನು? ಸಾಗರ್ ಶರ್ಮಾ ಎಷ್ಟು ಬಾರಿ ನಿಮ್ಮ ಮನೆಗೆ ಬಂದಿದ್ದನು? ಶರ್ಮನನ್ನು ನಿಮ್ಮ ಮಗ ಏನೆಂದು ಪರಿಚಯಿಸಿದ್ದನು? ಶರ್ಮ ಜೊತೆ ಬೇರೆ ಯಾರಾದರೂ ಬಂದಿದ್ದರೆ? ಎಂಬ ಹಲವು ಪ್ರಶ್ನೆಗಳನ್ನು ಪೊಲೀಸ್ ಅಧಿಕಾರಿಗಳು ಮನೋರಂಜನ್ ತಂದೆ–ತಾಯಿಗೆ ಕೇಳಿದ್ದಾರೆನ್ನಲಾಗಿದೆ. ಮನೋರಂಜನ್ ತಾಯಿಯವರು ಹಿಂದಿ ಭಾಷೆಯನ್ನು ಸ್ವಲ್ಪ ಬಲ್ಲವರಾಗಿದ್ದರಿಂದ ಭಾಷಾಂತರಕಾರರ ಸಹಾಯವಿಲ್ಲದೆ ಅವರು ಪೊಲೀಸ್ ಅಧಿಕಾರಿಗಳ ಪಶ್ನೆಗಳಿಗೆ ಉತ್ತರಿಸಿದರು. ಮನೋರಂಜನ್ ತಂದೆ–ತಾಯಿ ಮೌಖಿಕವಾಗಿ ನೀಡುತ್ತಿದ್ದ ಪ್ರತಿಯೊಂದು ಉತ್ತರವನ್ನು ಪೊಲೀಸ್ ಅಧಿಕಾರಿಗಳು ಲಿಖಿತವಾಗಿ ದಾಖಲಿಸಿಕೊಂಡರು ಎಂದು ಮೂಲಗಳು ತಿಳಿಸಿವೆ.

ಮನೆಯ ಅಟ್ಟ ಸೇರಿದಂತೆ ಇಂಚಿಂಚು ಜಾಗವನ್ನು ತನಿಖಾಧಿಕಾರಿಗಳು ಶೋಧನೆ ಮಾಡಿದರು. ದೇವರಾಜೇಗೌಡರ ಸಂಬಂಧಿಕರು ಮನೆಯಲ್ಲಿದ್ದರೂ ವಿಚಾರಣೆ ವೇಳೆ ಅವರನ್ನು ಒಳಗೆ ಬಿಡದೆ ಹೊರಗೆ ಕೂರಿಸಿದ್ದರು ಎನ್ನಲಾಗಿದೆ. ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮನೋರಂಜನ್ ಮನೆ ಇದ್ದು, ಹೀಗಾಗಿ ತನಿಖಾಧಿಕಾರಿಗಳು ಮೊದಲಿಗೆ ಸದರಿ ಠಾಣೆಗೆ ಭೇಟಿ ನೀಡಿದ್ದರು. ಬಳಿಕ ಮನೋರಂಜನ್ ಮನೆಯಲ್ಲಿ ಸುದೀರ್ಘ ತನಿಖಾ ಪ್ರಕ್ರಿಯೆ ನಡೆಸಿದ ತನಿಖಾಧಿಕಾರಿಗಳು, ನಂತರವೂ ವಿಜಯನಗರ ಠಾಣೆಗೆ ಭೇಟಿ ನೀಡಿ, ದೆಹಲಿಗೆ ವಾಪಸ್ಸಾದರು ಎಂದು ಮೂಲಗಳು ತಿಳಿಸಿವೆ. ಸ್ಥಳೀಯ ಪೊಲೀಸರು ಮನೋರಂಜನ್ ನಿವಾಸದತ್ತ ನಿಗಾ ವಹಿಸಿದ್ದಾರೆ.

ತನ್ನ ಕೊಠಡಿಯಲ್ಲಿ ಒಬ್ಬಂಟಿ ಆಗಿರುತ್ತಿದ್ದ ಮನೋರಂಜನ್

ಮನೋರಂಜನ್ ಓದಿನಲ್ಲಿ ಮುಂದಿದ್ದನು. ಇದರಿಂದ ಸಿಇಟಿ ಮೂಲಕ ಇಂಜಿನಿಯರಿಂಗ್‌ನಲ್ಲಿ ಸೀಟ್ ಪಡೆದಿದ್ದನು. ಆದರೆ ಬಿಇ ವ್ಯಾಸಂಗ ಮೊಟಕುಗೊಳಿಸಿ, ಕೆಲಸಕ್ಕೂ ಹೋಗದೆ ಮನೆಯಲ್ಲೇ ಇದ್ದ. ಮನೆಯ ತನ್ನ ಕೊಠಡಿಯಲ್ಲೇ ಮನೋರಂಜನ್ ಹೆಚ್ಚಾಗಿ ಕಾಲ ಕಳೆಯುತ್ತಿದ್ದ ಎಂದು ಮೂಲಗಳಿಂದ ತಿಳಿದು ಬಂದಿದೆ.

ಸ್ನಾನ, ಊಟ, ತಿಂಡಿಗೆ ಮಾತ್ರ ಕೆಳಗೆ ಬರುತ್ತಿದ್ದ. ಇದರಿಂದ ಮನೋರಂಜನ್‌ಗೆ ಈಗಿರುವ ಜೈಲಿನ ಒಂಟಿ ಕೋಣೆಯೂ ಒಂದೇ, ಮನೆಯೂ ಒಂದೇ ಎಂಬಂತಾಗಿದೆ. ಕೊಠಡಿಯಲ್ಲಿ ಇರುತ್ತಿದ್ದ ಸಮಯದಲ್ಲಿ ಮನೋರಂಜನ್ ಹೆಚ್ಚಾಗಿ ಪುಸ್ತಕಗಳನ್ನು ಓದುತ್ತಿದ್ದ. ಅಪರೂಪಕ್ಕೊಮ್ಮೆ ಮನೆಯಿಂದ ಹೊರಗೆ ಬಂದರೆ ನೆರೆ ಮನೆಯ ಚಿಕ್ಕ ಮಕ್ಕಳ ಜೊತೆ ಸ್ವಲ್ಪ ಸಮಯ ಕಳೆಯುತ್ತಿದ್ದನು. ಮನೋರಂಜನ್‌ಗೆ ಸ್ಥಳೀಯವಾಗಿ ಯಾರೂ ಸ್ನೇಹಿತರೇ ಇದ್ದಂತಿಲ್ಲ ಎನ್ನಲಾಗಿದೆ.

ಪ್ರತಾಪ್ ಸಿಂಹ 2ನೇ ಬಾರಿಗೆ ಪಾಸ್ ಕೊಟ್ಟಿದ್ದರು

ಲೋಕಸಭೆ ಕಲಾಪ ವೀಕ್ಷಣೆಗಾಗಿ ಮನೋರಂಜನ್‌ಗೆ ಸಂಸದ ಪ್ರತಾಪ್ ಸಿಂಹ ಎರಡನೇ ಬಾರಿಗೆ ಪಾಸ್ ನೀಡಿದ್ದರು ಎಂದು ಮೂಲಗಳು ತಿಳಿಸಿವೆ. ಹಳೆಯ ಸಂಸತ್ ಭವನದಲ್ಲಿ ನಡೆಯುತ್ತಿದ್ದ ಕಲಾಪ ವೀಕ್ಷಣೆಗೂ ಮನೋರಂಜನ್ ಕೆಲವು ತಿಂಗಳ ಹಿಂದೆ ಪ್ರತಾಪ್ ಸಿಂಹರಿಂದ ಪಾಸ್ ಪಡೆದಿದ್ದನು. ಅಂದು ಸಂಸತ್ ಭವನದ ಹೊರಗೆ ಮತ್ತು ಒಳಗಿನ ಭದ್ರತೆ ಸೇರಿದಂತೆ ಅಲ್ಲಿನ ವ್ಯವಸ್ಥೆಯ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸಿದ್ದನು ಎನ್ನಲಾಗಿದೆ. ಮೊದಲ ಬಾರಿಗೆ ಸಂಸತ್ ಭವನಕ್ಕೆ ಭೇಟಿ ನೀಡಿದ್ದ ವೇಳೆ ಗಮನಿಸಿದ್ದ ಭದ್ರತಾ ಲೋಪವನ್ನು ಬಳಸಿಕೊಂಡ ಮನೋರಂಜನ್ ಮತ್ತು ಸಾಗರ್ ಶರ್ಮಾ ಎರಡನೇ ಬಾರಿಗೆ ಸ್ಮೋಕ್ ಬಾಂಬ್ ಜೊತೆ ಸುಲಭವಾಗಿ ಸಂಸತ್‌ಗೆ ಅಡಿ ಇಟ್ಟಿರಬಹುದು ಎಂದು ಹೇಳಲಾಗುತ್ತಿದೆ.

ಮನೋರಂಜನ್ ಮನೆ ರಸ್ತೆಯಲ್ಲಿ ವಿರಳ ಸಂಚಾರ

ಪೊಲೀಸರು, ಮಾಧ್ಯಮದವರು ಮನೋರಂಜನ್ ಮನೆಯ ಮುಂದೆ ಮೊಕ್ಕಾಂ ಹೂಡಿದ್ದ ಕಾರಣ ಸೋಮವಾರ ಆತನ ಮನೆಯ ರಸ್ತೆಯಲ್ಲಿ ಸಂಚಾರ ವಿರಳವಾಗಿತ್ತು. ಇಡೀ ರಸ್ತೆಯಲ್ಲಿ ಬಹುತೇಕ ಮನೆಗಳ ಬಾಗಿಲು ಹಾಕಿದ್ದವು. ಪೊಲೀಸರು ಹಾಗೂ ಮಾಧ್ಯಮದವರು ತಮ್ಮನ್ನು ಎಲ್ಲಿ ಪ್ರಶ್ನೆ ಮಾಡುತ್ತಾರೋ ಎಂಬ ಆತಂಕದಲ್ಲಿ ಇಂತಹ ಸನ್ನಿವೇಶ ನಿರ್ಮಾಣವಾಗಿರಬಹುದು. ಊರಿನ ಉಸಾಬರಿ ನಮಗೇಕೆ ಎಂಬಂತೆ ಸದರಿ ರಸ್ತೆಯ ಬಹುತೇಕ ನಿವಾಸಿಗಳು ಇಂದು ಹೊರ ಬರುವುದ ಸ್ವಯಂ ನಿಯಂತ್ರಿಸಿಕೊಂಡಿದ್ದಂತೆ ಕಂಡು ಬಂತು.

ಜಮೀನ್ದಾರನಾಗಿದ್ದರೂ ಜಮೀನಿಗೆ ಹೋಗುತ್ತಿರಲಿಲ್ಲ

ಮನೋರಂಜನ್ ತಂದೆ ದೇವರಾಜೇಗೌಡ ಮೂಲತಃ ಹಾಸನ ಜಿಲ್ಲೆ ಅರಕಲಗೂಡಿನ ಮಲ್ಲಾಪುರ ಗ್ರಾಮದವರು. ದೇವರಾಜೇಗೌಡರು ಊರಿನಲ್ಲಿ 9 ಎಕರೆ ಜಮೀನು ಹೊಂದಿದ್ದು, ದೊಡ್ಡ ತೆಂಗಿನ ತೋಟವಿದೆ. ಮನೋರಂಜನ್ ಬಿಇ ಓದಲೂ ಇಲ್ಲ, ಜಮೀನಿಗೆ ಹೋಗಿ ತೋಟವನ್ನು ನೋಡಿಕೊಳ್ಳಲಿಲ್ಲ. ತಂದೆ–ತಾಯಿ ಸೇರಿದಂತೆ ಯಾರ ಸಂಪರ್ಕವೂ ಇಲ್ಲದೆ ಒಂಟಿಯಾಗಿ ರೂಮ್‌ನಲ್ಲಿರುತ್ತಿದ್ದ. ಒಬ್ಬನೆ ಮಗ, ದೊಡ್ಡ ತೋಟವಿತ್ತು, ಮನೆ ಬಾಡಿಗೆ ಬರುತ್ತಿತ್ತು. ಮತ್ಯಾರಿಗಾದರೂ ಇಷ್ಟು ಆರ್ಥಿಕ ಸಂಪನ್ಮೂಲವಿದ್ದರೆ ಸುಖ ಜೀವನ ಮಾಡುತ್ತಿದ್ದರು. ಆದರೆ ಮನೋರಂಜನ್ ತಪ್ಪು ದಾರಿಯತ್ತ ನಡೆದನು ಎಂದು ಹೇಳಲಾಗುತ್ತಿದೆ.

ಕ್ರಾಂತಿಕಾರಿಗಳ ಹೆಸರಿನ ವಾಟ್ಸ್ ಆಪ್ ಗ್ರೂಪ್‌ನಲ್ಲಿದ್ದನು

ಮನೋರಂಜನ್ ಕೆಲವು ಕ್ರಾಂತಿಕಾರಿಗಳ ಹೆಸರಿನ ವಾಟ್ಸ್ ಆಪ್ ಗ್ರೂಪ್‌ನಲ್ಲಿದ್ದನು ಎನ್ನಲಾಗಿದೆ. ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಹಿಂಸಾಚಾರ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಕ್ರಾಂತಿಕಾರಿಗಳ ವಾಟ್ಸ್ ಆಪ್ ಗ್ರೂಪ್‌ನಲ್ಲಿ ಚರ್ಚೆ ನಡೆಯುತ್ತಿತ್ತು. ಈ ವೇಳೆ ಮನೋರಂಜನ್ ಕೂಡ ಚಾಟಿಂಗ್ ಮೂಲಕ ತನ್ನ ಅಭಿಪ್ರಾಯಗಳನ್ನು ತಿಳಿಸುತ್ತಿದ್ದನು. ಈ ಕಾರಣದಿಂದಲೇ ಸಾಗರ್ ಶರ್ಮಾ, ನೀಲಂ ಸೇರಿದಂತೆ ಇತರರ ಸಂಪರ್ಕ ಸಾಧಿಸಲು ಮನೋರಂಜನ್‌ಗೆ ಸಾಧ್ಯವಾಯಿತು ಎನ್ನಲಾಗಿದೆ. ಮನೋರಂಜನ್, ಸಾಗರ್ ಶರ್ಮಾ ಸೇರಿದಂತೆ ಸಂಸತ್‌ನಲ್ಲಿ ಕಲರ್ ಗ್ಯಾಸ್ ಸಿಡಿಸಿದ ಪ್ರಕರಣದಲ್ಲಿನ ಎಲ್ಲಾ ಆರೋಪಿಗಳ ಮೊಬೈಲ್‌ಗಳನ್ನು ವಶಕ್ಕೆ ಪಡೆದಿರುವ ದೆಹಲಿ ಪೊಲೀಸರು, ಆರೋಪಿಗಳು ಯಾವ ಸಾಮಾಜಿಕ ಮಾಧ್ಯಮದ ಜೊತೆ ಸಂಪರ್ಕ ಹೊಂದಿದ್ದರು ಎಂಬ ಮಾಹಿತಿ ಕಲೆ ಹಾಕುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮನೋರಂಜನ್ ಸಂಪರ್ಕ ಹೊಂದಿದ್ದ ಸಾಮಾಜಿಕ ಮಾಧ್ಯಮಗಳ ಅಡ್ಮಿನ್‌ಗಳ ಮಾಹಿತಿ ಕಲೆ ಹಾಕಿರುವ ಪೊಲೀಸರು, ಅವರನ್ನು ಕೂಡ ವಿಚಾರಣೆಗೆ ಒಳಪಡಿಸಿದ್ದು, ಒಟ್ಟಾರೆ ಈ ಕೃತ್ಯದ ಹಿಂದೆ ದೊಡ್ಡ ಸಂಘಟನೆ, ಪ್ರಭಾವಿ ವ್ಯಕ್ತಿಗಳ ಕೈವಾಡ ಇರುವುದು ಪೊಲೀಸರಿಗೆ ಸ್ಪಷ್ಟವಾಗಿದೆ ಎನ್ನಲಾಗಿದೆ.

ಮೈಸೂರಲ್ಲಿ ಸಾಂಪ್ರದಾಯಿಕ ಕಲೆ ಕುಸ್ತಿ ಮಹತ್ವ ಸಾರುವ 'ಪೈಲ್ವಾನರ ಪ್ರತಿಮೆ'



ರಾಜ್ಯದಲ್ಲೇ ಮೊದಲು...!

ಜನರು ನನಗೆ ಅಧಿಕಾರ ಕೊಟ್ಟರೆ, 'ಕುಸ್ತಿ ಪೈಲ್ವಾನರ ಪ್ರತಿಮೆ' ಮಾಡಿಸಬೇಕು ಎಂಬುದು ನನ್ನ ಮನಸ್ಸಿನಲ್ಲಿ ಇತ್ತು. ಅದಕ್ಕಾಗಿ ಎಲ್ಲಿಯಾದರೂ ಪೈಲ್ವಾನರ ಪ್ರತಿಮೆ ನಿರ್ಮಾಣ ಮಾಡಿದ್ದಾರಾ ಎಂದು ಉತ್ತರ ಕರ್ನಾಟಕದ ಕಡೆಗೆಲ್ಲಾ ಪ್ರವಾಸ ಮಾಡಿ ನೋಡಿದೆ. ಒಂದೆರಡು ಕಡೆ ಚಿಕ್ಕದಾಗಿ ಪ್ರತಿಮೆ ಮಾಡಿದ್ದಾರೆ. ಆದರೆ ಇಷ್ಟು ಎತ್ತರದ ಕಂಚಿನ ಪ್ರತಿಮೆ ಮಾಡಿರುವುದು ರಾಜ್ಯದಲ್ಲೇ ಮೊದಲು.

ಪೈಲ್ವಾನರು ಕುಸ್ತಿ ಮಾಡುತ್ತಿರುವ ನೂರಾರು ಫೋಟೋಗಳನ್ನು ಗಮನಿಸಿ, ಪೈಲ್ವಾನರು ನಿಂತು ಸೆಣಸಾಡುವ ರೀತಿಯಲ್ಲಿ ಪ್ರತಿಮೆ ವಿನ್ಯಾಸಗೊಳಿಸಲಾಗಿದೆ. ಗಾರೆಯಲ್ಲಿ ಮಾಡಿಸಿದರೆ ಹಾಳಾಗುತ್ತದೆ ಎಂಬ ಕಾರಣಕ್ಕೆ ಹಾಗೂ ನೂರಾರು ವರ್ಷ ಉಳಿಯಲಿ ಎಂಬ ಉದ್ದೇಶದಿಂದ ಕಂಚಿನ ಪ್ರತಿಮೆಯನ್ನು ಮೈಸೂರಿನ ಕಲಾವಿದರಿಂದಲೇ ವಿನ್ಯಾಸಗೊಳಿಸಿ ಸ್ಥಾಪಿಸಲಾಗಿದೆ. 'ಪೈಲ್ವಾನರ ಪ್ರತಿಮೆ'ಗೆ ಸುಮಾರು 37 ಲಕ್ಷ ರೂ.ಖರ್ಚಾಗಿದ್ದು, ಅಷ್ಟೂ ಮೊತ್ತವೂ ನಗರಪಾಲಿಕೆಯ ಅನುದಾನವಾಗಿದೆ.

ಮೊದಲು ಮನೆಗೊಬ್ಬರು ಪೈಲ್ವಾನರು ಇರುತ್ತಿದ್ದರು. ಆದರೆ ಇವತ್ತು 20–30 ಸಾವಿರ ಜನಕ್ಕೆ ಒಬ್ಬರಂತೆ ಲೆಕ್ಕ ಹಾಕಬೇಕಾದ ಪರಿಸ್ಥಿತಿ ಬಂದಿದೆ. ಕುಸ್ತಿ ಎಂಬುದು ಶೋಕಿಯ ಕಲೆಯಲ್ಲ. ಶ್ರದ್ಧೆ, ಸಾಹಸ, ಗುರುಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. 'ಪೈಲ್ವಾನ್' ಎಂದು ಕರೆಸಿಕೊಳ್ಳುವುದೇ ಒಂದು ಗೌರವ. ಸಾವಿರಾರು ಜನರ ಮಧ್ಯೆ ಕುಸ್ತಿ ಮಾಡುವ ಪೈಲ್ವಾನರಿಗೆ ದೊರೆಯುವ ಗೌರವವೇ ವಿಶೇಷ. ಕುಸ್ತಿ ಕ್ರೀಡೆಯ ಮೇಲಿನ ಗೌರವದಿಂದ 'ಪೈಲ್ವಾನರ ಪ್ರತಿಮೆ'ಯನ್ನು ನಿರ್ಮಿಸಿದ್ದು, ಸದ್ಯದಲ್ಲಿಯೇ ಕುಸ್ತಿ ಪಂದ್ಯಾವಳಿ ಆಯೋಜಿಸಿ ಪ್ರತಿಮೆ ಉದ್ಘಾಟಿಸಲಾಗುವುದು. ಈ ಸಂಬಂಧ ಕ್ಷೇತ್ರದ ಶಾಸಕರೊಂದಿಗೂ ಚರ್ಚಿಸಲಾಗಿದೆ.

– **'ಪೈಲ್ವಾನ್' ಶ್ರೀನಿವಾಸ್**, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ

●ಮೋಹನ್ ಕಾಯಕ

ಮೈಸೂರು, ಡಿ.18– ಸಾಂಸ್ಕೃತಿಕ, ಅರಮನೆ, ಪಾರಂಪರಿಕ ನಗರಿಯ ಹೆಗ್ಗುರುತಾದ ಕುಸ್ತಿ ಕಲೆಯ ಜೊತೆಗೆ ಪೈಲ್ವಾನರ ಸಾಹಸ ಸ್ಮರಿಸುವ ವಿನೂತನ ಕಾರ್ಯ ನೆಚ್ಚಿನ ಆಕರ್ಷಣೆಯಾಗಲು ಸಿದ್ಧವಾಗಿ ನಿಂತಿದೆ...!

ಮೈಸೂರಿನ ವಾರ್ಡ್ ನಂ.4ರ ವ್ಯಾಪ್ತಿಯ ಹೆಬ್ಬಾಳ ಬಸವನಗುಡಿ ವೃತ್ತದ ಬದಿಯಲ್ಲಿರುವ ಬಸವನಗುಡಿ ಉದ್ಯಾನ ವನದ ಎದುರು ಮೇರು ಆಕರ್ಷಣೆಯಾಗಲು ಸಿದ್ಧವಾಗಿರುವ 'ಪೈಲ್ವಾನರ ಪ್ರತಿಮೆ' ಕುಸ್ತಿ ಕಲೆಗೆ ಗೌರವಪೂರ್ವಕವಾಗಿ ನಿರ್ಮಿಸಲಾಗಿದ್ದು, ಸದ್ಯದಲ್ಲಿಯೇ ಲೋಕಾರ್ಪಣೆಗೊಳ್ಳಲಿದೆ. ವಿಶ್ವದ ಅತ್ಯಂತ ಪ್ರಾಚೀನ ಕ್ರೀಡೆಗಳಲ್ಲಿ ಒಂದಾದ ಕುಸ್ತಿಗೆ ಮೈಸೂರಿನಲ್ಲಿ ವಿಶೇಷ ಸ್ಥಾನಮಾನ ನೀಡಲಾಗಿದೆ.

ರಾಮಾಯಣದಲ್ಲಿ ಬರುವ ಹನುಮಂತ, ವಾಲಿ, ಸುಗ್ರೀವ ಕುಸ್ತಿಪಟುಗಳಾಗಿದ್ದು, ಭೀಮ ಮತ್ತು ಜರಾಸಂಧನ ನಡುವೆ ನಡೆದ ಕುಸ್ತಿ ಕಾಳಗ ಸ್ಮರಣೀಯ ಎಂದು ಮಹಾಭಾರತದಲ್ಲಿ ಉಲ್ಲೇಖವಾಗಿದೆ. ಅದರಂತೆ ಗುರು ಭಕ್ತಿ, ಶ್ರದ್ಧೆ, ಕಟ್ಟುನಿಟ್ಟಿನ ಅಭ್ಯಾಸದಿಂದ ಕಲಿತು ಸಾಧನೆ ಮಾಡುವ ಕುಸ್ತಿ ಕಲೆಗೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಸೆಣಸಾಡುತ್ತಿರುವ 'ಪೈಲ್ವಾನರ ಕಂಚಿನ ಪ್ರತಿಮೆ' ನಿರ್ಮಿಸಲಾಗಿದೆ.

ನಗರಪಾಲಿಕೆ ಮಾಜಿ ಸದಸ್ಯರೂ ಆದ ಪೈಲ್ವಾನ್ ಶ್ರೀನಿವಾಸ್ ಅವರ ಚಿಂತನೆ, ಪರಿಕಲ್ಪನೆಯಲ್ಲಿ ಸ್ಥಾಪಿತಗೊಂಡಿರುವ ಕಂಚಿನ 'ಪೈಲ್ವಾನರ ಪ್ರತಿಮೆ' ಕುಸ್ತಿ ಕಲೆಯ ಸಂಕೇತವಾಗಿದೆ. ಪಾಲಿಕೆಯ ಸುಮಾರು 37 ಲಕ್ಷ ರೂ.ವೆಚ್ಚದಲ್ಲಿ ಈ ಪ್ರತಿಮೆ ನಿರ್ಮಿಸಲಾಗಿದ್ದು, ನೆಲದಿಂದ 16 ಅಡಿ ಎತ್ತರವಿದೆ. ಅದರಲ್ಲಿ 8 ಅಡಿ ಅಖಾಡ ಮಾದರಿಯ ವೇದಿಕೆಯಾದರೆ, 8 ಅಡಿ ಎತ್ತರ ಪೈಲ್ವಾನರು ಸೆಣಸಾಡುವ ದೃಶ್ಯದಂತಿರುವ ಪ್ರತಿಮೆ ನೋಡುಗರ ಆಕರ್ಷಣೆಯಾಗಿರುವುದಲ್ಲದೆ ಬಸವನಗುಡಿ ಉದ್ಯಾನವನಕ್ಕೆ ಹೊಸ ಮೆರಗು ತಂದಿದೆ.

ಪೈಲ್ವಾನರ ಪ್ರತಿಮೆಗಳಲ್ಲಿ ಒಂದೊಂದು ಪ್ರತಿಮೆ ಸುಮಾರು 400 ಕೆ.ಜಿ ತೂಕವಿದ್ದು, ಗಾಳಿ–ಮಳೆಗೆ ಜಗ್ಗದಂತೆ ವ್ಯವಸ್ಥಿತವಾಗಿ ನಿಲ್ಲಿಸಲಾಗಿದೆ. ಅಲ್ಲದೆ ಪ್ರತಿಮೆ ಸುತ್ತಲೂ ಕಾಂಪೌಂಡ್ ಮಾದರಿಯಲ್ಲಿ ಕಬ್ಬಿಣ ಗ್ರೀಲ್‌ಗಳ ಅಳವಡಿಸಲಾಗಿದ್ದು, ಪ್ರತಿಮೆ ಸಂರಕ್ಷಣೆ ಮಾಡುವ ನಿಟ್ಟಿನಲ್ಲೂ ಎಚ್ಚರಿಕೆ ವಹಿಸಲಾಗಿದೆ. ಹಾಗೆಯೇ ಪ್ರತಿಮೆ ಸುತ್ತಲೂ ಅಲಂಕಾರಿಕ ಗಿಡಗಳನ್ನು ನೆಟ್ಟು, ಮತ್ತಷ್ಟು ರಮಣೀಯವಾಗಿ ಕಾಣುವಂತೆ ಮಾಡಲು ಸಿದ್ಧತೆ ನಡೆಸಲಾಗಿದೆ.

ರಾತ್ರಿ ವೇಳೆ 'ಪೈಲ್ವಾನರ ಪ್ರತಿಮೆ' ನೋಡುಗರನ್ನು ಸೆಳೆಯುವಂತೆ ಪ್ರತಿಮೆ ಸುತ್ತಲೂ ಬಣ್ಣದ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ನಾಲ್ಕೈದು ಬಣ್ಣಗಳನ್ನು ಬೆಳಗುವ ವಿದ್ಯುತ್ ದೀಪಗಳ ಬೆಳಕು ಪ್ರತಿಮೆ ಮೇಲೆ ಬೀಳುವಂತೆ ರೂಪಿಸಿದ್ದು, ರಾತ್ರಿ ವೇಳೆ ಕಾರಂಜಿಯಂತೆ ಪ್ರತಿಮೆಯ ಹೊಳಪು ಚೆಲ್ಲಲಿದೆ. ಅಲ್ಲದೆ ಉದ್ಯಾನವನದ ಮರಗಳ ಪ್ರತಿಮೆ ನೆರಳಾಗಿದ್ದು, ಹಸಿರಿನ ನಡುವೆ ಕಂಚಿನ ಪ್ರತಿಮೆಗಳು ನೋಡಲು ಮನೋಹರವಾಗಿ ಕಾಣುತ್ತಿವೆ.

ಕುಸ್ತಿ ಪರಿಚಯ: 'ಪೈಲ್ವಾನರ ಪ್ರತಿಮೆ'ಯ ಎಡ ಬದಿಯಲ್ಲಿ ಕುಸ್ತಿ ಕಲೆಯ ಕುರಿತು ಮಾಹಿತಿ ನೀಡುವ ಪ್ರಯತ್ನ ಮಾಡಲಾಗಿದೆ. ಅಳವಡಿಸಿರುವ ಶಿಲಾನ್ಯಾಸದಲ್ಲಿ 'ವಿಶ್ವದ ಅತ್ಯಂತ ಪ್ರಾಚೀನ ಕುಸ್ತಿಯನ್ನು ಕ್ರೀಡೆಯಾಗಿ ಕ್ರಿ.ಪೂ.708ರಲ್ಲಿ ಒಲಂಪಿಕ್ಸ್ ಸೇರಿದ್ದು, ಮೈಸೂರು ದಸರಾದಲ್ಲಿ ಕುಸ್ತಿಗೆ ವಿಶೇಷ ಸ್ಥಾನಮಾನವಿದೆ. ಕೆಂಪು ಮಣ್ಣಿನಿಂದ ಚಚ್ಚೌಕ ಕಣವನ್ನು ನಿರ್ಮಿಸಿ ಅದಕ್ಕೆ ಕುಸ್ತಿಯ ಅಖಾಡವೆಂದು ಕರೆಯಲಾಗುತ್ತದೆ. ಕುಸ್ತಿಪಟುಗಳು ಅಂಗಸಾಧನೆ ಮಾಡುವ ಸ್ಥಳವನ್ನು ಗರಡಿ ಮನೆ ಎಂದು ಕರೆಯಲಾಗುತ್ತದೆ. ಕುಸ್ತಿಯು ಗುರುಭಕ್ತಿಯನ್ನು ಹೆಚ್ಚಿಸುವ ಕ್ರೀಡೆ. ಬೇರೆ ಯಾವ ಕ್ರೀಡೆಯಲ್ಲಿಯೂ ಇಂತಹ ಗುರು ಭಕ್ತಿ ಕಂಡುಬರುವುದಿಲ್ಲ. ಶಿಷ್ಯನಾದವ ಗುರುವಿನ ಕಾಲಿಗೆ ಬೀಳುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ' ಎಂದು ಕೆತ್ತಿಸಲಾಗಿದೆ.

ಹೆಬ್ಬಾಗಿಲ ನಂತರದ ಆಕರ್ಷಣೆ: ಹೆಬ್ಬಾಳಿನ ಪ್ರಮುಖ ಆಕರ್ಷಣೆಯಾದ 'ಹೆಬ್ಬಾಳಿನ ಹೆಬ್ಬಾಗಿಲು' ನಂತರ 'ಪೈಲ್ವಾನರ ಪ್ರತಿಮೆ' ಮತ್ತೊಂದು ವಿಶೇಷ ಆಕರ್ಷಣೆಯಾಗಿದೆ. ಅಲ್ಲದೆ ಯೋಗ ಮಂಟಪ, ಪಾರಂಪರಿಕ ವಿದ್ಯುತ್ ದೀಪ, ಆದಿಚುಂಚನಗಿರಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಪುತ್ಥಳಿ ಇರುವ ಬಸವನಗುಡಿ ಉದ್ಯಾನವನ, ನಿತ್ಯ ವಾಕಿಂಗ್ ಮಾಡುವವರ ಅಚ್ಚು–ಮೆಚ್ಚಿನ ತಾಣವಾಗಿಯೂ ರೂಪುಗೊಂಡಿದೆ. ಇದರ ಜೊತೆಗೆ 'ಪೈಲ್ವಾನರ ಪ್ರತಿಮೆ' ಸೇರ್ಪಡೆಗೊಂಡಿರುವುದಕ್ಕೆ ಹಲವರು ಹರ್ಷ ವ್ಯಕ್ತಪಡಿಸಿದ್ದಾರೆ.

ಗೌರವಪೂರ್ವಕವಾಗಿ: ರಾಜ–ಮಹಾರಾಜರ ಕಾಲದಿಂದಲೂ ಬಂದಿರುವ ಕುಸ್ತಿ ಕಲೆ ಉಳಿಯಬೇಕು. ಕೆಮ್ಮಣ್ಣು ಬಹಳ ಒಳ್ಳೆಯದು. ಮೈಗೆ ಬಿದ್ದರೆ ಕೆಲ ಚರ್ಮರೋಗಗಳು ಬರುವುದಿಲ್ಲ. ಇವತ್ತಿನ ಮಕ್ಕಳು ಓದು ಮತ್ತು ಇನ್ನಿತರೆ ಚಟುವಟಿಕೆಗಳಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಓದುವುದರ ಜೊತೆಗೆ ಕ್ರೀಡೆಯೂ ಇದ್ದರೆ ದೈಹಿಕವಾಗಿ, ಮಾನಸಿಕವಾಗಿ ಸದೃಢರಾಗುತ್ತಾರೆ. ಇಂದಿನ ಪೀಳಿಗೆ ಕುಸ್ತಿ ಕಲೆಯನ್ನು ಮರೆಯಬಾರದೆಂಬ ಉದ್ದೇಶದಿಂದ ಹಾಗೂ ಕುಸ್ತಿ ಕಲೆಗೆ ಗೌರವಪೂರ್ವಕವಾಗಿ ಕಂಚಿನ ಪೈಲ್ವಾನರ ಪ್ರತಿಮೆ ನಿರ್ಮಿಸಲಾಗಿದೆ ಎನ್ನುತ್ತಾರೆ ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್.

ಮೈಸೂರಿನಲ್ಲಿ ಒಡೆಯರ ಕಾಲದಿಂದಲೂ ಹಾಸುಹೊಕ್ಕಾಗಿರುವ ಕುಸ್ತಿ ಅಭ್ಯಾಸ ಮಾಡುವವರ ಸಂಖ್ಯೆ ಹೆಚ್ಚಾಗುವುದರ ಜೊತೆಗೆ ಗರಡಿ ಮನೆಗಳು ಸಂಖ್ಯೆ ಮೊದಲಿನಷ್ಟಾಗಬೇಕು. ಈಗಲೂ ಮೈಸೂರಿನಲ್ಲಿ ಹಲವಾರು ಗರಡಿ ಮನೆಗಳಿದ್ದು, ಹಳೇ ಗರಡಿ ಮನೆಗಳಿದ್ದ ಸ್ಥಳದಲ್ಲಿ ಹೊಸ ಗರಡಿ ಮನೆಗಳನ್ನು ಕಟ್ಟಲಾಗಿದೆ. ಹೆಬ್ಬಾಳ ಭಾಗದಲ್ಲಿನ ಮಂಚೇಗೌಡನಕೊಪ್ಪಲು, ಕುಂಬಾರಕೊಪ್ಪಲು ಇತರೆ ಊರುಗಳಲ್ಲಿ ಗರಡಿ ಮನೆಗಳಿವೆ. ನಾನು ಕೂಡ 16ನೇ ವಯಸ್ಸಿಗೆ ಕುಸ್ತಿ ಅಭ್ಯಾಸ ಶುರುಮಾಡಿ, ನಾಡಕುಸ್ತಿಗಳು ಹಾಗೂ ರಾಜ್ಯಮಟ್ಟದ ಕುಸ್ತಿಗಳಲ್ಲಿಯೂ ಭಾಗವಹಿಸಿದ್ದೇನೆ ಎಂದು ಸ್ಮರಿಸುತ್ತಾರೆ.

ಪೋಷಕರು, ಮಕ್ಕಳ ಸಂಬಂಧದ ಕಾಳಜಿ; ನಾಳೆ ವಿವೋ 'ಸ್ವಿಚ್ ಆಫ್'!

vivo

ಮೈಸೂರು, ಡಿ.18(ಎಂಕೆ)– ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳು ಮಾತ್ರವಲ್ಲದೆ ಎಲ್ಲರೂ ಫೋನ್ ಚಟಕ್ಕೆ ಬೀಳುತ್ತಿರುವುದು ಹಾಗೂ ದುಷ್ಪರಿಣಾಮಗಳನ್ನು ಮನಗಂಡಿರುವ 'ವಿವೋ' ಸ್ಮಾರ್ಟ್ ಫೋನ್ ಕಂಪನಿ ಡಿ.20 ರಂದು 'ಸ್ವಿಚ್ ಆಫ್' ಅಭಿಯಾನ ಆರಂಭಿಸಿದೆ.

ಅನೇಕ ಪೋಷಕರು ತಮ್ಮ ಮಕ್ಕಳಿಗೆ ಊಟ ಮಾಡಿಸಲೆಂದು ಫೋನ್ ನೀಡುತ್ತಾರೆ. ಮೊದಮೊದಲು ತಮಾಷೆಯಾಗಿ ಶುರುವಾದರೂ ಕ್ರಮೇಣ ಅವರಿಗೆ ಅದೊಂದು ಚಟವಾಗಿ ಬಿಡುತ್ತದೆ. ಇದರಿಂದಾಗಿ ಮಕ್ಕಳು ಹಗಲಿನಲ್ಲಿ ಹೆಚ್ಚಿನ ಸಮಯವನ್ನು ಫೋನ್‌ನಲ್ಲಿ ಕಳೆಯುತ್ತಾರೆಂದು ಕೆಲವು ವರದಿಗಳು ಹೇಳಿರುವ ಹಿನ್ನಲೆಯಲ್ಲಿ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿ 'ವಿವೋ' 'ಸ್ವಿಚ್‌ಆಫ್' ಎಂಬ ವಿಶೇಷ ಅಭಿಯಾನವನ್ನು ಆರಂಭಿಸಿದೆ.

ಡಿ.20 ರಂದು ತನ್ನ ಎಲ್ಲಾ ಗ್ರಾಹಕರಿಗೆ ತಮ್ಮ ಸ್ಮಾರ್ಟ್‌ಫೋನ್‌ಗಳನ್ನು ಸ್ವಿಚ್ ಆಫ್ ಮಾಡಲು ಕೇಳಿಕೊಂಡಿದೆ. ಜನರು ಅಂದು ರಾತ್ರಿ 8 ರಿಂದ 9 ರವರೆಗೆ ಫೋನ್ ಸ್ವಿಚ್ ಆಫ್ ಮಾಡಿ ತಮ್ಮ ಕುಟುಂಬದೊಂದಿಗೆ ಮೋಜು ಮಾಡಲು ಮತ್ತು ಮಕ್ಕಳು ತಮ್ಮ ಹೆತ್ತವರೊಂದಿಗೆ ಸಂತೋಷವಾಗಿರಲು ಕೇಳಿಕೊಂಡಿದೆ.

ವಿವೋ ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ ಶೇ.77ರಷ್ಟು ಪೋಷಕರು ತಮ್ಮ ಮಕ್ಕಳು ಅತಿಯಾಗಿ ಸ್ಮಾರ್ಟ್ ಫೋನ್ ಬಳಸುತ್ತಿದ್ದಾರೆಂದು ದೂರಿದ್ದಾರೆ ಎಂದು ವಿವೋ ಹೇಳಿದೆ. ತಮ್ಮ ಮಕ್ಕಳು ಮಾತ್ರವಲ್ಲದೆ ತಾವೂ ಕೂಡ ಫೋನ್ ಚಟಕ್ಕೆ ಬಿದ್ದಿದ್ದೇವೆ ಎನ್ನಲಾಗಿದೆ. ಪೋಷಕರು ಮತ್ತು ಮಕ್ಕಳ ನಡುವೆ ಅಂತರವಿದ್ದರೆ ಭವಿಷ್ಯದಲ್ಲಿ ಸಮಾಜಕ್ಕೆ ನಷ್ಟವಾಗುತ್ತದೆ ಎಂಬ ಕಾರಣದಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಕೆಲವು ಸಮೀಕ್ಷೆಗಳ ಪ್ರಕಾರ 12 ವರ್ಷದೊಳಗಿನ ಶೇ.42 ರಷ್ಟು ಮಕ್ಕಳು ದಿನಕ್ಕೆ ಎರಡರಿಂದ ನಾಲ್ಕು ಗಂಟೆಗಳ ಕಾಲ ಫೋನ್ ಪರದೆಗಳಿಗೆ ಅಂಟಿಕೊಂಡಿರುತ್ತಾರೆ. 12 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳು ತಮ್ಮ ದಿನದ ಶೇ.47 ರಷ್ಟು ಕಾಲ ತಮ್ಮ ಫೋನ್‌ಗಳನ್ನು ನೋಡುತ್ತಾರೆ ಶೇ.69 ರಷ್ಟು ಮಕ್ಕಳು ತಮ್ಮದೇ ಆದ ಫೋನ್ ಮತ್ತು ಟ್ಯಾಬ್‌ಗಳನ್ನು ಹೊಂದಿದ್ದಾರೆ 12 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳು ಯಾವುದೇ ಷರತ್ತುಗಳಿಲ್ಲದೆ ಇಂಟರ್ನೆಟ್ ಬಳಸುತ್ತಾರೆ ಎಂದು ಸಮೀಕ್ಷೆಗಳು ಬಹಿರಂಗಪಡಿಸಿವೆ. ಶೇ.74 ರಷ್ಟು ಮಕ್ಕಳು ಯೂಟ್ಯೂಬ್ ವೀಕ್ಷಿಸಲು ತಮ್ಮ ಫೋನ್ ಬಳಸುತ್ತಿದ್ದರೆ, 12 ವರ್ಷಕ್ಕಿಂತ ಮೇಲ್ಪಟ್ಟವರು ಗೇಮಿಂಗ್‌ನಲ್ಲಿ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ ಎಂದು ಕಂಡುಬಂದಿದೆ.

ಇಂದಿನಿಂದ 'ಮೆಸ್ಮರೈಸಿಂಗ್ ಮಂಡಲ' ಚಿತ್ರಕಲಾ ಪ್ರದರ್ಶನ



ಮೈಸೂರು, ಡಿ.18– ಮೈಸೂರಿನ ವಿಜಯನಗರ 2ನೇ ಹಂತದ ಅಂಬರೀಷ್ ರಸ್ತೆಯಲ್ಲಿರುವ ನೆರಳು ಬೆಳಕು ಗ್ಯಾಲರಿ ಕಾಫಿ ಸಿಟಿಯಲ್ಲಿ ನಾಳೆ(ಡಿ.19) ಬೆಳಗ್ಗೆ 11 ಗಂಟೆಗೆ 'ಮೆಸ್ಮರೈಸಿಂಗ್ ಮಂಡಲ' ಚಿತ್ರಕಲಾ ಪ್ರದರ್ಶನ ಆರಂಭವಾಗಲಿದೆ. ಹಿರಿಯ ಕಲಾವಿದ ಎನ್. ಶಿವಲಿಂಗಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಈ ಚಿತ್ರ ಪ್ರದರ್ಶನ ನಾಳೆಯಿಂದ ಡಿ.29ರವರೆಗೆ ನಡೆಯಲಿದೆ. ಈ ಪ್ರದರ್ಶನವನ್ನು ಆಯೋಜಿಸಿರುವ ಕಲಾವಿದೆ ಶಾಂತಿ ರಾಮಕೃಷ್ಣ ಅವರು ಮೈಸೂರಿನ ಕಲಾವಿದರಾಗಿದ್ದು, ಮಂಡಲ ಕಲೆಯ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದಾರೆ. ಮೂರು ದಶಕಗಳ ಕಾಲ ಕಾರ್ಪೋರೇಟ್ ಸಂಸ್ಥೆಗಳಲ್ಲಿ ಕೆಲಸ ಮಾಡಿರುವ ಇವರು ಇದೀಗ ತಮ್ಮನ್ನು ಕಲೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ಡಿ. 21ರಿಂದ ನಿರಂತರ ರಂಗ ಉತ್ಸವ



ಮೈಸೂರು,ಡಿ.18(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಡಿ. 21 ರಿಂದ 25 ರವರೆಗೆ ನಿರಂತರ ಫೌಂಡೇಷನ್ ವತಿಯಿಂದ 'ನಿರಂತರ ರಂಗ ಉತ್ಸವ' ಆಯೋಜಿಸಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಕೆ.ಎಸ್. ಪ್ರಸಾದ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರಂತರ ರಂಗ ಉತ್ಸವವು ಡಿ. 21ರಂದು ಸಂಜೆ 5.30ಕ್ಕೆ ಸಿದ್ದಿ ಡಮಾಮಿ ಜನಪದ ನೃತ್ಯದೊಂದಿಗೆ ಆರಂಭವಾಗಲಿದೆ. ಸಂಜೆ 6.15ಕ್ಕೆ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಜಯರಾಮ ರಾಯಪುರ ಉದ್ಘಾಟಿಸಲಿದ್ದಾರೆ. ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ. ಧರಣಿದೇವಿ ಮಾಲಗತ್ತಿ ಹಾಗೂ ನಿರಂತರ ಸಂಸ್ಥೆಯ ಪ್ರಸಾದ್ ಕುಂದೂರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸಭಾ ಕಾರ್ಯಕ್ರಮದ ನಂತರ ಅಂದು ಸಂಜೆ 7ಕ್ಕೆ ಬೆಂಗಳೂರಿನ ರಂಗರಥ ತಂಡದಿಂದ 'ಕ್ರೌಂಚಗೀತಾ' ನಾಟಕ ಪ್ರದರ್ಶನಗೊಳ್ಳಲಿದೆ. ಡಿ. 22 ರಂದು ಸಂಜೆ 7ಕ್ಕೆ ಅಭಿನಯ ತರಂಗ ತಂಡದಿಂದ 'ಆತಂಕವಾದಿಯ ಆಕಸ್ಮಿಕ ಸಾವು', ಡಿ.23 ರಂದು ಸಂಜೆ ಏಳಕ್ಕೆ ನಿರ್ದಿಗಂತ ತಂಡದಿಂದ 'ಪ್ರಾಜೆಕ್ಟ್ ಡಾರ್ಲಿಂಗ್', ಡಿ.24 ರಂದು ಸಂಜೆ ಏಳಕ್ಕೆ ನಿರಂತರ ತಂಡದಿಂದ 'ಗೊರೂರು', ಡಿ.25 ರಂದು ಸಂಜೆ 6.15ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ವಿಧಾನ ಪರಿಷತ್ ಸದಸ್ಯರಾದ ಉಮಾಶ್ರೀ, ಪ್ರೊ.ಹಿ.ಶಿ. ರಾಮಚಂದ್ರೇಗೌಡ, ಚಂದ್ರಪ್ಪ, ಶ್ರೀನಿವಾಸ ಪಾಲಹಳ್ಳಿ ವೇದಿಕೆಯಲ್ಲಿರುವರು. ಬಳಿಕ ಸಂಜೆ ಏಳಕ್ಕೆ ಆಟಮಾಟ ತಂಡದಿಂದ 'ನಾ ರಾಜಗುರು' ನಾಟಕ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ರಂಗ ಉತ್ಸವದ ಪೋಸ್ಟರ್ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ನಿರಂತರ ಸಂಸ್ಥೆಯ ಅಧ್ಯಕ್ಷ ಎಂ.ಎಂ. ಸುಗುಣ, ಶ್ರೀನಿವಾಸು ಇದ್ದರು.

ಇಂದಿನಿಂದ ಸಿರಿಧಾನ್ಯ ಸಂಭ್ರಮ





ಮೈಸೂರು, ಡಿ.18(ಎಸ್‌ಬಿಡಿ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮತ್ತೆ 'ಸಿರಿಧಾನ್ಯ ಸಂಭ್ರಮ' ಕಳೆಗಟ್ಟಲಿದೆ.

ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಡಿ.19ರಿಂದ ಮೂರು ದಿನಗಳ ಸಿರಿಧಾನ್ಯ ಸಮ್ಮೇಳನ ನಡೆಯಲಿದೆ. ನಿರ್ಲಕ್ಷಿತ ಬೆಳೆಗಳನ್ನು ಮುಖ್ಯವಾಹಿನಿಗೆ ತರುವ 'ಕ್ರಾಪ್ಸ್ ಫಾರ್ ಎಜ್ಡಿ' ಯೋಜನೆಯ ಭಾಗವಾಗಿ 'ಸಹಜ ಸಮೃದ್ಧ' ಸಂಸ್ಥೆ ಈ ಮೇಳವನ್ನು ಆಯೋಜಿಸಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ವತಿಯಿಂದ 'ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ'ವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಆಯೋಜಿಸಲಾಗುತ್ತಿರುವ ಸಮ್ಮೇಳನದಲ್ಲಿ ಹಲವು ಬಗೆಯ ಕಾರ್ಯಕ್ರಮಗಳೂ ನಡೆಯಲಿವೆ.

ರಾಜ್ಯದ ವಿವಿಧ ಭಾಗಗಳಿಂದ ಸಾವಯವ ಕೃಷಿಕರ ಗುಂಪುಗಳು, ರೈತ ಉತ್ಪಾದಕ ಕಂಪನಿಗಳು, ಬೀಜ ಸಂರಕ್ಷಕರು, ಮಹಿಳಾ ಸಂಘಗಳು ಸಿರಿಧಾನ್ಯ ಸಂಭ್ರಮದಲ್ಲಿ ಭಾಗವಹಿಸಲಿವೆ. ಸಿರಿಧಾನ್ಯ ತಳಿಗಳ ಪ್ರದರ್ಶನ, ಬಿತ್ತನೆ ಬೀಜ ವಿನಿಮಯ, ನಿಸರ್ಗಸ್ನೇಹಿ ಉತ್ಪನ್ನಗಳ ಪ್ರದರ್ಶನ ಏರ್ಪಡಿಸಲಾಗುತ್ತಿದೆ. ಸಾವಕ್ಕಿ, ನವಣಕ್ಕಿ, ಕೆಂಪಕ್ಕಿ, ಕೊರಲು, ಹಾರಕದಂತಹ ತಳಿಗಳು ಮೇಳದಲ್ಲಿ ಲಭ್ಯವಿರಲಿವೆ. ರಾಗಿ ತೆನೆಯಿಂದ ತೋರಣ ಮಾಡುವ ಪ್ರಾತ್ಯಕ್ಷಿಕೆಯೂ ಇರಲಿದೆ.

ಮೇಳದ ಅಂಗವಾಗಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಗುಜರಾತ್ ಗಾಯಕರು ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಸಿರಿಧಾನ್ಯದ ಮಹತ್ವ ಸಾರುವ ಹಾಡುಗಳ ಗಾಯನವೂ ಇರಲಿದೆ. ಸ್ವಸಹಾಯ ಸಂಘದ ಮಹಿಳೆಯರು ರಾಗಿ ಶಾವಿಗೆ ತಿನಿಸನ್ನು ಸ್ಥಳದಲ್ಲೇ ತಯಾರಿಸಲಿದ್ದಾರೆ. ಮಿಲೆಟ್ ಬಿಸ್ಕೆಟ್, ಚಕ್ಕುಲಿ, ನಿಪ್ಪಟ್ಟು, ಕೋಡಬಳೆ, ದೇಸಿ ಅಕ್ಕಿಗಳ ಅಡುಗೆಯನ್ನು ಸವಿಯಬಹುದು. ತರಹೇವಾರಿ ತಿಂಡಿ–ತಿನಿಸುಗಳ ಜೊತೆಗೆ ಕೈತೋಟದಲ್ಲಿ ಬಿತ್ತಲು ನಾಟಿ ಬೀಜಗಳು ಮತ್ತು ಸಾವಯವ ಪದಾರ್ಥಗಳು, ಮೌಲ್ಯವರ್ಧಿತ ಉತ್ಪನ್ನಗಳು, ಕೃಷಿ ಸಂಬಂಧಿ ಪುಸ್ತಕಗಳ ಮಾರಾಟವೂ ಇರಲಿದೆ.

ಸಚಿವರಿಂದ ಚಾಲನೆ: ಮಂಗಳವಾರ ಬೆಳಗ್ಗೆ 10.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೈಸೂರು ಸಿರಿಧಾನ್ಯ ಸಂಭ್ರಮವನ್ನು ಉದ್ಘಾಟಿಸಲಿದ್ದು, ರಂಗಕರ್ಮಿ ಅಕ್ಷತಾ ಪಾಂಡವಪುರ 'ಪೌಷ್ಟಿಕ ಪಾಕ' ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಹಲವು ಗಣ್ಯರು ಭಾಗಿಯಾಗಲಿದ್ದಾರೆ.

ಸ್ಕ್ಯಾನಿಂಗ್ ಕೇಂದ್ರಗಳ ಬಗ್ಗೆ ನಿಗಾ ವಹಿಸಿ

• ಭ್ರೂಣ ಹತ್ಯೆ ಗಂಭೀರವಾಗಿ ಪರಿಗಣಿಸಿ • ಸಚಿವ ದಿನೇಶ್ ಗುಂಡೂರಾವ್ ಸೂಚನೆ



ಮಡಿಕೇರಿ, ಡಿ.18–ಕೊಡಗು ಜಿಲ್ಲೆಯಲ್ಲಿ 29 ಸ್ಕ್ಯಾನಿಂಗ್ ಕೇಂದ್ರಗಳಿದ್ದು, ಸ್ಕ್ಯಾನಿಂಗ್ ಕೇಂದ್ರಗಳಿಗೆ ಆಗಾಗ ಭೇಟಿ ನೀಡಿ ತಪಾಸಣೆ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಕಾರ್ಯಗಳ ಪ್ರಗತಿ ಹಾಗೂ ಅನುಷ್ಠಾನ ಸಂಬಂಧ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೆಲ ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ಕೇಳಿಬರುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಕೊಡಗು ಜಿಲ್ಲೆಯಲ್ಲಿ ಕಳೆದ 21 ವರ್ಷದಲ್ಲಿ ಸ್ಕ್ಯಾನಿಂಗ್ ಕೇಂದ್ರಗಳ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ. ಆ ನಿಟ್ಟಿನಲ್ಲಿ ಎಲ್ಲವೂ ಸರಿಯಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ ಎಂದು ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ಶಾಸಕ ಎ.ಎಸ್.ಪೊನ್ನಣ್ಣ, ಸ್ಕ್ಯಾನಿಂಗ್ ಕೇಂದ್ರಗಳು ಹಾಗೂ ವೈದ್ಯಾಧಿಕಾರಿಗಳ ನಡುವೆ ಏನಾದರೂ ಸಂಬಂಧ ಇದೆಯೇ ಎಂಬ ಬಗ್ಗೆ ಸಂಶಯ ಉಂಟಾಗುತ್ತಿದೆ ಎಂದರು.

ನಂತರ ಮಾತನಾಡಿದ ದಿನೇಶ್ ಗುಂಡೂರಾವ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವೈದ್ಯಾಧಿಕಾರಿಗಳು ಸ್ಟಿಂಗ್ ಆಪರೇಷನ್ ಮೂಲಕ ಸ್ಕ್ಯಾನಿಂಗ್ ಕೇಂದ್ರಗಳ ಚಟುವಟಿಕೆ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಜೊತೆಗೆ ಸಾರ್ವಜನಿಕರಿಂದಲೂ ಅಭಿಪ್ರಾಯ ಪಡೆಯುವಂತಾಗಬೇಕು. 'ಲಿಂಗ ಆಯ್ಕೆ ನಿಷೇಧ'ವನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ನಿರ್ದೇಶನ ನೀಡಿದರು. ಸ್ಕ್ಯಾನಿಂಗ್ ಕೇಂದ್ರಗಳು ಅಧಿಕೃತವಾಗಿ ನೋಂದಣಿಯಾಗಿರಬೇಕು. ಅನಧಿಕೃತ ಸ್ಕ್ಯಾನಿಂಗ್ ಕೇಂದ್ರಗಳು ನಡೆಯಬಾರದು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಲಿಂಗಾನುಪಾತವು 978 ಇದೆ ಎಂದು ಮಾಹಿತಿ ನೀಡಿದರು. ಕುಟುಂಬ ಕಲ್ಯಾಣಾಧಿಕಾರಿ ಡಾ.ಆನಂದ್ ಮಾತನಾಡಿ, 2011ರ ಜನಗಣತಿ ಪ್ರಕಾರ 978 ಮಕ್ಕಳ ಲಿಂಗಾನುಪಾತ ಕಾಣಬಹುದು ಎಂದು ವಿವರಿಸಿದರು.

ನಂತರ ಸಚಿವರು ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ವೈದ್ಯರು, ತಜ್ಞ ವೈದ್ಯರ ಸಂಖ್ಯೆ ಕಡಿಮೆ ಇದ್ದು, ಕೊಡಗನ್ನು ವಿಶೇಷ ಜಿಲ್ಲೆ ಎಂದು ಪರಿಗಣಿಸಿ ವೈದ್ಯರ ನಿಯೋಜನೆಗೆ ಕ್ರಮವಹಿಸಲಾಗುವುದು. ಜಿಲ್ಲೆಯಲ್ಲಿ 1336 ಮಂಜೂರಾತಿ ಹುದ್ದೆಯಲ್ಲಿ 838 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 498 ಹುದ್ದೆಗಳು ಖಾಲಿ ಇದ್ದು, ಈ ಸಂಬಂಧ ಕೊಡಗು ಜಿಲ್ಲೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಖಾಲಿ ಹುದ್ದೆ ಭರ್ತಿಗೆ ಕ್ರಮ ವಹಿಸಲಾಗುವುದು. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯೂ 464 ಮಂಜೂರಾತಿ ಹುದ್ದೆಯಲ್ಲಿ 417 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದು, 47 ಹುದ್ದೆಗಳು ಖಾಲಿ ಇವೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಾಹಿತಿ ನೀಡಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತ ರಂದೀಪ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ನವೀನ್ ಭಟ್, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಪಂ ಸಿಇಓ ವರ್ಣಿತ್ ನೇಗಿ ಹಾಜರಿದ್ದರು.

ಕೋವಿಡ್ ಆತಂಕ ಬೇಡ

> ಕೋವಿಡ್ ಸಂಬಂಧಿಸಿದಂತೆ ಯಾರೂ ಆತಂಕ ಪಡುವ ಅಗತ್ಯವಿಲ್ಲ. ಕೇರಳಕ್ಕೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೆಚ್ಚಿನ ನಿಗಾವಹಿಸಲು ಸೂಚಿಸಲಾಗಿದೆ. ಕೋವಿಡ್ ಪರೀಕ್ಷೆ ಹೆಚ್ಚಿಸಲಾಗುವುದು. ಉಸಿರಾಟದ ತೊಂದರೆ ಹಾಗೂ ಶೀತ, ನೆಗಡಿ, ಜ್ವರ ಮತ್ತಿತರ ಲಕ್ಷಣ ಹೊಂದಿರುವವರಿಗೆ ಪರೀಕ್ಷೆ ಮಾಡಲಾಗುವುದು. ಅನಗತ್ಯ ಆತಂಕ ಬೇಡ.
>
> -ದಿನೇಶ್ ಗುಂಡೂರಾವ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ

> ಜಿಲ್ಲೆಯಲ್ಲಿ ತಜ್ಞ ವೈದ್ಯರ ಕೊರತೆ ಇದ್ದು, ಆದಷ್ಟು ಶೀಘ್ರ ತಜ್ಞ ವೈದ್ಯರನ್ನು ನಿಯೋಜಿಸುವಂತಾಗಬೇಕು. ಎಂಆರ್‌ಐ ಸ್ಕ್ಯಾನ್ ಅಳವಡಿಸುವುದು ಸೇರಿದಂತೆ ಅಗತ್ಯ ಮಾನವ ಸಂಪನ್ಮೂಲ ಹಾಗೂ ಉಪಕರಣಗಳನ್ನು ಒದಗಿಸುವಂತಾಗಬೇಕು.
>
> -ಡಾ.ಮಂಥರ್‌ಗೌಡ, ಮಡಿಕೇರಿ ಶಾಸಕ

ಜಿಲ್ಲೆಯ ವಿವಿಧೆಡೆ ಸುಬ್ರಹ್ಮಣ್ಯ ಷಷ್ಠಿ ಆಚರಣೆ



ಮಡಿಕೇರಿ, ಡಿ.18–ಕೊಡಗಿನಾದ್ಯಂತ ವಿವಿಧ ದೇವಾಲಯಗಳಲ್ಲಿ ಸೋಮವಾರ ಸುಬ್ರಹ್ಮಣ್ಯ ಷಷ್ಠಿ ಶ್ರದ್ಧಾಭಕ್ತಿಯಿಂದ ನೆರವೇರಿತು. ನಗರದ ಶ್ರೀ ಓಂಕಾರೇಶ್ವರ ದೇವಾಲಯ, ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ, ಕೋಟೆ ಮಾರಿಯಮ್ಮ ದೇವಾಲಯ ಸೇರಿದಂತೆ ವಿವಿಧ ದೇವಾಲಯಗಳ ನಾಗಬನದಲ್ಲಿ ಮುಂಜಾನೆಯಿಂದ ಅಭಿಷೇಕ, ಅಲಂಕಾರ, ಮಂತ್ರಾಕ್ಷತೆ, ಪುಷ್ಪಾರ್ಚನೆ, ಕುಂಕುಮಾರ್ಚನೆ, ವಿವಿಧ ಪೂಜಾ ಕಾರ್ಯ ನಡೆದವು. ಬ್ರಾಹ್ಮಣರ ಬೀದಿಯ ಅಶ್ವತ್ಥ ಕಟ್ಟೆಯಲ್ಲೂ ನಾಗಾರಾಧನೆ ನಡೆಯಿತು.

ಮುತ್ತಪ್ಪ ದೇವಾಲಯ ಉತ್ಸವ ಸಮಿತಿ ವತಿಯಿಂದ ಷಷ್ಠಿ ಮಹೋತ್ಸವ ಶ್ರದ್ಧಾಭಕ್ತಿಯಿಂದ ಜರುಗಿತು. ಕೆದಕಲ್ ಗ್ರಾಮದ ಭದ್ರಕಾಳೇ ಶ್ವರಿಯ ಶ್ರೀಸುಬ್ರಮಣ್ಯ ದೇವಸ್ಥಾನ, ಅರಪಟ್ಟು ಗ್ರಾಮದ ಭಗವತಿ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಅಧ್ಯಕ್ಷ ಚಿತ್ರ ಬೆಳ್ಯಪ್ಪ, ಆಡಳಿತ ಮಂಡಳಿ ಸದಸ್ಯರು ಹಾಗೂ ಅಧಿಕ ಭಕ್ತರು ಭಾಗವಹಿಸಿದ್ದರು. ಹಳ್ಳಿಗಟ್ಟುವಿನ ಭದ್ರಕಾಳಿ ದೇವಸ್ಥಾನದ ಆವರಣದ ನಾಗಬನದಲ್ಲಿ ಸಾಮೂಹಿಕ ಸುಬ್ರಹ್ಮಣ್ಯ ಷಷ್ಠಿ ಪೂಜೆ ನಡೆಯಿತು.

ವಿರಾಜಪೇಟೆಯಲ್ಲಿ ನಾಗದೇವರಿಗೆ ಹಾಲಾಭಿಷೇಕ



ವಿರಾಜಪೇಟೆ, ಡಿ.18–ಸುಬ್ರಹ್ಮಣ್ಯ ಷಷ್ಠಿ ಪ್ರಯುಕ್ತ ಸೋಮವಾರ ವಿರಾಜಪೇಟೆ ನಗರ ವ್ಯಾಪ್ತಿಯ ಶಿವಕೇರಿಯ ಶ್ರೀ ದುರ್ಗಿ ವಿಷ್ಣು ಮೂರ್ತಿ ಹಾಗೂ ನಾಗ ದೇವರ ಮೂರ್ತಿಗೆ ಹಾಲಾಭಿಷೇಕ, ಕಳಸಾಭಿಷೇಕ ಹಾಗೂ ವಿಶೇಷ ಪೂಜೆ ಕಾರ್ಯ ನೆರವೇರಿಸಲಾಯಿತು.

ಮಧ್ಯಾಹ್ನ ಮಹಾಪೂಜೆ ಬಳಿಕ ಅನ್ನ ಸಂಪರ್ಪಣೆ ಏರ್ಪಡಿಸಲಾಗಿತ್ತು. ಇಲ್ಲಿನ ತೆಲುಗರ ಬೀದಿಯ ಶ್ರೀ ಮಾರಿಯಮ್ಮ ಮತ್ತು ಅಂಗಾಳ ಪರಮೇಶ್ವರಿ ದೇವಸ್ಥಾನ ಟ್ರಸ್ಟ್ ವತಿಯಿಂದ ದಕ್ಷಿಣ ಮಾರಿಯಮ್ಮ ದೇವಸ್ಥಾನದಲ್ಲಿ ಸುಬ್ರಹ್ಮಣ್ಯ ಷಷ್ಠಿ ಅಂಗವಾಗಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ಅನ್ನಸಂತರ್ಪಣೆ ನಡೆಯಿತು. ಇದೇ ವೇಳೆ ಶಾಸಕ ಎ.ಎಸ್.ಪೊನ್ನಣ್ಣ ಮಾರಿಯಮ್ಮ ದೇವರಿಗೆ ಪೂಜೆ ಸಲ್ಲಿಸಿದರು.

ನಗರದ ಗಡಿಯಾರ ಕಂಬದ ಬಳಿಯ ಶ್ರೀ ಮುನೇಶ್ವರ, ಮಹಾಗಣಪತಿ ದೇವಸ್ಥಾನ, ಛತ್ರಕೆರೆ ಬಳಿಯ ಶ್ರೀ ವಿರಾಂಜನೇಯ ದೇವಸ್ಥಾನ, ಅಪ್ಪಯ್ಯ ಸ್ವಾಮಿ ರಸ್ತೆಯ ಬಾಲಾಂಜನೇಯ ದೇವಸ್ಥಾನ ಸೇರಿದಂತೆ ನಗರ ಮತ್ತು ಗ್ರಾಮೀಣ ಭಾಗದ ಇತರೆಡೆ ದೇವಾಲಯಗಳಲ್ಲಿ ಸುಬ್ರಹ್ಮಣ್ಯ ಷಷ್ಠಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಗಡಿ ಗ್ರಾಮಗಳಲ್ಲಿ ಚೆಕ್‌ಪೋಸ್ಟ್ ಸ್ಥಾಪನೆ

ಮಡಿಕೇರಿ, ಡಿ.18–ಕೇರಳದಲ್ಲಿ ಜೆಎನ್–1 ವೈರಸ್ ಸೋಂಕು ಪ್ರಕರಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೇರಳ ಗಡಿ ಹಂಚಿಕೊಂಡಿರುವ ಕೊಡಗು ಜಿಲ್ಲೆಯಲ್ಲೂ ಎಲ್ಲಾ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗುತ್ತಿದೆ. ಗಡಿ ಗ್ರಾಮಗಳಾದ ಕರಿಕೆ, ಮಾಕುಟ್ಟ, ಕುಟ್ಟ, ಪೆರುಂಬಾಡಿಗಳಲ್ಲಿ ಆರೋಗ್ಯ ಇಲಾಖೆಯಿಂದ ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದೆ.

ಗಡಿ ಗ್ರಾಮಗಳಲ್ಲಿ ಬಹುತೇಕ ಜನರು ಕೇರಳದೊಂದಿಗೆ ವ್ಯಾಪಾರ ವಹಿವಾಟು ಹೊಂದಿದ್ದು, ಎರಡೂ ರಾಜ್ಯಗಳ ನಡುವೆ ಪ್ರತಿದಿನ ನೂರಾರು ವಾಹನಗಳ ಓಡಾಟವೂ ಇದೆ. ಈ ಹಿನ್ನೆಲೆಯಲ್ಲಿ ಗಡಿ ಗ್ರಾಮಗಳಲ್ಲಿ ಚೆಕ್‌ಪೋಸ್ಟ್ ತೆರೆಯಲಾಗಿದ್ದು, ವಾಹನ ಸವಾರರನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಪ್ರಾರಂಭಿಕ ಹಂತವಾಗಿ ಥರ್ಮಲ್ ಸ್ಕ್ಯಾನರ್ ಮೂಲಕ ದೇಹದ ಉಷ್ಣಾಂಶವನ್ನು ಪರೀಕ್ಷೆ ಮಾಡಲಾಗುತ್ತಿದೆ. ಜ್ವರ, ಕೆಮ್ಮು, ಶೀತ ಮತ್ತಿತ್ತರ ಸೋಂಕಿನ ಲಕ್ಷಣಗಳು ಕಂಡು ಬಂದಲ್ಲಿ ಸಮೀಪದ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಗೆ ಸಲಹೆ ನೀಡಲಾಗುತ್ತಿದೆ. ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ.





ಕೂಡಿಗೆಯಲ್ಲಿ ಉದ್ಭವ ಸುಬ್ರಹ್ಮಣ್ಯಸ್ವಾಮಿ ರಥೋತ್ಸವ

ಕುಶಾಲನಗರ, ಡಿ.18–ತಾಲೂಕಿನ ಪವಿತ್ರ ಕಾವೇರಿ–ಹಾರಂಗಿ ನದಿ ಸಂಗಮ ಕ್ಷೇತ್ರವಾದ ಕೂಡಿಗೆಯ ಟಾಟಾ ಕಾಫಿ ನಿಯಮಿತ, ಕುಶಾಲನಗರ ಕಾಫಿ ಸಂಸ್ಕರಣಾ ಕೇಂದ್ರದ ವ್ಯಾಪ್ತಿಯ ಶ್ರೀ ಉದ್ಭವಸ್ವಾಮಿಯ 55ನೇ ವಾರ್ಷಿಕ ಮಹಾ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಚಂಪಾ ಷಷ್ಠಿ ಅಂಗವಾಗಿ ಸುಬ್ರಹ್ಮಣ್ಯಸ್ವಾಮಿಯ ಸನ್ನಿದಿಯಲ್ಲಿ ಬೆಳಗ್ಗೆ 7 ಗಂಟೆಗೆ ಸ್ವಾಮಿಗೆ ಅಭಿಷೇಕ, ಮಹಾ ಪೂಜೆ, ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ, ತೀರ್ಥ ಪ್ರಸಾದ ವಿನಿಯೋಗಿಸಲಾಯಿತು. ಮಧ್ಯಾಹ್ನ 12.30 ಗಂಟೆಗೆ ದಿಗ್ಬಲಿ, ರಥಬಲಿ, ರಥಪೂಜೆ ನಡೆದ ನಂತರ ಸುಬ್ರಹ್ಮಣ್ಯಸ್ವಾಮಿಯ ವಿಗ್ರಹವನ್ನು ಕುಳ್ಳಿರಿಸಿ ವಿಶೇಷ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ರಥೋತ್ಸವ ಕೂಡಿಗೆ ಮುಖ್ಯ ರಸ್ತೆಯಲ್ಲಿ ಸಾಗಿ ಕೂಡುಮಂಗಳೂರು ಗ್ರಾಮದವರೆಗೆ ಸಾಗಿತು. ನಂತರ ಸಂಜೆ 4 ಗಂಟೆಗೆ ಕೂಡುಮಂಗಳೂರು ಗ್ರಾಮದಿಂದ ಸ್ವಸ್ಥಳಕ್ಕೆ ರಥವನ್ನು ಭಕ್ತರು ಎಳೆದುಕೊಂಡು ಬಂದರು.

ನಿಯಂತ್ರಣ ತಪ್ಪಿ ಕಾರು ಪಲ್ಟಿ

ಮಡಿಕೇರಿ, ಡಿ.18–ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆಬದಿಯ ಬರೆಯಿಂದ ಪಲ್ಟಿಯಾಗಿ ಪ್ರಯಾಣಿಕರು ಪಾರಾದ ಘಟನೆ ಸೋಮವಾರ ನಾಪೋಕ್ಲು–ಕಕ್ಕಬ್ಬೆ ಮುಖ್ಯ ರಸ್ತೆಯ ಕೋಟೇರಿ ಬಳಿ ನಡೆದಿದೆ. ಕಕ್ಕಬ್ಬೆ ಕಡೆಯಿಂದ ನಾಪೋಕ್ಲುವಿಗೆ ಬರುತ್ತಿದ್ದ ಕಾರು, ಎದುರಿಗೆ ಬರುತ್ತಿದ್ದ ಮತ್ತೊಂದು ವಾಹನಕ್ಕೆ ದಾರಿಕೊಡುವ ಸಂದರ್ಭ ಚಾಲಕನ ನಿಯಂತ್ರಣ ತಪ್ಪಿ ಕೋಟೇರಿ ಬಳಿ ಪಲ್ಟಿಯಾಗಿದೆ. ಕಾರಲ್ಲಿದ್ದ ಪ್ರಯಾಣಿಕರು ಅದೃಷ್ಟವಶಾತ್ ಪ್ರಾಣಾಪಾಯದದಿಂದ ಪಾರಾಗಿದ್ದಾರೆ.

ಮರುಕಳಿಸಿದ ಅವಘಡ: ಕಳೆದ 10 ತಿಂಗಳ ಹಿಂದೆ ಖಾಸಗಿ ಬಸ್ ಇದೇ ಸ್ಥಳದಲ್ಲಿ ಪಲ್ಟಿಯಾಗಿ ಕಕ್ಕಬ್ಬೆಯ ಮಹಿಳೆ ಮೃತಪಟ್ಟು, ಶಾಲಾ ವಿದ್ಯಾರ್ಥಿಗಳು ಸೇರಿದಂತೆ ಇತರ ಪ್ರಯಾಣಿಕರು ಗಂಭೀರ ಗಾಯಗೊಂಡಿದ್ದರು. ಈ ವೇಳೆ ಸಾರ್ವಜನಿಕರು ರಸ್ತೆಗೆ ತಡೆಗೋಡೆ ನಿರ್ಮಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಒತ್ತಾಯಿಸಿದ್ದರು. ಆದರೆ, ಇಲಾಖೆ ಘಟನೆ ನಡೆದು 10 ತಿಂಗಳು ಕಳೆದರೂ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ತೋರಿದ್ದರಿಂದ ಇದೀಗ ಅವಘಡ ಮರುಕಳಿಸಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕೊಳ್ಳೇಗಾಲದಲ್ಲಿ ಸುಬ್ರಹ್ಮಣ್ಯೇಶ್ವರ, ಮರಳೇಶ್ವರ ರಥೋತ್ಸವ



ಕೊಳ್ಳೇಗಾಲ, ಡಿ.18– ಕೊಳ್ಳೇಗಾಲ ಪಟ್ಟಣದಲ್ಲಿ ಷಷ್ಠಿ ಹಬ್ಬದ ಪ್ರಯುಕ್ತ ಸೋಮವಾರ ಸುಬ್ರಹ್ಮಣ್ಯೇಶ್ವರಸ್ವಾಮಿ ಮತ್ತು ಮರಳೇಶ್ವರ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಪಟ್ಟಣದ ಎಸ್‌ಟಿ ರಸ್ತೆಯ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯದ ಬಳಿ ಉತ್ಸವ ಮೂರ್ತಿಯನ್ನು ತೇರಿನಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಪೂಜೆ ಸಲ್ಲಿಸಿದ ಬಳಿಕ ನೂರಾರು ಭಕ್ತರ ಸಮ್ಮುಖದಲ್ಲಿ ಮೆರವಣಿಗೆ ಸಾಗಿತು. ದೇವಾಂಗಪೇಟೆಯ ಎಲ್ಲಾ ಬೀದಿಗಳಲ್ಲಿ ಮಂಗಳವಾದ್ಯ ಸಮೇತ ಮೆರವಣಿಗೆ ನಡೆಸಲಾಯಿತು. ಈ ವೇಳೆ ಭಕ್ತರು ರಥೋತ್ಸವ ಆಗಮಿಸುತ್ತಿದ್ದಂತೆ ಪೂಜೆ ಸಲ್ಲಿಸುವ ಮೂಲಕ ಹರಕೆ ಸಮರ್ಪಿಸಿದರು.

ಮುಂಜಾನೆಯಿಂದ ದೇವಾಲಯದಲ್ಲಿ ಸುಬ್ರಹ್ಮಣ್ಯೇಶ್ವರಸ್ವಾಮಿ ಮೂರ್ತಿಗೆ ಏಕವಾರ ರುದ್ರಾಭಿಷೇಕ, ಬಲಿದಾನ, ಮಹಾ ಮಂಗಳಾರತಿ ಇತ್ಯಾದಿ ಸೇವಾ ಕೈಂಕರ್ಯ ನೆರವೇರಿಸಲಾಯಿತು. ಭಕ್ತರು ರಥದ ಮೇಲೆ ಉರುಕಡಲೆ, ನಾಣ್ಯಗಳು, ಮೆಣಸು, ದ್ರಾಕ್ಷಿ, ಕಂಜೂರ ಎಸೆದು ತಮ್ಮ ಇಷ್ಟಾರ್ಥ ಪ್ರಾರ್ಥಿಸಿದರು. ದೇವಾಲಯದಲ್ಲಿ ಸಂಜೆ ಧೂಳಿ ಉತ್ಸವ ಹಾಗೂ ಏಕಾವರ ರುದ್ರಾಭಿಷೇಕ ಜರುಗಿತು. ಡಾ.ವಿದ್ವಾನ್ ಪೂಲಾ ಎನ್.ಸುಬ್ರಹ್ಮಣ್ಯಸ್ವಾಮೀಜಿ ಪೂಜಾ ಕೈಂಕರ್ಯ ನಡೆಸಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಕಾರ್ಯದರ್ಶಿ ಬಸ್ತೀಪುರ ರವಿ, ನಗರಸಭೆ ಸದಸ್ಯರಾದ ಎ.ಪಿ.ಶಂಕರ್, ಚಿಂತು ಪರಮೇಶ್, ಮಧುಚಂದ್ರ ಪೂಜೆ ಸಲ್ಲಿಸಿದರು.

ಸುಬ್ರಹ್ಮಣ್ಯೇಶ್ವರಸ್ವಾಮಿ ಬ್ರಹ್ಮರಥೋತ್ಸವ: ಷಷ್ಠಿ ಪ್ರಯುಕ್ತ ಮರಳೇಶ್ವರ ದೇವಾಲಯದಲ್ಲಿ ಸುಬ್ರಹ್ಮಣ್ಯೇಶ್ವರಸ್ವಾಮಿ ಬ್ರಹ್ಮರಥೋತ್ಸವ ಭಕ್ತರ ಸಮ್ಮುಖದಲ್ಲಿ ನಡೆಯಿತು. ಪಟ್ಟಣದ ಮರಳೇಶ್ವರ ದೇವಸ್ಥಾನದಲ್ಲಿ ಮುಂಜಾನೆಯಿಂದ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸುಬ್ರಹ್ಮಣ್ಯೇಶ್ವರಸ್ವಾಮಿಗೆ ವಿಶೇಷ ದ್ರವ್ಯಾಭಿಷೇಕ ಹಾಗೂ ವಿವಿಧ ಅಭಿಷೇಕ ನಡೆಸಲಾಯಿತು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ತೇರು ಎಳೆದದ್ದು ವಿಶೇಷ. ಡಾ.ನಾಗೇಂದ್ರ ಭಟ್ಟರು ಹಾಗೂ ಶಿವರಾಮಭಟ್ಟರು ಪೂಜಾಕೈಂಕರ್ಯ ನೇರವೇರಿಸಿದರು.

ಜಿಲ್ಲೆಯ ವಿವಿಧೆಡೆ ಚಂಪಾ ಷಷ್ಠಿ ಆಚರಣೆ

• ಹುತ್ತಗಳಿಗೆ ಕೋಳಿ ಬಲಿ • ನಾಗಪ್ಪನಿಗೆ ನಮನ



ಚಾಮರಾಜನಗರ, ಡಿ.18–ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು, ಗುಂಡ್ಲುಪೇಟೆ ಸೇರಿದಂತೆ ಹಲವೆಡೆ ಚಂಪಾ ಷಷ್ಠಿಯನ್ನು ಸೋಮವಾರ ಶ್ರದ್ಧಾ–ಭಕ್ತಿಯಿಂದ ಜನರು ಆಚರಿಸಿದರು.

ಷಷ್ಠಿಯಲ್ಲಿ ಸಾಕು ಹಾಲು, ಬೆಣ್ಣೆ, ಪಂಚಾಮೃತವನ್ನು ಹುತ್ತಕ್ಕೆ ಎರೆಯುವುದು ಸಾಮಾನ್ಯ. ಆದರೆ, ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ವಿಶಿಷ್ಟ ರೀತಿ ಆಚರಣೆ ಚಾಲ್ತಿಯಲ್ಲಿದ್ದು, ಹುತ್ತಗಳಿಗೆ ಕೋಳಿಗಳನ್ನು ಬಲಿ ನೀಡಿ ಅವುಗಳ ರಕ್ತವನ್ನು ಅರ್ಪಿಸಲಾಗುತ್ತದೆ. ಈ ಆಚರಣೆಯನ್ನು 'ತನಿ ಹಬ್ಬ' ಎಂದು ಕರೆಯಲಾಗುತ್ತದೆ.

ಚಾಮರಾಜನಗರ ತಾಲೂಕಿನ ಮಲ್ಲಯ್ಯನಪುರ, ಉತ್ತುವಳ್ಳಿ, ಯಳಂದೂರು ತಾಲೂಕಿನ ಗುಂಬಳ್ಳಿ ಹೀಗೆ ಬಹುತೇಕ ಕಡೆ ಷಷ್ಠಿ ಪ್ರಯುಕ್ತ ಹುತ್ತಕ್ಕೆ ಕೋಳಿ ಬಲಿ ಕೊಟ್ಟು ನಾಗಪ್ಪನಿಗೆ ನಮಿಸಿ, ಇಷ್ಟಾರ್ಥ ಈಡೇರಿಕೆಗೆ ಬೇಡಿಕೊಂಡರು. ಷಷ್ಠಿ ಹಬ್ಬದ ದಿನ ಹುತ್ತಗಳಿಗೆ ಕೋಳಿಗಳನ್ನು ಬಲಿ ನೀಡಿದರೆ, ಹಾವುಗಳ ಉಪಟಳ ಇರುವುದಿಲ್ಲ. ನಾಗದೋಷವೂ ಬರುವುದಿಲ್ಲ ಎಂಬ ನಂಬಿಕೆ ಜನರಲ್ಲಿದೆ. ಹೀಗಾಗಿ ತಲೆಮಾರುಗಳಿಂದ ಈ ಸಂಪ್ರದಾಯವನ್ನು ಆಚರಿಸಿಕೊಂಡು ಬರಲಾಗುತ್ತಿದೆ.

ಹುತ್ತಗಳಿಗೆ ವಿಶೇಷ ಪೂಜೆ: ಕೋಳಿಗಳನ್ನು ಬಲಿ ಕೊಡದೇ ಇರುವವರು ಷಷ್ಠಿಯ ಅಂಗವಾಗಿ ಹುತ್ತಗಳಿಗೆ ವಿಶೇಷ ಪೂಜೆ ಸಲ್ಲಿಸಿದರು. ನಗರದ ಮಾರಮ್ಮನ ದೇವಸ್ಥಾನದ ಹಿಂಭಾಗ, ಭುಜಗೇಶ್ವರಿ ದೇವಸ್ಥಾನ ಸೇರಿದಂತೆ ಖಾಲಿ ನಿವೇಶನಗಳು ಅಥವಾ ಜಾಗಗಳಲ್ಲಿರುವ ಹುತ್ತಗಳಿಗೆ ಮಹಿಳೆಯರು ಪೂಜೆ ಸಲ್ಲಿಸಿದರು.

ಬೆಳಗ್ಗೆಯಿಂದಲೇ ಉಪವಾಸ ಇದ್ದು ಹುತ್ತಗಳ ಬಳಿ ತೆರಳಿ, ಅಗರಬತ್ತಿ ಹಚ್ಚಿ, ಹುತ್ತಕ್ಕೆ ಹತ್ತಿಯ ಹಾರ ಹಾಕಿ, ಅರಿಸಿನ, ಕುಂಕುಮ ಇಟ್ಟು, ಹಾಲು, ಬೆಣ್ಣೆ ಎರೆದರು. ಬಾಳೆಹಣ್ಣು ಸಕ್ಕರೆ ಮತ್ತು ಹಾಲನ್ನು ನೈವೇದ್ಯ ಮಾಡಿದರು. ಮನೆಗಳಲ್ಲಿ ಹಬ್ಬದ ಅಡುಗೆ ಸಿದ್ಧಪಡಿಸಿ ಸವಿದರು. ಇನ್ನೂ ಜಿಲ್ಲೆಯ ಬಹುತೇಕ ದೇವಾಲಯಗಳಲ್ಲಿ ಷಷ್ಠಿ ಅಂಗವಾಗಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕಾರ್ಯ ನಡೆಯಿತು.

ಮೆರವಣಿಗೆ: ನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ಸೋಮವಾರ ಷಷ್ಠಿ ಅಂಗವಾಗಿ ಸುಬ್ರಹ್ಮಣ್ಯಸ್ವಾಮಿಗೆ ಪೂಜೆ ನೆರವೇರಿತು. ನಂತರ ಉತ್ಸವ ಮೂರ್ತಿಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಆಗಮಿಕರಾದ ದರ್ಶನ್, ರಾಮಕೃಷ್ಣ ಭಾರದ್ವಾಜ್, ಅನಿಲ್ ಕುಮಾರ್ ದೀಕ್ಷಿತ್, ಉತ್ಸವ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಕ್ಷುಲ್ಲಕ ಕಾರಣಕ್ಕೆ ಯುವಕನಿಗೆ ಚಾಕು ಇರಿತ

ಚಾಮರಾಜನಗರ, ಡಿ.18–ಕ್ಷುಲ್ಲಕ ಕಾರಣಕ್ಕೆ ಮಾತಿನ ಚಕಮಕಿ ನಡೆದು ಯುವತಿ ಸೇರಿದಂತೆ ಆಕೆಯ ಕಡೆಯವರು ಯುವಕನಿಗೆ ಚಾಕುವಿನಿಂದ ಇರಿದಿರುವ ಘಟನೆ ನಗರದಲ್ಲಿ ನಡೆದಿದೆ.

ನಗರದ ಸಂತಜೋಸೆಫ್ ಆಸ್ಪತ್ರೆ ಬಳಿಯ ನಿವಾಸಿ ಸಂಜಯ್‌ಕುಮಾರ್ (22) ಇರಿತಕ್ಕೆ ಒಳಗಾದ ಯುವಕ. ಈತನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಗರದ ಹೋಟೆಲ್‌ವೊಂದರಲ್ಲಿ ಭಾನುವಾರ ಮಧ್ಯಾಹ್ನ ಊಟ ಮಾಡುತ್ತಿದ್ದ ವೇಳೆ ಯುವಕ ಸಂಜಯ್‌ಕುಮಾರ್ ಹಾಗೂ ಯುವತಿ ನಡುವೆ ಕ್ಷುಲ್ಲಕ ಕಾರಣಕ್ಕೆ ಮಾತಿನ ಚಕಮಕಿ ನಡೆದೆ. ಈ ವೇಳೆ ಹೋಟೆಲ್ ಸಿಬ್ಬಂದಿ ಎರಡು ಗುಂಪಿನ ಕಡೆಯವರನ್ನು ಸಮಾಧಾನ ಪಡಿಸಿ ಕಳುಹಿಸಿದರು. ಆದರೆ, ಸಂಜೆ ವೇಳೆ ಬಡಾವಣೆಯಲ್ಲಿ ವಾಕ್ ಮಾಡುತ್ತಿದ್ದ ಸಂದರ್ಭದಲ್ಲಿ ಯುವತಿ ಹಾಗೂ ಅವರ ಕಡೆಯವರು ಸಂಜಯ್ ಕುಮಾರ್ ಮೇಲೆ ಹಲ್ಲೆ ನಡೆಸಿ, ಚಾಕುವಿನಿಂದ ಇರಿದ್ದಾರೆ.

ನಗರದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಗಾಯಾಳುವನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹಲ್ಲೆಗೊಳಗಾಗಿರುವ ಯುವಕ ಈ ಸಂಬಂಧ ಪಟ್ಟಣ ಪೊಲೀಸರಿಗೆ ದೂರು ನೀಡಿದ್ದು, ಯುವತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೂವರು ಯುವಕರ ಬಂಧನಕ್ಕೆ ಬಲೆ ಬೀಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅರಣ್ಯ, ಕಂದಾಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ



ಚಾಮರಾಜನಗರ, ಡಿ.18–ಎಸ್‌ಸಿ, ಎಸ್‌ಟಿ ಸಾಗುವಳಿ ಜಮೀನುದಾರರಿಗೆ ಅರಣ್ಯ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಬಡಾವಣೆಯ ನಿವಾಸಿಗಳು ದಲಿತ ಸಂಘರ್ಷ ಸಮಿತಿ ಆಶ್ರಯದಲ್ಲಿ ಜಿಲ್ಲಾಡಳಿತ ಭವನದ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದರು.

ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ, ದಸಂಸ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು, ಅರಣ್ಯ, ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ, ನಂತರ ಉಪವಿಭಾಗಾಧಿಕಾರಿ ಮಹೇಶ್ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಹೆಚ್.ಡಿ.ಫಾರೆಸ್ಟ್, ಪುಣಜನೂರು ಸ್ಟೇಟ್ ಫಾರೆಸ್ಟ್ ಸರ್ವೆ ನಂ:1, 3, 5ರಲ್ಲಿ ಸುಮಾರು 150 ಜನರಿಗೆ ಸೇರಿದ ಜಮೀನುಗಳಿದ್ದು, ಈ ಜಮೀನಿನಲ್ಲಿ 50 ವರ್ಷಗಳಿಂದಲೂ ವ್ಯವಸಾಯ ಮಾಡುತ್ತಿದ್ದಾರೆ. ಕೋವಿಡ್ ಕಾರಣದಿಂದ ಎರಡು ಮೂರು ವರ್ಷಗಳಿಂದ ಆರ್ಥಿಕ ತೊಂದರೆಯಿಂದ ಸ್ವಲ್ಪ ಜಮೀನನ್ನು ಉಳುಮೆ ಮಾಡಲು ಆಗದ ಕಾರಣದಿಂದ ವ್ಯವಸಾಯ ಕೈಬಿಡಲಾಗಿತ್ತು. ಆರ್ಥಿಕತೆ ಸುಧಾರಿಸಿಕೊಂಡು ಜಮೀನನ್ನು ಉಳುಮೆ ಮಾಡಲು ಹೋದಾಗ ಅರಣ್ಯ ಇಲಾಖೆಯವರು ತೊಂದರೆ ನೀಡುತ್ತಿದ್ದಾರೆ ಆರೋಪಿಸಿದರು. ಕೂಡಲೇ ಸಂಬಂಧಪಟ್ಟ ಇಲಾಖೆಯವರು ಎಸ್‌ಸಿ, ಎಸ್‌ಟಿ ಸಾಗುವಳಿದಾರರಿಗೆ ವ್ಯವಸಾಯ ಮಾಡಲು ಅವಕಾಶ ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಅಮರಣಾಂತ ಉಪವಾಸ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ವಕೀಲರಾದ ದಲಿತ ರಾಜ್, ಯಜಮಾನರಾದ ನಾಗರಾಜು, ಮಹದೇವಯ್ಯ, ರಂಗಸ್ವಾಮಿ, ಡಿಎಸ್‌ಎಸ್ ಸಂಂಯೋಜಕ ಕೆ.ಎಂ. ನಾಗರಾಜು, ಭಾಗವಹಿಸಿದ್ದರು.

ಗುಂಡ್ಲುಪೇಟೆಯಲ್ಲಿ ಸುಬ್ರಹ್ಮಣ್ಯ ಷಷ್ಠಿ



ಗುಂಡ್ಲುಪೇಟೆ, ಡಿ.18– ಗುಂಡ್ಲುಪೇಟೆ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಸುಬ್ರಹ್ಮಣ್ಯ ಷಷ್ಠಿ ಹಬ್ಬವನ್ನು ಸೋಮವಾರ ಆಚರಿಸಲಾಯಿತು. ಮುಂಜಾನೆಯಿಂದಲೇ ಪಟ್ಟಣದ ದೇವಾಲಯ ಮತ್ತು ವಿವಿಧ ಬಡಾವಣೆ ಗಳಲ್ಲಿರುವ ಹುತ್ತಕ್ಕೆ ಪೂಜೆ ಸಲ್ಲಿಸಿ ತನಿ ಎರೆಯುವ ಮೂಲಕ ಜನರು ಷಷ್ಠಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ದೇವಾಲಯ ಆವರಣಗಳಲ್ಲಿರುವ ನಾಗರಕಲ್ಲಿಗೆ ಹಾಲಿನ ಅಭಿಷೇಕ ಮತ್ತು ಹುತ್ತಕ್ಕೆ ನೈವೇದ್ಯ ಸಮರ್ಪಿಸಿ ಮಹಿಳೆಯರು ಮತ್ತು ಮಕ್ಕಳು ಪೂಜೆ ಸಲ್ಲಿಸಿದರು.

ಸ್ಕೂಟರ್‌ಗೆ ಕಾರು ಡಿಕ್ಕಿ: ಪತ್ರಕರ್ತ ಸಾವು



ಮೈಸೂರು, ಡಿ. 18– ಸ್ಕೂಟರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಪತ್ರಕರ್ತ ಸಾವನ್ನಪ್ಪಿದ ಘಟನೆ ಮೈಸೂರಿನ ರಿಂಗ್ ರಸ್ತೆಯ ನಂಜನಗೂಡು ರಸ್ತೆ ಜಂಕ್ಷನ್ ಬಳಿ ಸಂಭವಿಸಿದೆ.

ಹನೂರಿನ 'ಉದಯವಾಣಿ' ಪತ್ರಿಕೆ ವರದಿಗಾರ ವಿನೋದ್(38) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಕಾರ್ಯನಿಮಿತ್ತ ಭಾನುವಾರ ಸಂಜೆ ಮೈಸೂರಿನ ಜೆ.ಪಿ.ನಗರಕ್ಕೆ ಹೋಗಲೆಂದು ಸ್ಕೂಟರ್‌ನಲ್ಲಿ ಬಂದಿದ್ದರು. ನರಸೀಪುರ ರಸ್ತೆಯಿಂದ ಎಡಕ್ಕೆ ತಿರುಗಿ ರಿಂಗ್‌ರಸ್ತೆಯಲ್ಲಿ ಇವರು ತೆರಳುತ್ತಿದ್ದಾಗ ನಂಜನಗೂಡು ರಸ್ತೆ ಜಂಕ್ಷನ್ ಬಳಿ ಕೇರಳ ನೋಂದಣಿ ಸಂಖ್ಯೆಯಿರುವ ಕಾರು ಇವರ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ರಾತ್ರಿ 8.30ರ ವೇಳೆಯಲ್ಲಿ ಸಾವನ್ನಪ್ಪಿದ್ದಾರೆ.

ಮೃತರು ತಂದೆ–ತಾಯಿ, ಸಹೋದರ, ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಮಂಗಳವಾರ ಹನೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಶಾಸಕ ಎಂ.ಆರ್. ಮಂಜುನಾಥ್, ಮಾಜಿ ಶಾಸಕ ನರೇಂದ್ರ ಬಿಜೆಪಿ ಮುಖಂಡ ಜನಧ್ವನಿ ವೆಂಕಟೇಶ್, ಚಾಮರಾಜನಗರ ಜಿಲ್ಲಾ ಪತ್ರಕರ್ತರ ಸಂಘ, ಕೊಳ್ಳೇಗಾಲ, ಹನೂರು, ಯಳಂದೂರು ಮತ್ತು ಗುಂಡ್ಲುಪೇಟೆ ತಾಲೂಕು ಪತ್ರಕರ್ತರ ಸಂಘಗಳು ಸಂತಾಪ ಸೂಚಿಸಿವೆ.



ಚಾಮರಾಜನಗರ ತಾಲೂಕಿನ ನಾಗವಳ್ಳಿ ಗ್ರಾಮದ ಪರಿಶಿಷ್ಟ ಜಾತಿಯ ಬಡಾವಣೆಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು. ಗ್ರಾಪಂ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷ ಅಸ್ಗರ್ ಪಾಷಾ, ಸದಸ್ಯರಾದ ಸರೋಜಮ್ಮ, ಪುಟ್ಟನಂಜಮ್ಮ, ಸುಕುಮಾರ್, ತಾಪಂ ಮಾಜಿ ಅಧ್ಯಕ್ಷ ಚಿಕ್ಕಮಹದೇವು, ನಾಗವಳ್ಳಿ ನಾಗಯ್ಯ, ಕೆಆರ್‌ಡಿಎಲ್ ಇಂಜಿನಿಯರ್ ಮಧು, ಗ್ರಾಮಸ್ಥರು ಇದ್ದರು.

ಕಾಂಗ್ರೆಸ್ ದೇಣಿಗೆ ಸಂಗ್ರಹ ಅಭಿಯಾನಕ್ಕೆ 1.38 ಲಕ್ಷ ರೂ. ನೀಡಿ ಮಲ್ಲಿಕಾರ್ಜುನ ಖರ್ಗೆ ಚಾಲನೆ

ನವದೆಹಲಿ: ಕಾಂಗ್ರೆಸ್ ಪಕ್ಷದ ದೇಶಕ್ಕಾಗಿ ದೇಣಿಗೆ ಕಾರ್ಯಕ್ರಮಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರೂ. 1.38 ಲಕ್ಷ ದೇಣಿಗೆ ನೀಡುವ ಮೂಲಕ ಸೋಮವಾರ ಇಲ್ಲಿ ಚಾಲನೆ ನೀಡಿದರು.ಉತ್ತಮ ಭಾರತ ನಿರ್ಮಿಸುವ ನಿಟ್ಟಿನಲ್ಲಿ ಬೆಂಬಲಿಗರು ಹಣವನ್ನು ದೇಣಿಗೆ ನೀಡುವಂತೆ ಅವರು ಒತ್ತಾಯಿಸಿದ್ದಾರೆ.

ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇವಲ ಶ್ರೀಮಂತರಿಂದ ಹಣವನ್ನು ಸಂಗ್ರಹಿಸುತ್ತಿದ್ದರೆ, ಅವರ ಇಚ್ಛೆಗೆ ಅನುಗುಣವಾಗಿ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ನಮ್ಮ ಪಕ್ಷವು ಯಾವಾಗಲೂ ಹಿಂದುಳಿದವರು, ದಲಿತರು, ಆದಿವಾಸಿಗಳು, ಒಬಿಸಿಗಳು, ಅಲ್ಪಸಂಖ್ಯಾತರು ಮತ್ತು ಮೇಲ್ವರ್ಗದವರೊಂದಿಗೆ ಇರುತ್ತದೆ. ನಾವು ಅವರಿಗೆ ಸಹಾಯ ಮಾಡಲು ಬಯಸುತ್ತೇವೆ. ಇದು ಸಾಮಾನ್ಯ ಜನರ ನೆರವಿನಿಂದ ದೇಶ ಕಟ್ಟುವ ಉಪಕ್ರಮವಾಗಿದೆ ಎಂದರು.

ಇದು ಅಭಿಯಾನಕ್ಕಿಂತ ಹೆಚ್ಚಿನದು. ಅಂಚಿನಲ್ಲಿರುವ ಸಮುದಾಯಗಳ ಹಕ್ಕುಗಳನ್ನು ಎತ್ತಿಹಿಡಿಯುವ ಬದ್ಧತೆಯಾಗಿದೆ, ಅಸಮಾನತೆಗಳನ್ನು ನಿವಾರಿಸಲು ಮತ್ತು ಶ್ರೀಮಂತರಿಗೆ ಒಲವು ತೋರುವ ಸರ್ಕಾರದ ವಿರುದ್ಧ ತೋರುವ ವಿರೋಧವಾಗಿದೆ. ನಾವು ಹೆಚ್ಚಿನ ನಿರುದ್ಯೋಗ ಮತ್ತು ವೆಚ್ಚಗಳ ವಿರುದ್ಧ ಹೋರಾಡುತ್ತಿದ್ದೇವೆ ಎಂದು ಕಾಂಗ್ರೆಸ್ ಖಜಾಂಚಿ ಅಜಯ್ ಮಾಕನ್ ಹೇಳಿದರು. ಏಪ್ರಿಲ್–ಮೇ ತಿಂಗಳಲ್ಲಿ ಲೋಕಸಭೆ ಚುನಾವಣೆಗೆ ಹಣದ ಅಗತ್ಯವಿದೆ. ಅಸಹಕಾರ ಆಂದೋಲನಕ್ಕೆ ನಿಧಿ ಸಂಗ್ರಹಿಸಲು ಮಹಾತ್ಮ ಗಾಂಧಿಯವರ 'ತಿಲಕ್ ಸ್ವರಾಜ್ ನಿಧಿ'ಯಿಂದ ಈ ಕಾರ್ಯಕ್ರಮ ಪ್ರೇರಿತವಾಗಿದೆ

ಒಂದನೇ ಪುಟದಿಂದ

ಭತ್ತ, ರಾಗಿ ಖರೀದಿ ಪ್ರಕ್ರಿಯೆ ಆರಂಭ

ವಾಹನಗಳಲ್ಲಿ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಜೊತೆಗೆ ಗ್ರಾಪಂ ಕಾರ್ಯಾಲಯಗಳಲ್ಲಿ ಬ್ಯಾನರ್ ಅಳವಡಿಸಲಾಗುವುದು.

ಜಿಲ್ಲೆಯಲ್ಲಿವೆ 16 ಕೇಂದ್ರಗಳು: ಮೈಸೂರು ಬಂಡಿಪಾಳ್ಯದ ಎಪಿಎಂಸಿ ಆವರಣ, ನಂಜನಗೂಡಿನ ಎಪಿಎಂಸಿ ಹಾಗೂ ಬಿಳಿಗೆರೆ, ತಿ.ನರಸೀಪುರದ ಎಪಿಎಂಸಿ ಹಾಗೂ ಬನ್ನೂರು ಎಪಿಎಂಸಿ, ಹುಣಸೂರು ಎಪಿಎಂಸಿ ಹಾಗೂ ರತ್ನಪುರಿ ಎಪಿಎಂಸಿ, ಕೆ.ಆರ್.ನಗರದ ಎಪಿಎಂಸಿ, ಚುಂಚನಕಟ್ಟೆ ಪ್ರವಾಸಿ ಮಂದಿರ ಹಾಗೂ ಸಾಲಿಗ್ರಾಮ ಎಪಿಎಂಸಿ, ಹೆಚ್.ಡಿ.ಕೋಟೆಯ ಎಪಿಎಂಸಿ ಹಾಗೂ ಸರಗೂರು ಎಪಿಎಂಸಿ, ಪಿರಿಯಾಪಟ್ಟಣದ ಎಪಿಎಂಸಿ, ಬೆಟ್ಟದಪುರ ಎಪಿಎಂಸಿ, ಹಾರನಹಳ್ಳಿ ರೈತ ಸಂಪರ್ಕ ಕೇಂದ್ರ ಹಾಗೂ ರಾವಂದೂರು ರೈತ ಸಂಪರ್ಕ ಕೇಂದ್ರ ಸೇರಿ ಜಿಲ್ಲೆಯಲ್ಲಿ ಒಟ್ಟು 16 ಕೇಂದ್ರಗಳಲ್ಲಿ ರೈತರು ನೋಂದಣಿ ಮಾಡಿಸಬಹುದು.

ನಿಗದಿಯಾಗಿರುವ ಎಂಎಸ್‌ಪಿ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಏಜೆನ್ಸಿಗೆ ವಹಿಸಲಾಗಿದೆ. ಕ್ವಿಂಟಾಲ್ ಸಾಮಾನ್ಯ ಭತ್ತಕ್ಕೆ 2,183ರೂ., ಗ್ರೇಡ್ ಎ ಭತ್ತಕ್ಕೆ 2,203 ರೂ. ಹಾಗೂ ರಾಗಿಗೆ 3,846 ರೂ. ನಿಗದಿಪಡಿಸಲಾಗಿದೆ. ಓರ್ವ ನೋಂದಣಿದಾರರಿಂದ ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಠ 40 ಕ್ವಿಂಟಾಲ್ ಭತ್ತ ಹಾಗೂ ಪ್ರತಿ ಎಕರೆಗೆ 10 ಕ್ವಿಂಟಾಲ್ ರಾಗಿ ಖರೀದಿ ಪ್ರಮಾಣವನ್ನು ನಿಗದಿಗೊಳಿಸಲಾಗಿದೆ.

ನಿರೀಕ್ಷಿತ ಉತ್ಪಾದನೆ: 2023–24ನೇ ಸಾಲಿನ ಮುಂಗಾರು ಋತುವಿನಲ್ಲಿ ಭತ್ತ ಹಾಗೂ ರಾಗಿ ಬಿತ್ತನೆ ಪ್ರಮಾಣದ ಬಗ್ಗೆ ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕರು ನೀಡಿರುವ ವರದಿಯನ್ವಯ, ಉತ್ಪಾದನೆ ಪ್ರಮಾಣವನ್ನು ಅಂದಾಜಿಸಲಾಗಿದೆ. ಅದರಂತೆ ಭತ್ತ ಮತ್ತು ರಾಗಿ ಕ್ರಮವಾಗಿ ಹೆಚ್.ಡಿ.ಕೋಟೆಯಲ್ಲಿ 13,300 ಮೆಟ್ರಿಕ್ ಟನ್ ಹಾಗೂ 12,358 ಮೆ.ಟನ್, ಸರಗೂರಿನಲ್ಲಿ 17,125 ಮೆ.ಟನ್ ಹಾಗೂ 12,452 ಮೆ.ಟ್ರನ್, ಹುಣಸೂರಿನಲ್ಲಿ 38,975 ಮೆ.ಟನ್ ಹಾಗೂ 39,030 ಮೆ.ಟನ್, ಕೆಆರ್.ನಗರದಲ್ಲಿ 49,590 ಮೆ.ಟನ್ ಹಾಗೂ 4410 ಮೆ.ಟನ್, ಸಾಲಿಗ್ರಾಮದಲ್ಲಿ 61,132 ಮೆ.ಟನ್ ಹಾಗೂ 4,770 ಮೆ.ಟನ್, ಮೈಸೂರು ತಾಲೂಕಿನಲ್ಲಿ 3,385 ಮೆ.ಟನ್ ಹಾಗೂ 1,354 ಮೆ.ಟನ್, ನಂಜನಗೂಡಲ್ಲಿ 58,325 ಮೆ.ಟನ್ ಹಾಗೂ 4,010 ಮೆ.ಟನ್, ಪಿರಿಯಾಪಟ್ಟಣದಲ್ಲಿ 42 ಸಾವಿರ ಮೆ.ಟನ್ ಹಾಗೂ 44,375 ಮೆ.ಟನ್, ತಿ.ನರಸೀಪುರದಲ್ಲಿ 80,940 ಮೆ.ಟನ್ ಹಾಗೂ 1,800 ಮೆ.ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಅಂದರೆ ಜಿಲ್ಲೆಯಲ್ಲಿ ಒಟ್ಟು 3,64,772 ಮೆ.ಟನ್ ಭತ್ತ ಹಾಗೂ 1,24,559 ಮೆ.ಟನ್ ರಾಗಿ ಉತ್ಪಾದನೆ ಆಧಾರದಲ್ಲಿ ಖರೀದಿ ಕೇಂದ್ರಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ.

ದಾಸ್ತಾನಿಗೆ ಕ್ರಮ: ಜಿಲ್ಲಾಧಿಕಾರಿಗಳ ಸೂಚನೆಯಂತೆ ಖಾಲಿ ಗೋದಾಮುಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಆಹಾರ ಧಾನ್ಯಗಳನ್ನು ಶೇಖರಣೆ ಮಾಡಲು ಕಾಯ್ದಿರಿಸಲಾಗಿದೆ. ಮೈಸೂರು ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ರಾಜ್ಯ ಉಗ್ರಾಣ ನಿಗಮ(ಎಸ್‌ಡಬ್ಲ್ಯೂಸಿ) ಗೋದಾಮುಗಳಲ್ಲಿ 1,85,660 ಕ್ವಿಂಟಾಲ್, ಎಪಿಎಂಸಿ ಗೋದಾಮುಗಳಲ್ಲಿ 1,65,620 ಕ್ವಿಂಟಾಲ್, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್)ದ ಉಗ್ರಾಣಗಳಲ್ಲಿ 10 ಸಾವಿರ ಕ್ವಿಂಟಾಲ್ ಹಾಗೂ ಖಾಸಗಿ ಗೋದಾಮುಗಳಲ್ಲಿ 1.23 ಲಕ್ಷ ಟನ್ ಸೇರಿ ಒಟ್ಟು 4,84,280 ಕ್ವಿಂಟಾಲ್ ಧಾನ್ಯ ದಾಸ್ತಾನು ಮಾಡಲು ಯೋಜಿಸಲಾಗಿದೆ.

ಈ ದಾಖಲೆಗಳಿರಲಿ: ಎಂಎಸ್‌ಪಿ ಯೋಜನೆಯಡಿ ಭತ್ತ ಮತ್ತು ರಾಗಿ ಮಾರಾಟಕ್ಕೆ ನೋಂದಣಿ ಮಾಡಿಕೊಳ್ಳಲು ರೈತರು ಕೃಷಿ ಇಲಾಖೆಯಿಂದ ನೀಡಿರುವ ಫ್ರೂಟ್ಸ್ ಐಡಿ ಸಂಖ್ಯೆ, ಆಧಾರ್ ಜೋಡಣೆ ಮಾಡಿರುವ ಎನ್‌ಪಿಸಿಐ ಆಗಿರುವ ಬ್ಯಾಂಕ್ ಖಾತೆ ಪುಸ್ತಕ ಪ್ರತಿ, ಆಧಾರ್ ಕಾರ್ಡ್ ತೆಗೆದುಕೊಂಡು ಹೋಗಬೇಕು. ಧಾನ್ಯ ಮಾರಾಟದ ಸಂದರ್ಭದಲ್ಲಿ ಗುಣಮಟ್ಟ ಪರೀಕ್ಷಕರ ಸೂಚನೆಯಂತೆ ಖರೀದಿ ಏಜೆನ್ಸಿ ವ್ಯವಸ್ಥಾಪಕರಿಂದ 'ಖರೀದಿ ಟೋಕನ್' ಪಡೆಯಬೇಕು. ಅದರಲ್ಲಿ ರೈತರ ಹೆಸರು, ಗ್ರಾಮ, ಬೆಳೆ ಪ್ರಮಾಣ, ಖರೀದಿ ದಿನಾಂಕವನ್ನು ಪರಿಶೀಲಿಸಿಕೊಳ್ಳಬೇಕು.

ಸಾಫ್ಟ್‌ವೇರ್ ಅಪ್ಡೇಟ್; ಇಂದು ಅಡ್ಡಿ ಸಾಧ್ಯತೆ

ಸಾಫ್ಟ್‌ವೇರ್ ಸಮಸ್ಯೆಯಿಂದಾಗಿ ನಿಗದಿಗಿಂತ 17 ದಿನ ತಡವಾಗಿ ಸೋಮವಾರ ನೋಂದಣಿ ಆರಂಭವಾಗಿದೆ. ಆದರೆ ಮಧ್ಯಾಹ್ನದ ವೇಳೆಗಾಗಲೇ ಸಾಫ್ಟ್‌ವೇರ್ ಅಪ್ಡೇಟ್(ನವೀಕರಣ) ಮಾಡಲಾಗುತ್ತಿದ್ದು, ಮಂಗಳವಾರ ಮಧ್ಯಾಹ್ನದವರೆಗೆ ನೋಂದಣಿಗೆ ಅಡ್ಡಿಯಾಗಬಹುದು ಎಂಬ ಸಂದೇಶ ಬಂದಿರುವುದಾಗಿ ಖರೀದಿ ಕೇಂದ್ರಗಳಿಂದ ಮಾಹಿತಿ ಲಭ್ಯವಾಗಿದೆ. ಈಗಾಗಲೇ ಎಂಎಸ್‌ಪಿ ಯೋಜನೆಯಡಿ ಖರೀದಿ ಪ್ರಕ್ರಿಯೆ ತಡವಾಗಿದ್ದರಿಂದ ರೈತರು ಅನಿವಾರ್ಯವಾಗಿ ಖಾಸಗಿ ವ್ಯಾಪಾರಿಗಳಿಗೆ ಕಡಿಮೆ ಬೆಲೆಗೆ ಧಾನ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ಪರಿಸ್ಥಿತಿಯಲ್ಲಿ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕೆಂದು ರೈತರು ಆಗ್ರಹಿಸಿದ್ದಾರೆ.

ಮಾಸ್ಕ್ ಕಡ್ಡಾಯ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ನಾಳೆ ಉನ್ನತ ಮಟ್ಟದ ಸಭೆ ನಡೆಯಲಿದ್ದು, ಸಲಹಾ ಸಮಿತಿಯ ಶಿಫಾರಸುಗಳನ್ನು ಆದೇಶದ ಮೂಲಕ ಜಾರಿಗೊಳಿಸಲಿದೆ. ರೂಪಾಂತರಿ ತಳಿ ಬಗ್ಗೆ ಯಾರೂ ಆತಂಕಪಡುವ ಅಗತ್ಯವಿಲ್ಲ, ಆದರೆ ಎಚ್ಚರಿಕೆ ಅವಶ್ಯಕ ಎಂದಿರುವ ಸಲಹಾ ಸಮಿತಿ, ರಾಜ್ಯಾದ್ಯಂತ ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ನಡೆಸುವಂತೆ ಸಲಹೆ ಮಾಡಿದೆ.

ಕೇರಳ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಚಾಮರಾಜನಗರ, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಭಾಗದಲ್ಲಿ ಒಂದಷ್ಟು ಹೆಚ್ಚಿನ ಮುಂಜಾಗ್ರತೆ ಅವಶ್ಯವಿದೆ. ಕೋವಿಡ್ ಲಸಿಕೆ ನೀಡುವುದರ ಜೊತೆಗೆ ಪರೀಕ್ಷೆಗಳನ್ನು ಹೆಚ್ಚಿಸಿ, ಇದರ ಫಲಿತಾಂಶದ ಆಧಾರದ ಮೇಲೆ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕು. ಉಸಿರಾಟದ ಸಮಸ್ಯೆ ಇರುವವರಿಗೆ ಮೊದಲ ಹಂತದಲ್ಲಿ ಪರೀಕ್ಷೆ ಮಾಡಿದರೆ, ಇದರ ಫಲಿತಾಂಶದ ಆಧಾರದ ಮೇಲೆ ಈ ಸಾಂಕ್ರಾಮಿಕದ ಸ್ವರೂಪ ತಿಳಿಯಲು ಸಾಧ್ಯವಾಗಲಿದೆ ಎಂದು ವೈದ್ಯರ ತಂಡ ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ತಿಳಿಸಿದೆ.

60 ವರ್ಷ ಮೇಲ್ಪಟ್ಟವರು ಮತ್ತು ತೀವ್ರ ಆರೋಗ್ಯ ಸಮಸ್ಯೆ ಇರುವವರು ಮಾಸ್ಕ್ ಧರಿಸುವ ಜೊತೆಗೆ ಜನಸಂದಣಿಯಿಂದ ದೂರ ಉಳಿಯುವುದು ಉತ್ತಮ.

ಮುನ್ನೆಚ್ಚರಿಕೆಯಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ನಿಗಾ ಘಟಕಗಳನ್ನು ಮೀಸಲಿಡಬೇಕು, ಜಿಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ದೊರೆಯುವಂತಾಗಬೇಕು.

ಸೋಂಕಿಗೆ ಅಗತ್ಯವಿರುವ ಔಷಧಗಳು ಮತ್ತು ಆಕ್ಸಿಜನ್ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದೆ. ಹೊಸ ರೂಪಾಂತರಿ ತಳಿ ಬಗ್ಗೆ ಇದುವರೆಗೂ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಕೇಂದ್ರ ಸರ್ಕಾರ ಯಾವುದೇ ಮಾರ್ಗಸೂಚಿಗಳನ್ನು ನೀಡಿಲ್ಲ. ಆದರೆ ರೂಪಾಂತರಿ ತಳಿ ರಾಷ್ಟ್ರದಲ್ಲಿ ಕಂಡುಬಂದಿರುವ ಹಿನ್ನೆಲೆಯಲ್ಲಿ ನಾವು ಮುನ್ನೆಚ್ಚರಿಕಾ ಕ್ರಮಕೈಗೊಳ್ಳುವುದು ಅವಶ್ಯಕ ಎಂದಿದ್ದಾರೆ. ಶೀತ, ಜ್ವರ, ಕೆಮ್ಮು ಇರುವವರು ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಬೇಕು. ಪಾಸಿಟಿವ್ ಪ್ರಕರಣಗಳು ಹೆಚ್ಚಾದರೆ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಬಂಧ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಲಿದೆ, ಸದ್ಯಕ್ಕೆ ಅಂತಹ ಪರಿಸ್ಥಿತಿ ಇಲ್ಲದ ಕಾರಣ ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದರು.

ಆಯ್ಕೆ ಸಂಬಂಧ ಕಾಂಗ್ರೆಸ್ ಕಸರತ್ತು

ಕೆ.ಸಿ ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯ ನಾಯಕರೊಂದಿಗೆ ಎರಡು ದಿನಗಳ ಕಾಲ ಚರ್ಚೆ ನಡೆಸಿ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲಿದ್ದಾರೆ. ಇದೇ ಸಂದರ್ಭದಲ್ಲಿ 34 ನಿಗಮ–ಮಂಡಳಿಗಳಿಗೆ ಪಕ್ಷದ ಹಿರಿಯ ಶಾಸಕರಿಗೆ ಅವಕಾಶ ಮಾಡಿಕೊಡಲು ವರಿಷ್ಠರ ಅನುಮೋದನೆಯನ್ನು ಮುಖ್ಯಮಂತ್ರಿ ಪಡೆದುಕೊಳ್ಳಲಿದ್ದಾರೆ. ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಿಗಮ–ಮಂಡಳಿ ನೇಮಕಾತಿ ಪಟ್ಟಿ ಅಂತಿಮ ಮಾಡಿಕೊಂಡು ಬರುತ್ತೇವೆ ಎಂದಿದ್ದಾರೆ. ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಸಭೆ ಮಾಡಿ ವರಿಷ್ಠರಿಗೆ ಪಟ್ಟಿ ಕಳುಹಿಸಿದ್ದೇವೆ. ಪಂಚ ರಾಜ್ಯಗಳ ಚುನಾವಣೆ ಹಿನ್ನೆಲೆಯಲ್ಲಿ ನಮ್ಮ ಪಟ್ಟಿಗೆ ಹಸಿರು ನಿಶಾನೆ ದಕ್ಕಿರಲಿಲ್ಲ. ಭದ್ರಾ ಮೇಲ್ದಂಡೆ ಅನುದಾನ ಸೇರಿದಂತೆ ಇತರ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆಯೂ ಪ್ರಧಾನಿ ಬಳಿ ಚರ್ಚೆ ನಡೆಸಲಿದ್ದಾರೆ. ರಾಜ್ಯದ ಬಹುಭಾಗ ಬರಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ಕೂಲಿ ಕಾರ್ಮಿಕರಿಗೆ ನರೇಗಾ ಯೋಜನೆಯಡಿ ಮಾನವ ದಿನಗಳ ಹೆಚ್ಚಳ ಮಾಡುವಂತೆಯೂ ಕೋರಲಿದ್ದಾರೆ ಎಂದರು.

ಕೋವಿಡ್–19 ರೂಪಾಂತರಿ ಜೆಎನ್.1 ಕುರಿತು ರಾಜ್ಯಗಳಿಗೆ ಕೇಂದ್ರದ ಮಾರ್ಗಸೂಚಿ



ನವದೆಹಲಿ: ಈ ತಿಂಗಳ ಆರಂಭದಲ್ಲಿ ಕೇರಳದಲ್ಲಿ ಪತ್ತೆಯಾದ ಹೊಸ ಕೋವಿಡ್–19 ಸಬ್‌ವೇರಿಯಂಟ್, ಜೆಎನ್.1 ಪ್ರಕರಣವು ಕಳವಳವನ್ನು ಹುಟ್ಟುಹಾಕಿದೆ. ಕೋವಿಡ್–19 ಪ್ರಕರಣಗಳ ಹೆಚ್ಚಳ ಮತ್ತು ಭಾರತದಲ್ಲಿ ಜೆಎನ್.1 ರೂಪಾಂತರದ ಮೊದಲ ಪ್ರಕರಣ ಪತ್ತೆಯಾದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಕೋವಿಡ್ ಪರಿಸ್ಥಿತಿಯ ಬಗ್ಗೆ ನಿರಂತರ ನಿಗಾ ಇರಿಸಲು ರಾಜ್ಯಗಳಿಗೆ ಮನವಿ ಮಾಡಲಾಗಿದೆ.

ರಾಜ್ಯಗಳು ಪ್ರತಿ ಜಿಲ್ಲೆಯಲ್ಲಿ SARI ಮತ್ತು ILI ಪ್ರಕರಣಗಳನ್ನು ನಿಯಮಿತವಾಗಿ ವರದಿ ಮಾಡಬೇಕು. ಮೇಲ್ವಿಚಾರಣೆ ನಡೆಸಬೇಕಾಗುತ್ತದೆ. ಗರಿಷ್ಠ ಸಂಖ್ಯೆಯಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಗಳು ಸೇರಿದಂತೆ ಸಾಕಷ್ಟು ಪರೀಕ್ಷೆಗಳನ್ನು ಮಾಡುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳಿಗೆ ಸಲಹೆ ನೀಡಿದೆ. ಅದೇ ಸಮಯದಲ್ಲಿ, ಜೀನೋಮ್ ಅನುಕ್ರಮಕ್ಕಾಗಿ ಧನಾತ್ಮಕ ಮಾದರಿಗಳನ್ನು INSACOG ಪ್ರಯೋಗಾಲಯಗಳಿಗೆ ಕಳುಹಿಸಲು ರಾಜ್ಯಗಳನ್ನು ಕೇಳಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ಸುಧಾಂಶ್ ಪಂತ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ನಿರಂತರ ಮತ್ತು ಸಹಯೋಗದ ಮೂಲಕ ನಾವು ಕೋವಿಡ್–19 ಅನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.

ಇತ್ತೀಚೆಗೆ, ಕೇರಳದಂತಹ ಕೆಲವು ರಾಜ್ಯಗಳು ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚಳವನ್ನು ವರದಿ ಮಾಡಿವೆ. ಭಾರತದಲ್ಲಿ ಕೋವಿಡ್ ಸಬ್‌ವೇರಿಯಂಟ್ ಜೆಎನ್.1ರ ಮೊದಲ ಪ್ರಕರಣವು ಡಿ.8 ರಂದು ಕೇರಳದಲ್ಲಿ ಕಂಡುಬಂದಿದೆ. ಕೇಂದ್ರ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ಇತ್ತೀಚಿನ ಮಾಹಿತಿಯ ಪ್ರಕಾರ, ಇಂದು (ಸೋಮವಾರ) ದೇಶದಲ್ಲಿ 335 ಹೊಸ ಕೋವಿಡ್–19 ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1,701ಕ್ಕೆ ಏರಿದೆ.

ಜೆಎನ್.1 ಸಬ್‌ವೇರಿಯಂಟ್ ಕೇರಳದಲ್ಲಿ ಪತ್ತೆಯಾದ ನಂತರ ನೆರೆರಾಜ್ಯಗಳಾದ ತಮಿಳುನಾಡು ಮತ್ತು ಕರ್ನಾಟಕ ಪರಿಸ್ಥಿತಿಯನ್ನು ನಿಭಾಯಿಸಲು ವಿವಿಧ ಕ್ರಮಗಳನ್ನು ಘೋಷಿಸಿವೆ. 60 ವರ್ಷ ಮೇಲ್ಪಟ್ಟವರು ಮತ್ತು ಕೊಮೊರ್ಬಿಡಿಟಿ ಇರುವವರು ಮಾಸ್ಕ್ ಧರಿಸುವುದನ್ನು ಕರ್ನಾಟಕ ಕಡ್ಡಾಯಗೊಳಿಸಿವೆ.

ಜೆಎನ್.1 ಎಷ್ಟು ಅಪಾಯಕಾರಿ: BA.2.86 ಓಮಿಕ್ರಾನ್ ಉಪ–ರೂಪಾಂತರದ ಉಪ–ರೂಪಾಂತರ ಜೆಎನ್.1 ಆಗಿದೆ. Omicron COVID-19 ರೂಪಾಂತರವನ್ನು ಮೊದಲು ನವೆಂಬರ್ 2021ರಲ್ಲಿ ಪತ್ತೆಹಚ್ಚಲಾಯಿತು. ಅಂದಿನಿಂದ ಇದು ಭಾರತದಲ್ಲಿ ಪ್ರಬಲವಾದ ರೂಪಾಂತರವಾಗಿದೆ.

JN.1 ಅನ್ನು ಕೇರಳದಲ್ಲಿ ಡಿಸೆಂಬರ್ 8 ರಂದು ಮೊದಲ ಬಾರಿಗೆ ತಿರುವನಂತಪುರಂ ಜಿಲ್ಲೆಯ ಕರಕುಲಂನ 79 ವರ್ಷದ ಮಹಿಳೆಯೊಬ್ಬರು ಸೌಮ್ಯ ಜ್ವರ ತರಹದ ಲಕ್ಷಣಗಳನ್ನು ಹೊಂದಿದ್ದರು. ಕೋವಿಡ್–19ರ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಆ ಮಹಿಳೆಯಲ್ಲಿ ಪಾಸಿಟಿವ್ ಕಂಡುಬಂದಿತ್ತು. ಭಾರತೀಯ SARS-CoV–2 ಜೀನೋಮಿಕ್ಸ್ ಕನ್ಸೋರ್ಟಿಯಂ (INSACOG)ನ ನಡೆಯುತ್ತಿರುವ ವಾಡಿಕೆಯ ಕಣ್ಗಾವಲು ಚಟುವಟಿಕೆಗಾಗಿ ಮಾದರಿಯನ್ನು ಪರೀಕ್ಷಿಸಿದಾಗ ಸಬ್‌ವೇರಿಯಂಟ್ ಅನ್ನು ಗುರುತಿಸಲಾಗಿತ್ತು. ರೋಗಿಯು ಸೌಮ್ಯ ರೋಗಲಕ್ಷಣಗಳನ್ನು ಮಾತ್ರ ಹೊಂದಿದ್ದು, ಚೇತರಿಸಿಕೊಂಡಿದ್ದಾರೆ ಎಂದು ರಾಜ್ಯ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಎಲ್ಲಾ Omicron ಉಪ ರೂಪಾಂತರಗಳು, ವಿಶೇಷವಾಗಿ BA.2, ಇದುವರೆಗೆ ಹೆಚ್ಚು ಸಾಂಕ್ರಾಮಿಕವಾಗಿದೆ ತಜ್ಞರ ಪ್ರಕಾರ, ಜೆಎನ್.1 ಉಪ ರೂಪಾಂತರವು ಸ್ಪೈಕ್ ಪ್ರೋಟೀನ್‌ನಲ್ಲಿ ರೂಪಾಂತರವನ್ನು ಹೊಂದಿದೆ. ಇದು ಹಿಂದಿನ Omicron ರೂಪಾಂತರಗಳಿಗಿಂತ ಹೆಚ್ಚು ಸಾಂಕ್ರಾಮಿಕವಾಗಬಹುದು. ಇಲ್ಲಿಯವರೆಗೆ ಕಂಡುಬಂದ ಪ್ರಕರಣಗಳು ವೈದ್ಯಕೀಯವಾಗಿ ಸೌಮ್ಯವಾಗಿರುತ್ತವೆ. ಈ ಸಬ್‌ವೇರಿಯಂಟ್ ಸಂಬಂಧಿಸಿದ ಯಾವುದೇ ಹೊಸ ರೋಗ ಲಕ್ಷಣಗಳು ಕಂಡುಬಂದಿಲ್ಲ. ಇದರ ಕುರಿತು ಮಾತನಾಡಿರುವ ಪ್ರಮುಖ ವೈರಾಲಜಿಸ್ಟ್ ಡಾ. ಶಾಹಿದ್ ಜಮೀಲ್ ಅವರು, ಹೆಚ್ಚು ಸಾಂಕ್ರಾಮಿಕವಾಗಿರುವ ವೈರಸ್‌ಗಳು ಕಡಿಮೆ ಅಪಾಯಕಾರಿ ಎಂದು ಹೇಳಿದ್ದಾರೆ.

ಡಿಸೆಂಬರ್ ಆರಂಭದಿಂದ ಸಿಂಗಾಪುರದಲ್ಲಿ ಕೋವಿಡ್ ಪ್ರಕರಣಗಳಲ್ಲಿ ಏರಿಕೆ ಕಂಡುಬಂದಿದೆ. ಇತ್ತೀಚಿನ ಪತ್ರಿಕಾಗೋಷ್ಠಿಯಲ್ಲಿ, ಸಿಂಗಾಪುರದ ಆರೋಗ್ಯ ಸಚಿವಾಲಯವು ಡಿಸೆಂಬರ್ 3 ಮತ್ತು 9ರ ನಡುವೆ ದೇಶದಲ್ಲಿ COVID ಪ್ರಕರಣಗಳು 32,035 ರಿಂದ 56,043ಕ್ಕೆ ಏರಿದೆ ಎಂದು ಹೇಳಿದೆ. ಈ ಉಲ್ಬಣದ ಹಿಂದಿನ ಪ್ರಮುಖ ರೂಪಾಂತರವೆಂದರೆ ಜೆಎನ್.1 ಓಮಿಕ್ರಾನ್ ಸಬ್‌ವೇರಿಯಂಟ್ ಎಂದು ಸಿಂಗಾಪುರ್ ಸರ್ಕಾರ ಹೇಳಿದೆ. ಪ್ರಸ್ತುತ ಉಲ್ಬಣವು ಗಂಭೀರ ಕಾಯಿಲೆಯ ಹೆಚ್ಚಳಕ್ಕೆ ಕಾರಣವಾಗಬಹುದು ಎಂಬುದಕ್ಕೆ ಪುರಾವೆಗಳ ಕೊರತೆಯ ಹೊರತಾಗಿಯೂ, ದೇಶದ ಆರೋಗ್ಯ ಅಧಿಕಾರಿಗಳು ಹೊಸ ಪ್ರಯಾಣ ಸಲಹೆಯನ್ನು ನೀಡಿದ್ದಾರೆ. ವೈರಸ್ ಹರಡುವುದನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುವಂತೆ ವೈದ್ಯಕೀಯ ಸೌಲಭ್ಯಗಳನ್ನು ಕೇಳಿದ್ದಾರೆ.

ಆರೋಗ್ಯ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ಕೋವಿಡ್–19 ಪ್ರಕರಣಗಳು 4 ಕೋಟಿ 50 ಲಕ್ಷ 4 ಸಾವಿರದ 816ಕ್ಕೆ ಏರಿಕೆಯಾಗಿದ್ದು, ದೇಶದಲ್ಲಿ 5 ಲಕ್ಷ 33 ಸಾವಿರ 316 ಜನರು ಕೊರೊನಾದಿಂದ ಸಾವನ್ನಪ್ಪಿದ್ದಾರೆ.

ಯುವರಾಜ ಸಿಲ್ಕ್ ಹೌಸ್, ಯುವರಾಜ್ ಲೇ ರಾಯಲ್ ಉದ್ಘಾಟನೆ





ಮೈಸೂರಿನ ನಜರ್‌ಬಾದ್ ಶಾಲಿವಾಹನ ರಸ್ತೆಯಲ್ಲಿರುವ ಯುವರಾಜ ಲೇ ರಾಯಲ್ ಹೋಟೆಲ್ ಉದ್ಘಾಟನೆ ಭಾನುವಾರ ನೆರವೇರಿತು. 3 ಸ್ಟಾರ್‌ಗಳುಳ್ಳ 33 ಕೊಠಡಿಗಳ ವೆಜ್ ರೆಸ್ಟೋರೆಂಟ್, ಸ್ಪಾ, ರೂಫ್ ಟಾಪ್ ರೆಸ್ಟೋರೆಂಟ್ ಇತ್ಯಾದಿ ಸೌಕರ್ಯಗಳನ್ನು ಇದು ಒಳಗೊಂಡಿದೆ. ಇದರ ಮಾಲೀಕರಾದ ಎಲ್.ಯುವರಾಜ್, ಅರುಣಾ ಯುವರಾಜ್ ಹಾಗೂ ಕುಟುಂಬದ ಇತರ ಸದಸ್ಯರು ಈ ವೇಳೆ ಉಪಸ್ಥಿತರಿದ್ದರು. ಬಲಚಿತ್ರದಲ್ಲಿ ಯುವರಾಜ ಸಿಲ್ಕ್ ಹೌಸ್ ಮತ್ತು ಯುವರಾಜ್ ಲೇ ರಾಯಲ್ ಉದ್ಘಾಟನಾ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳಾಗಿದ್ದ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಕಾರ್ಪೋರೇಟರ್‌ಗಳಾದ ಮಾದೇಶ್, ಶ್ರೀಮತಿ ಭಾಗ್ಯ ಮಾದೇಶ್, ಸಾತ್ವಿಕ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಟಿ.ಆರ್.ಕೃಷ್ಣೇಗೌಡ, ರಜಪೂತ್ ಸಮುದಾಯದ ಮೈಸೂರು ವಲಯ ಅಧ್ಯಕ್ಷ ಕೃಪಾಲ್ ಸಿಂಗ್, ತಬ್ರೇಜ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಕೆ.ಆರ್.ಸತ್ಯನಾರಾಯಣ, ಚಿಕ್ಕಕೆಂಪೇಗೌಡ, ಹಸನ್ ಅಲಿಖಾನ್ (ನೂರಿ ಭಯ್ಯಾ), ಜುಬೇರ್ ಜಮಾರ್ಕ್ ಎಂ.ಡಿ ಹಾಗೂ ಇತರರು ಪಾಲ್ಗೊಂಡಿದ್ದರು.

ಡಿ. 22, 23ರಂದು ಕೃತಕ ಬುದ್ಧಿಮತ್ತೆ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ



ಮೈಸೂರು,ಡಿ.18(ಎಂಟಿವೈ)– ಮೈಸೂರಿನ ಎನ್‌ಐಇ ಕಾಲೇಜಿನಲ್ಲಿ ಡಿ. 22 ಮತ್ತು 23 ರಂದು ಕೃತಕ ಬುದ್ಧಿಮತ್ತೆ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ. ರೋಹಿಣಿ ನಾಗಪದ್ಮ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆ ಹಂಚಿಕೊಳ್ಳಲು ಮತ್ತು ಚರ್ಚಿಸಲೆಂದು ಸಂಶೋಧಕರು, ಉದ್ಯಮಿಗಳು, ವೈದ್ಯರು, ಉದ್ಯಮ ತಜ್ಞರು ಮತ್ತು ಉತ್ಸಾಹಿಗಳನ್ನು ಒಟ್ಟುಗೂಡಿಸುವ ಉದ್ದೇಶದಿಂದ ಈ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದರು.

ಈ ವಿಚಾರ ಸಂಕಿರಣದಲ್ಲಿ ಕಂಪ್ಯೂಟೇಶನಲ್ ಇಂಟೆಲಿಜೆನ್ಸ್ ಪ್ರಗತಿಗಳು, ಕೃತಕ ಬುದ್ಧಿಮತ್ತತೆ ವ್ಯವಸ್ಥೆಗಳು ಮತ್ತು ಆಪ್ಟಿಮೈಸೇಶನ್ ತಂತ್ರಗಳು, ಎಐ ಮತ್ತು ಎಂಎಲ್ ಅಪ್ಲಿಕೇಷನ್ ಕುರಿತು ಚರ್ಚಿಸಲಾಗುತ್ತದೆ. ಈಗಾಗಲೇ ಈ ಮೂರು ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು 142 ಸಂಶೋಧನಾ ಲೇಖನಗಳನ್ನು ಸ್ವೀಕರಿಸಲಾಗಿದೆ ಎಂದು ತಿಳಿಸಿದರು.

ಡಿ. 22 ರಂದು ಬೆಳಗ್ಗೆ 9.40ಕ್ಕೆ ಈ ವಿಚಾರ ಸಂಕಿರಣ ಆರಂಭವಾಗಲಿದೆ. ಬೆಂಗಳೂರಿನ ಐಐಎಸ್ಸಿಯಿಂದ ಡಾ. ಪ್ರತೋಷ್ ಕುಮಾರ್ ಎಐ ಕುರಿತು ಮಾತನಾಡಲಿದ್ದಾರೆ. ಇನ್ಫೋಸಿಸ್ ಸಂಸ್ಥೆಯ ಕಲಿಕೆ, ಡೇಟಾ ಸೈನ್ಸ್ ಮತ್ತು ಯಂತ್ರ ಕಲಿಕೆ ವಿಭಾಗದ ಪ್ರಧಾನ ಸಲಹೆಗಾರರಾದ ಡಾ.ಹೆಚ್.ಎನ್.ಮೀನಾಕ್ಷಿ ಪ್ರಧಾನ ಭಾಷಣ ಮಾಡಲಿದ್ದಾರೆ. ವಿವಿಧ ಸಂಪನ್ಮೂಲ ವ್ಯಕ್ತಿಗಳು ಕಂಪ್ಯೂಟರ್ ದೃಷ್ಟಿ, ರೊಬೋಟಿಕ್ಸ್, ವರ್ಧಿತ ರಿಯಾಲಿಟಿ, ವರ್ಚುಯಲ್ ರಿಯಾಲಿಟಿ, ನ್ಯುರೋಮಾರ್ಫಿಕ್ಸ್, ಎಂಬೆಡೆಡ್ ಕಂಪ್ಯೂಟಿಂಗ್ ವಿಷಯ ಕುರಿತು ವಿಚಾರ ಮಂಡಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎನ್‌ಐಇ ಕಾಲೇಜಿನ ಡಾ.ಆರ್. ಅನಿತಾ, ಡಾ.ವಿ.ಕೆ. ಅನ್ನಪೂರ್ಣ, ಡಾ.ಬಿ.ಎಸ್. ಜಯಶ್ರೀ ಇದ್ದರು.

ಡಿ. 23, 24ಕ್ಕೆ ದಾವಣಗೆರೆಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾ ಅಧಿವೇಶನ



ಮೈಸೂರು,ಡಿ.18(ಎಂಟಿವೈ)– ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ವತಿಯಿಂದ ಡಿ.23 ಮತ್ತು 24 ರಂದು ದಾವಣಗೆರೆಯ ಎಂಬಿಎಂ ಕಾಲೇಜು ಮೈದಾನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಅಧಿವೇಶನ ನಡೆಯಲಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಶಿವಮೂರ್ತಿ ಕಾನ್ಯ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮಹಾಧಿವೇಶನದಲ್ಲಿ ನಾಡಿನ ಹಿರಿಯ ಮಠಾಧೀಶರು, ರಾಜಕೀಯ ಮುಖಂಡರು, ಸಮಾಜದ ಗಣ್ಯರು, ಸಾಹಿತಿಗಳು, ಕಲಾವಿದರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಶರಣ ಶರಣೆಯರು ಪಾಲ್ಗೊಳ್ಳುತ್ತಿದ್ದಾರೆ. ಮೈಸೂರು ಜಿಲ್ಲೆಯಿಂದಲೂ ಈ ಮಹಾಧಿವೇಶನದಲ್ಲಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಪದಾಧಿಕಾರಿಗಳಾದ ಹೆಚ್.ಕೆ.ಚನ್ನಪ್ಪ, ಎಸ್.ಬಿ.ಸುರೇಶ್, ಕೆ.ಎಸ್. ಪ್ರಕಾಶ್ ಇದ್ದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಆನ್‌ಲೈನ್ ಮೂಲಕ ವಿಷಯ ಸಂಪನ್ಮೂಲ ಸಂಗ್ರಹಿಸಿ

ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಕುಲಸಚಿವೆ ಶೈಲಜಾ ಸಲಹೆ



ಮೈಸೂರು, ಡಿ.18(ಎಸ್‌ಪಿಎನ್)– ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಸರ್ಕಾರಿ ನೌಕರಿ ಪಡೆಯಲು ಶ್ರಮಿಸುತ್ತಿರುವ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಲಭ್ಯವಿರುವ ವಿಷಯ ಸಂಪನ್ಮೂಲಗಳನ್ನು ಬಳಸಿಕೊಳ್ಳುವಂತೆ ಮೈಸೂರು ವಿವಿ ಕುಲಸಚಿವೆ ಶೈಲಜಾ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನಲ್ಲಿ 2023ನೇ ಸಾಲಿನ ಸಾಂಸ್ಕೃತಿಕ, ಎನ್‌ಸಿಸಿ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳು ಬೆಳಗ್ಗೆ ವೇಳೆ ಕೆಲಸ ಮಾಡಿ, ಸಂಜೆ ವೇಳೆ ಪದವಿ ವ್ಯಾಸಂಗ ಮುಂದುವರೆಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ನಿಮ್ಮಲ್ಲಿ ಕೆಲವರು ಉನ್ನತ ಹುದ್ದೆಗೆ ಹೋಗಲು ಪದವಿ ವ್ಯಾಸಂಗ ಮಾಡಲು ಮುಂದಾಗಿರುವುದು ಸಂತೋಷದ ಸಂಗತಿ. ಉನ್ನತ ಹುದ್ದೆಗೆ ಕಠಿಣ ಅಭ್ಯಾಸ ಮುಖ್ಯ. ಅದಕ್ಕಾಗಿ ಆನ್‌ಲೈನ್‌ನಲ್ಲಿ ಲಭ್ಯವಿರುವ ಕೆಲವು ಆ್ಯಪ್‌ಗಳ ಸಹಾಯ ಪಡೆಯುವಂತೆ ತಿಳಿ ಹೇಳಿದರು.

ಹಿರಿಯ ಜಾನಪದ ಕಲಾವಿದ ಡಾ.ಮಳವಳ್ಳಿ ಮಹದೇವಸ್ವಾಮಿ ಮಾತನಾಡಿ, ವಿದ್ಯೆ ಕಲಿಸಿದ ಗುರುಗಳನ್ನು ಎಂದಿಗೂ ಮರೆಯಬಾರದು. ವಿದ್ಯೆ ಕಲಿಯುವ ಸಂದರ್ಭದಲ್ಲಿ ಶಿಕ್ಷಿಸಿದರೆ, ಈ ಸನ್ನಿವೇಶವನ್ನು ಋಣಾತ್ಮಕವಾಗಿ ಪರಿಗಣಿಸದೇ ಧನಾತ್ಮಕವಾಗಿ ಪರಿಗಣಿಸಿ, ಮುಂದಿನ ಜೀವನ ರೂಪಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಈ ವೇಳೆ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ.ನಿಂಗರಾಜು, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಆರ್.ನಿಂಗರಾಜು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆ, ಪಿಯು ಕಾಲೇಜುಗಳಿಗೆ ಉಚಿತ ವಿದ್ಯುತ್, ನೀರಿನ ಸೌಕರ್ಯ



ಮೈಸೂರು, ಡಿ.18(ಎಸ್‌ಪಿಎನ್)– ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ ಮತ್ತು ನೀರಿನ ಸೌಲಭ್ಯ ಒದಗಿಸಲು ಜಿಲ್ಲಾ ಹಂತದ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶಿಸಿದೆ.

ಈ ಬಗ್ಗೆ ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ(ಯೋಜನೆ) ಬಿ.ಎಚ್. ಗಿರಿಜಾ ಆದೇಶ ಹೊರಡಿಸಿದ್ದು, ಇಲಾಖೆಯ ಅಧೀನಕ್ಕೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ ಶಾಲಾ–ಕಾಲೇಜುಗಳಿಗೆ ಉಚಿತವಾಗಿ ವಿದ್ಯುತ್ ಮತ್ತು ನೀರಿನ ಸೌಲಭ್ಯವನ್ನು ಒದಗಿಸಲು ಆರ್ಥಿಕ ಇಲಾಖೆಯು ಸಹಮತಿ ನೀಡಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ಗೃಹಜ್ಯೋತಿ ಯೋಜನೆಯಡಿ ಎಲ್ಲಾ ಫಲಾನುಭವಿಗಳಿಗೆ ವಿದ್ಯುಚ್ಛಕ್ತಿಯನ್ನು ಉಚಿತವಾಗಿ ಒದಗಿಸುತ್ತಿರುವ ರೀತಿಯಲ್ಲಿಯೇ, ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೂ ಉಚಿತ ವಿದ್ಯುತ್ ಮತ್ತು ನೀರಿನ ಸೌಲಭ್ಯ ಒದಗಿಸುವುದರಿಂದ ಸರ್ಕಾರಿ ಶಾಲೆಗಳಲ್ಲಿ ಉಳಿಕೆಯಾಗುವ ನಿರ್ವಹಣಾ ಅನುದಾನದಿಂದ ಶಾಲೆಗಳ ಗುಣಮಟ್ಟ ಅಭಿವೃದ್ಧಿಪಡಿಸಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

2023–24ನೇ ಆರ್ಥಿಕ ಸಾಲಿನ ಅಂತ್ಯದವರೆಗೆ, ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಬಳಕೆ ಮಾಡಲಾದ, ಮಾಡಲಾಗುವ ವಿದ್ಯುತ್ ಮತ್ತು ನೀರಿನ ಶುಲ್ಕ ಪಾವತಿಗಾಗಿ ಅಗತ್ಯವಿರುವ ಜಿಲ್ಲಾವಾರು ಅನುದಾನದ ವಿವರದ ಪ್ರಸ್ತಾವನೆಯನ್ನು ಶಾಲಾ ಶಿಕ್ಷಣ ಇಲಾಖೆ, ಆಯುಕ್ತರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಕೂಡಲೇ ಸರ್ಕಾರಕ್ಕೆ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

2024–25ನೇ ಸಾಲಿನಿಂದ ನಿರಂತರವಾಗಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಉಚಿತವಾಗಿ ವಿದ್ಯುತ್ ಮತ್ತು ನೀರು ಸರಬರಾಜು ಮಾಡಲು ವಾರ್ಷಿಕವಾಗಿ ಅಗತ್ಯವಿರುವ ಅನುದಾನದ ಪ್ರಸ್ತಾವನೆಯನ್ನು ಇಂಧನ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳು ನೇರವಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಿ, ಅಗತ್ಯವಿರುವ ಅನುದಾನವನ್ನು ಪಡೆಯಲು ಸೂಚಿಸಿದ್ದಾರೆ.



ಸುಬ್ರಹ್ಮಣ್ಯ ಷಷ್ಠಿಯ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಬಡಾವಣೆಯ ಮುನೇಶ್ವರ ಆಲದಮರದ ಬಳಿ ಹುತ್ತಕ್ಕೆ ಸ್ಥಳೀಯ ಮಹಿಳೆಯರು ಒಟ್ಟಿಗೆ ಸೇರಿ ತನಿಯೆರೆದು ಭಕ್ತಿ ಭಾವದಿಂದ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾಜಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕರಾದ ರೇಣುಕಾ ರಾಜು, ಗೀತಾ, ರಾಧ, ಮಮತಾ, ಸುನೀತಾ, ರಾಜಮ್ಮ, ಮಂಗಳ, ಉಮಾ, ರಮ್ಯಾ, ಶಿವಮ್ಮ, ರಾಜೇಶ್ವರಿ, ಅನಿತಾ ಇನ್ನಿತರ ಸ್ಥಳೀಯ ಮಹಿಳೆಯರು ಇದ್ದರು.

ನಂದಗೋಕುಲದಲ್ಲಿ ಸಮುದಾಯ ಆಧಾರಿತ ತಪಾಸಣಾ ಶಿಬಿರ




ಮೈಸೂರು, ಡಿ. 18–ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಪಿಕೆಟಿಬಿ ಮತ್ತು ಸಿ.ಡಿ ಆಸ್ಪತ್ರೆ, ಅಮೃತ ಕೃಪಾ ಆಸ್ಪತ್ರೆ, ಎಸ್.ಬಿ.ಎಂ ಮಂಜು ಸ್ನೇಹ ಬಳಗದ ವತಿಯಿಂದ ಮೈಸೂರಿನ ನಂದಗೋಕುಲದ ಸಮುದಾಯ ಭವನದಲ್ಲಿ ಉಚಿತ ಆರೋಗ್ಯ ಮೇಳ ಆಯೋಜಿಸಲಾಗಿತ್ತು.

ಶಿಬಿರವನ್ನು ಶಾಸಕರಾದ ಜಿ.ಟಿ.ದೇವೇಗೌಡರು, ಮಾಜಿ ಶಾಸಕ ಎಲ್.ನಾಗೇಂದ್ರ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮದ್ ಅವರಿಗೆ ಕೆಸಾಪ್ಸ್ ವತಿಯಿಂದ ರಾಜ್ಯದಲ್ಲಿ ಅತ್ಯುತ್ತಮ ಡ್ಯಾಪ್ಕೊ ಅಧಿಕಾರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಐಸಿಟಿಸಿ ವಿಭಾಗದಿಂದ ಹೆಚ್.ಐ.ವಿ/ಏಡ್ಸ್ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಆಪ್ತಸಮಾಲೋಚಕರಾದ ವಸುಮತಿ, ಅಣ್ಣಪ್ಪ ಸ್ವಾಮಿ, ರವಿಶಂಕರ್ ಹಾಗೂ ಪ್ರಯೋಗ ಶಾಲಾ ತಂತ್ರಜ್ಞರಾದ ನಟರಾಜ್ ಅವರನ್ನು ಸನ್ಮಾನಿಸಲಾಯಿತು. ಶಿಬಿರದಲ್ಲಿ ನೂರಾರು ಜನರು ಉಚಿತವಾಗಿ ಆರೋಗ್ಯ ಸಂಬಂಧಿತ ನಾನಾ ತಪಾಸಣೆ ಮಾಡಿಸಿಕೊಂಡರು.

ನಿಕಟಪೂರ್ವ ಪಾಲಿಕೆ ಸದಸ್ಯರಾದ ಎಸ್.ಬಿ.ಎಂ.ಮಂಜು, ಅಮೃತ ಕೃಪಾ ಆಸ್ಪತ್ರೆಯ ಡಾ.ಸೌಮ್ಯ ವೋದಿ, ಹೆಚ್.ಆರ್. ಅಧಿಕಾರಿ ಸಿದ್ದು, ಗೋಪಾಲ್, ನಾಗೇಂದ್ರ ಪ್ರಸಾದ್, ಗೀತಾ, ಪುಟ್ಟರಾಜು, ಲತಾ, ವೀಣಾ, ರಿಚರ್ಡ್, ಪೂರ್ಣಿಮಾ, ಪುಷ್ಪಾ ಹಾಗೂ ಅಮೃತ ಕೃಪಾ ಆಸ್ಪತ್ರೆಯ ಸಿಬ್ಬಂದಿ ಈ ವೇಳೆ ಹಾಜರಿದ್ದರು.



ಮೈಸೂರಿನ ನರಸಿಂಹರಾಜ ವಿಪ್ರ ಸಂಘದ 2024ನೇ ಸಾಲಿನ ದಿನದರ್ಶಿಕೆಯನ್ನು ದತ್ತಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಲೋಕಾರ್ಪಣೆ ಮಾಡಿದರು. ಈ ವೇಳೆ ದತ್ತಪೀಠದ ವಂಶಿ ಕೃಷ್ಣಮೂರ್ತಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠ ಕುಮಾರ್, ಸಂಘದ ಉಪಾಧ್ಯಕ್ಷ ಎಂ.ಕೆ.ಸತ್ಯನಾರಾಯಣ, ಕಾರ್ಯದರ್ಶಿ ಎಸ್.ದಿನೇಶ್, ಖಜಾಂಚಿ ಮಂಜುನಾಥ್, ಎಸ್.ಚಂದ್ರಶೇಖರ್, ಎಂ.ಎಸ್.ಚಂದ್ರಶೇಖರ್, ಕೆ.ವೆಂಕಟೇಶ್, ಎಸ್.ಸತ್ಯನಾರಾಯಣ, ಬಿ.ಎಂ.ಆನಂದ್, ವಿಜಯಲಕ್ಷ್ಮಿ ಇತರರು ಉಪಸ್ಥಿತರಿದ್ದರು.

ಮೈಸೂರು ಹನುಮ ಹಬ್ಬದ ಪ್ರಚಾರ ರಥಕ್ಕೆ ಚಾಲನೆ



ಮೈಸೂರು, ಡಿ. 18– ಡಿಸೆಂಬರ್ 30ರಂದು ನಡೆಯಲಿರುವ ಮೈಸೂರು ಹನುಮ ಹಬ್ಬ ಕಾರ್ಯಕ್ರಮದ ಪ್ರಚಾರ ರಥಕ್ಕೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಸಮಾಜ ಸೇವಕ ಡಿ.ಟಿ.ಪ್ರಕಾಶ್ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಡಿ.ಟಿ. ಪ್ರಕಾಶ್, ಹಿಂದು ಸಮಾಜದಲ್ಲಿ ರಾಜಕೀಯವಾಗಿ, ಜಾತಿ–ವಿಜಾತಿಯಾಗಿ ಅನೇಕ ಭಿನ್ನಾಭಿಪ್ರಾಯಗಳಿವೆ. ಈ ರೀತಿ ಒಡಕುಗಳನ್ನು ಬದಿಗಿಟ್ಟು ಧಾರ್ಮಿಕವಾಗಿ ಒಂದಾಗಬೇಕಾಗಿದೆ. ಮೈಸೂರು ಹನುಮ ಹಬ್ಬದಂತಹ ಕಾರ್ಯಕ್ರಮಗಳು ಹಿಂದೂ ಸಮಾಜವನ್ನು ಒಗ್ಗೂಡಿಸಿ ಕರೆದೊಯ್ಯುವ ಕೆಲಸಕ್ಕೆ ಸಹಕಾರಿಯಾಗಿದೆ. ಹಾಗಾಗಿ ಎಲ್ಲರೂ ಈ ಹಬ್ಬದಲ್ಲಿ ಭಾಗಿಯಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ಎಸ್.ಕೆ.ದಿನೇಶ್, ರಮೇಶ್, ಮೈಸೂರು ಹನುಮಂತೋತ್ಸವ ಸಮಿತಿಯ ಸಂಜಯ್, ಜೀವನ್ ಕುಮಾರ್, ಸಂತೋಷ ಶಂಭು, ರಾಕೇಶ್ ಭಟ್, ಹೇಮಂತ್, ಮಾರ್ಬಳ್ಳಿ ಕುಮಾರ್, ಮನು ಶೈವ, ಯಶ್ವಂತ್, ಕಡಕೊಳ ಜಗದೀಶ್, ಕಿರಣ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಭಕ್ತಿಯ ರಸವನ್ನು ತನ್ನ ಕಾವ್ಯದಲ್ಲಿ ಬಿಂಬಿಸಿದವನು ಕುಮಾರವ್ಯಾಸ

ವಿಮರ್ಶಕ ಎಸ್.ಆರ್.ವಿಜಯಶಂಕರ್ ಅಭಿಮತ



ಮೈಸೂರು, ಡಿ.18– ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ ಆಶ್ರಯದಲ್ಲಿ ವಿಶೇಷ ಉಪನ್ಯಾಸವನ್ನು ಮಹಾರಾಜ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿತ್ತು.

'ಕುಮಾರವ್ಯಾಸ ಒಂದು ಓದು' ವಿಷಯ ಕುರಿತು ವಿಶೇಷ ಉಪನ್ಯಾಸವನ್ನು ಖ್ಯಾತ ವಿಮರ್ಶಕ ಎಸ್.ಆರ್.ವಿಜಯಶಂಕರ್ ನೀಡಿದರು. ಭಕ್ತಿ ರಸವನ್ನು ತನ್ನ ಕಾವ್ಯದಲ್ಲಿ ಬಿಂಬಿಸಿದ ಅಪರೂಪದ ಕವಿ ಕುಮಾರವ್ಯಾಸ. ತನ್ನ ಪಾಂಡಿತ್ಯ ಮತ್ತು ತಿಳುವಳಿಕೆಯಿಂದ ಜನರಿಗೆ ಕಾವ್ಯವನ್ನು ತಲುಪಿಸಿದವರು. ಶಾಸ್ತ್ರ ಮತ್ತು ವರ್ಣ ಧರ್ಮವನ್ನು ಕೆಡವಿ, ಜನ ಸಾಮಾನ್ಯರ ಭಾಷೆಯಲ್ಲಿ ಅರ್ಥವಾಗುವಂತೆ ತನ್ನ ಕಾವ್ಯದೊಂದಿಗೆ ಭಾರತವನ್ನು ಪರಿಚಯಿಸಿದ ದೊಡ್ಡ ಕವಿ. ದೇವರೊಂದಿಗೆ ಸಂಸ್ಕೃತ ಭಾಷೆಯನ್ನು ಮಾತನಾಡುವ ಪರಿಕಲ್ಪನೆಯನ್ನು ತಪ್ಪಿಸಿ ಜನಸಾಮಾನ್ಯರ ಭಾಷೆಯೇ ದೊಡ್ಡದು ಎಂದು ವಿವರಿಸಿದವರು.

ಕುಮಾರವ್ಯಾಸರು ತನ್ನ ಕಾವ್ಯದಲ್ಲಿ ಸ್ಪಷ್ಟವಾಗಿ ಎಲ್ಲಾ ವಿವರಣೆಗಳನ್ನು ಜ್ಞಾನದ ಮೂಲಕ ತಿಳಿಸಿದ್ದಾರೆ. ಮಹಾಭಾರತದ ಎಲ್ಲಾ ಪರ್ವಗಳಲ್ಲಿಯೂ ಅಲಂಕಾರಗಳೊಂದಿಗೆ ಅರಸುಗಳಿಗಿದು ವೀರ ದ್ವಿಜರಿಗೆ ಪರಮ ವೇದದ ಸಾರ ಎಂದು ಹೇಳಿ ಕೊನೆಯ ಪರ್ವದಲ್ಲಿ ಪಾಂಡವರ ಯುದ್ಧಾ ನಂತರ ತಮ್ಮ ರಾಜಕೀಯ ಅಧಿಕಾರವನ್ನು ಸರಿಯಾಗಿ ಹಂಚಿಕೊಳ್ಳುತ್ತಾರೆ ಎಂಬುದನ್ನು ವಿವರಿಸಿದ ಸ್ಪಷ್ಟ ಕವಿ ಎಂದರು.

ಜಿಲ್ಲಾ ಕನ್ನಡ ಉಪನ್ಯಾಸಕರ ವೇದಿಕೆಯ ಅಧ್ಯಕ್ಷ ನೀ.ಗೂ.ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಉದಯ ಶಂಕರ್, ನಿವೃತ್ತ ಪ್ರಾಂಶುಪಾಲ ಅಪ್ಪಾಜಿ ಗೌಡ, ಕವಿ ಡಾ.ಸಂತೋಷ್ ಚಕ್ಕೋಡಿ ಮತ್ತಿತರರು ಉಪಸ್ಥಿತರಿದ್ದರು.

ಮೊದಲ ಬಾರಿಗೆ ಸಂಸತ್‌ನ ಉಭಯ ಸದನಗಳ ದಾಖಲೆಯ 92 ಸಂಸದರ ಅಮಾನತು!

ನವದೆಹಲಿ: ಡಿಸೆಂಬರ್ 13ರಂದು ಸಂಸತ್ ಭದ್ರತಾ ಲೋಪಕ್ಕೆ ಸಂಬಂಧಿಸಿದಂತೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ಸಂಸದರು ಕೋಲಾಹಲ ಸೃಷ್ಟಿಸಿದ್ದು, ಸದನದ ಕಲಾಪಕ್ಕೆ ನಿರಂತರವಾಗಿ ಅಡ್ಡಿ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸದನದ ಕಲಾಪಕ್ಕೆ ಅಡ್ಡಿಪಡಿಸಿದ ದಾಖಲೆ ಪ್ರಮಾಣದ ಸಂಸದರನ್ನು ಅಮಾನತು ಮಾಡಲಾಗಿದೆ.

ಇದುವರೆಗೆ ಲೋಕಸಭೆ ಮತ್ತು ರಾಜ್ಯಸಭೆ ಸೇರಿದಂತೆ ಒಟ್ಟು 92 ವಿಪಕ್ಷ ಸಂಸದರನ್ನು ಪ್ರಸಕ್ತ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಲಾಗಿದೆ. ಸಂಸತ್ತಿನ ಇತಿಹಾಸದಲ್ಲಿ ಇಷ್ಟೊಂದು ಸಂಸದರನ್ನು ಅಮಾನತುಗೊಳಿಸಿರುವುದು ಇದೇ ಮೊದಲು. ಸೋಮವಾರ ಡಿಸೆಂಬರ್ 18 ರಂದು ಲೋಕಸಭೆಯ ಒಟ್ಟು 33 ಮತ್ತು ರಾಜ್ಯಸಭೆಯ 45 ಸಂಸದರನ್ನು ಅಮಾನತುಗೊಳಿಸಲಾಗಿದೆ. ಈ ಹಿಂದೆ ಲೋಕಸಭೆ, ರಾಜ್ಯಸಭೆ ಸೇರಿ ಒಟ್ಟು 14 ಸಂಸದರನ್ನು ಅಮಾನತು ಮಾಡಲಾಗಿತ್ತು.

ರಾಜ್ಯಸಭೆಯಿಂದ 45 ಸಂಸದರ ಅಮಾನತು: ಸದನದ ಕಲಾಪಕ್ಕೆ ಅಡ್ಡಿಪಡಿಸಿದ ಕಾರಣಕ್ಕಾಗಿ ಸೋಮವಾರ ರಾಜ್ಯಸಭೆಯು ಪ್ರಸ್ತುತ ಸಂಸತ್ತಿನ ಅಧಿವೇಶನದ ಉಳಿದ ಅವಧಿಗೆ ವಿರೋಧ ಪಕ್ಷಗಳ 34 ಸದಸ್ಯರನ್ನು ಮತ್ತು ವಿಶೇಷಾಧಿಕಾರ ಸಮಿತಿಯ ವರದಿಯವರೆಗೆ 11 ಸದಸ್ಯರನ್ನು ಅಮಾನತುಗೊಳಿಸಿದೆ.

1989ರಲ್ಲಿ ಮೊದಲ ಬಾರಿಗೆ 63 ಸಂಸದರ ಅಮಾನತು: ಸಂಸತ್ತಿನ ಇತಿಹಾಸದಲ್ಲಿ, ಪ್ರಸ್ತುತ ಅಧಿವೇಶನವನ್ನು ಹೊರತುಪಡಿಸಿ ಲೋಕಸಭೆಯಲ್ಲಿ ಅತಿದೊಡ್ಡ ಅಮಾನತು 1989ರಲ್ಲಿ ನಡೆದಿತ್ತು. ಮಾಜಿ ಪ್ರಧಾನಿ ಇಂದಿರಾಗಾಂಧಿ ಹತ್ಯೆ ಕುರಿತ ಠಾಕೂರ್ ಆಯೋಗದ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಸಂಸದರು ಗದ್ದಲ ಸೃಷ್ಟಿಸಿದ್ದರು. ನಂತರ ಸ್ಪೀಕರ್ 63 ಸಂಸದರನ್ನು ಅಮಾನತುಗೊಳಿಸಿದ್ದರು. ಅಮಾನತುಗೊಂಡ ಸಂಸದರ ಜತೆಗೆ ನಾಲ್ವರು ಸಂಸದರು ಸದನದಿಂದ ಹೊರ ನಡೆದಿದ್ದರು.

ರಾಜ್ಯಸಭೆಯಿಂದ ಅಮಾನತುಗೊಂಡ ಸಂಸದರು!:

ಸಂಸತ್ ಭದ್ರತಾ ಲೋಪ; ಅಧೀರ್ ರಂಜನ್ ಸೇರಿ ಲೋಕಸಭೆಯ ಒಟ್ಟು 33 ಸಂಸದರು ಸಸ್ಪೆಂಡ್



ಕಾಂಗ್ರೆಸ್‌ನ ಅಮಾನತುಗೊಂಡ ರಾಜ್ಯಸಭಾ ಸಂಸದರು – ಪ್ರಮೋದ್ ತಿವಾರಿ, ಜೈರಾಮ್ ರಮೇಶ್, ಅಮಿ ಯಾಗ್ನಿಕ್, ನರಭಾಯಿ ಜೆ ರಥ್ವಾ, ಸೈಯದ್ ನಾಸಿರ್ ಹುಸೇನ್, ಫುಲೋದೇವಿ ನೇತಮ್, ಶಕ್ತಿಸಿನ್ಹ್ ಗೋಹಿಲ್, ಕೆ.ಸಿ.ವೇಣುಗೋಪಾಲ್, ರಜನಿ ಪಾಟೀಲ್, ರಂಜಿತ್ ರಂಜನ್, ಇಮ್ರಾನ್ ಪ್ರತಾಪಗರ್ಹಿ, ರಣದೀಪ್ ಸಿಂಗ್ ಸುರ್ಜೇವಾಲಾ.

ತೃಣಮೂಲ ಕಾಂಗ್ರೆಸ್ ಸಂಸದರು: ಸುಖೇಂದು ಶೇಖರ್ ರೇ, ಮೊಹಮ್ಮದ್ ನದಿಮುಲ್ ಹಕ್, ಅಬೀರ್ ರಂಜನ್ ಬಿಸ್ವಾಸ್, ಶಾಂತನು ಸೇನ್, ಮೌಸಂ ನೂರ್, ಪ್ರಕಾಶ್ ಚಿಕ್ ಬಡೈಕ್, ಸಮೀರುಲ್ ಇಸ್ಲಾಂ.

ಡಿಎಂಕೆ ಸಂಸದರು: ಎಂ ಷಣ್ಮುಗಂ, ಎನ್.ಆರ್. ಎಳಂಗೋ, ಕನಿಮೊಳಿ ಎನ್ವಿಎನ್ ಸೋಮು, ಆರ್ ಗಿರಿರಾಜನ್ (ಡಿಎಂಕೆ).

RJD–ಮನೋಜ್ ಕುಮಾರ್ ಝಾ ಮತ್ತು ಫೈಯಾಜ್ ಅಹ್ಮದ್, **ಸಿಪಿಐ(ಎಂ)**–ವಿ.ಶಿವದಾಸನ್

ಜೆಡಿಯು – ರಾಮನಾಥ್ ಠಾಕೂರ್ ಮತ್ತು ಅನಿಲ್ ಪ್ರಸಾದ್ ಹೆಗ್ಡೆ, **NCP**–ವಂದನಾ ಚವಾಣ್ ಎಸ್ಪಿ–ರಾಮಗೋಪಾಲ್ ಯಾದವ್, ಜಾವೇದ್ ಅಲಿ ಖಾನ್, **ಎಎಪಿ**–ಮಹುವಾ ಮಜಿ

ಇತರ ಸಂಸದರು– ಜೋಸ್ ಕೆ.ಮಣಿ ಮತ್ತು ಅಜಿತ್ ಕುಮಾರ್ ಭುಯಾನ್

ವಿಶೇಷಾಧಿಕಾರ ಸಮಿತಿ ವರದಿ ಬರುವವರೆಗೆ 11 ರಾಜ್ಯಸಭಾ ಸಂಸದರನ್ನು ಅಮಾನತು ಮಾಡಲಾಗಿದೆ. ಈ ಸದಸ್ಯರ ಕಾರ್ಯವೈಖರಿ ಕುರಿತು ಸಮಿತಿಯು ಮೂರು ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸಲಿದೆ ಎಂದು ತಿಳಿಸಲಾಗಿದೆ. ಈ ಸದಸ್ಯರಲ್ಲಿ ಜೆಬಿ ಮಾಥರ್ ಹಿಶಾಮ್, ಎಲ್ ಹನುಮಂತಯ್ಯ, ನೀರಜ್ ಡಾಂಗಿ, ರಾಜಮಣಿ ಪಟೇಲ್, ಕುಮಾರ್ ಕೇತ್ಕರ್, ಜಿ.ಸಿ. ಚಂದ್ರಶೇಖರ್, ಬಿನಯ್ ವಿಶ್ವಂ, ಸಂತೋಷ್ ಕುಮಾರ್ ಪಿ., ಎಂ.ಮೊಹಮ್ಮದ್ ಅಬ್ದುಲ್ಲಾ, ಜಾನ್ ಬ್ರಿಟಾಸ್ ಮತ್ತು ಎ.ಎ.ರಹೀಮ್ ಸೇರಿದ್ದಾರೆ.

ಲೋಕಸಭೆಯಿಂದ ಅಮಾನತುಗೊಂಡ 33 ಸಂಸದರು!: ಸದನದ ಕಲಾಪಗಳಿಗೆ ಅಡ್ಡಿಪಡಿಸಿದ ಮತ್ತು ಸಭಾಪತಿಯ ಅವಹೇಳನಕ್ಕಾಗಿ ಲೋಕಸಭೆಯು ಪ್ರಸ್ತುತ ಸಂಸತ್ತಿನ ಅಧಿವೇಶನದ ಉಳಿದ ಅವಧಿಗೆ ವಿರೋಧ ಪಕ್ಷಗಳ 33 ಸದಸ್ಯರನ್ನು ಅಮಾನತುಗೊಳಿಸಿತು. ತೃಣಮೂಲ ಕಾಂಗ್ರೆಸ್ ಮತ್ತು ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ)ಯಿಂದ ತಲಾ ಒಂಬತ್ತು, ಕಾಂಗ್ರೆಸ್‌ನಿಂದ ಏಳು, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಇಬ್ಬರು ಮತ್ತು ರೆವಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ, ವೀರುತಲೈ ಚಿರುತೈಗಲ್ ಕಚ್ಚಿ (ವಿಸಿಕೆ) ಮತ್ತು ಜನತಾ ದಳ (ಯುನೈಟೆಡ್) ನಿಂದ ತಲಾ ಒಬ್ಬರು.

ಕಾಂಗ್ರೆಸ್–ಅಧೀರ್ ರಂಜನ್ ಚೌಧರಿ, ಆಂಟೊ ಆಂಟೋನಿ, ಕೆ.ಮುರಳೀಧರನ್, ಕೆ.ಸುರೇಶ್, ಅಮರ್‌ಸಿಂಗ್, ರಾಜಮೋಹನ್ ಉನ್ನಿಥಾನ್ ಮತ್ತು ಗೌರವ್ ಗೊಗೊಯ್ ಅವರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಲಾಗಿದೆ.

TMC– ಕಲ್ಯಾಣ್ ಬ್ಯಾನರ್ಜಿ, ಅಪರೂಪ ಪೊದ್ದಾರ್, ಪ್ರಸುನ್ನ ಬ್ಯಾನರ್ಜಿ, ಸೌಗತ ರಾಯ್, ಶತಾಬ್ದಿ ರೈ, ಅಸಿತ್ ಕುಮಾರ್ ಮಂಡಲ್, ಪ್ರತಿಮಾ ಮಂಡಲ್, ಕಾಕೋಲಿ ಘೋಷ್ ದಸ್ತಿದಾರ್ ಮತ್ತು ಸುನೀಲ್ ಕುಮಾರ್ ಮಂಡಲ್.

ಡಿಎಂಕೆ–ಟಿ.ಆರ್.ಬಾಲು, ಎ.ರಾಜಾ, ದಯಾನಿಧಿ ಮಾರನ್, ಜಿ.ಸೆಲ್ವಂ, ಸಿ.ಎನ್.ಅಣ್ಣಾ ದೊರೈ, ಡಾ.ಟಿ.ಸುಮತಿ, ಕೆ.ವೀರಸಾಮಿ, ಎಸ್.ಎಸ್.ಪಲ್ಲಿ ಮಾಣಿಕ್ಕಂ ಮತ್ತು ರಾಮಲಿಂಗಂ.

IUML – ಇ.ಟಿ.ಮೊಹಮ್ಮದ್ ಬಶೀರ್ ಮತ್ತು ಕೆ.ನವಸಿಕಾನಿ, **ಆರ್‌ಎಸ್‌ಪಿ**–ಎನ್‌ಕೆ ಪ್ರೇಮಚಂದ್ರನ್

ಜೆಡಿಯು–ಕೌಶಲೇಂದ್ರ ಕುಮಾರ್ ಮತ್ತು ವಿಸಿಕೆ ತಿರುವಕ್ಕಾಸರ್, ವಿಶೇಷಾಧಿಕಾರ ಸಮಿತಿಯ ವರದಿ ಬರುವವರೆಗೆ ಮೂವರು ಕಾಂಗ್ರೆಸ್ ಸಂಸದರನ್ನು ಅಮಾನತುಗೊಳಿಸಲಾಗಿದೆ. ಸದನವು ಇತರ ಮೂವರು ಕಾಂಗ್ರೆಸ್ ಸಂಸದರನ್ನು ಅಮಾನತುಗೊಳಿಸಿದೆ. ವಿಶೇಷಾಧಿಕಾರ ಸಮಿತಿ ವರದಿ ಬರುವವರೆಗೆ ಜಯಕುಮಾರ್, ವಿಜಯ್ ವಸಂತ್ ಮತ್ತು ಅಬ್ದುಲ್ ಖಾಲಿಕ್ ಅವರನ್ನು ಅಮಾನತುಗೊಳಿಸಲಾಗಿದೆ. ಈ ಹಿಂದೆ ಲೋಕಸಭೆ ಮತ್ತು ರಾಜ್ಯಸಭೆಯಿಂದ 14 ಸಂಸದರನ್ನು ಅಮಾನತುಗೊಳಿಸಲಾಗಿತ್ತು.

ಹೆಣ್ಣು ಭ್ರೂಣ ಹತ್ಯೆ ತಡೆಯಲು ಜಾಗೃತಿ ಮೂಡಿಸಿ

ಮೈಸೂರು, ಡಿ. 18– ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವ ಹೆಣ್ಣು ಭ್ರೂಣ ಹತ್ಯೆ ಹಾಗೂ ಹೆಣ್ಣು ಶಿಶು ಹತ್ಯೆ ತಡೆಯಲು ಜನರಲ್ಲಿ ಜಾಗೃತಿ ಮೂಡಿಸುವಂತೆ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶಶಿಶೇಖರ್ ದೀಕ್ಷಿತ್ ಹೇಳಿದರು.

ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಹೆಣ್ಣು ಭ್ರೂಣ ಹತ್ಯೆ ಜಾಗೃತಿ ಕಾರ್ಯಕ್ರಮದಲ್ಲಿ ಜಾಗೃತಿ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಹೆಣ್ಣು–ಗಂಡಿನ ನಡುವೆ ಅಸಮತೋಲನ ಉಂಟಾಗುವುದರಲ್ಲಿ ಮಹಿಳೆಯರದೂ ಪ್ರಮುಖ ಪಾತ್ರ ಇದೆ. ಗಂಡು ಮಗು ಬೇಕು ಹೆಣ್ಣು ಮಗು ಬೇಡ ಎಂಬ ಮಹಿಳೆಯರ ಮನೋಭಾವನೆಯೂ ಇದಕ್ಕೆ ಕಾರಣವಾಗುತ್ತಿದೆ. ಮಹಿಳೆಯರಿಗೆ ಶಿಕ್ಷಣ ನೀಡಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಿದರೆ ಹೆಣ್ಣು ಮಕ್ಕಳ ಬಗ್ಗೆ ಸಮಾಜದಲ್ಲಿ ಹಾಗೂ ಪಾಲಕರಲ್ಲಿ ಇರುವ ಅಸಡ್ಡೆ ನಿವಾರಣೆಯಾಗಬಹುದು ಎಂದು ಹೇಳಿದರು. ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲಿ ತಾಂತ್ರಿಕತೆ ಬೆಳೆದಂತೆ ಹೆಣ್ಣುಭ್ರೂಣ ಹತ್ಯೆ ಹೆಚ್ಚಾಗುತ್ತಿದೆ. ಇದರಿಂದ ಕಳೆದ ಎರಡು ದಶಕಗಳಿಂದ ಸಮಾಜದಲ್ಲಿ ಮಹಿಳೆಯರ ಸಂಖ್ಯೆ ಇಳಿಮುಖವಾಗಲಾರಂಭಿಸಿದೆ. ಮಹಿಳೆ ಹಾಗೂ ಪುರುಷರ ಅನುಪಾತದ ಅಸಮತೋಲನದಿಂದ ಅನೇಕ ಸಮಸ್ಯೆಗಳು ಉಂಟಾಗುತ್ತವೆ. ಮಹಿಳೆಯರ ಮೇಲೆ



ಅತ್ಯಾಚಾರಗಳು ಹೆಚ್ಚಾಗುತ್ತವೆ. ಲೈಂಗಿಕ ಸಂಪರ್ಕದಿಂದ ಬರುವ ರೋಗಗಳು ಹೆಚ್ಚಾಗುತ್ತವೆ. ಕುಟುಂಬದ ವ್ಯವಸ್ಥೆ ಹಾಳಾಗುತ್ತದೆ. ದೇಶದಲ್ಲಿ ಅಶಾಂತಿ ಉಂಟಾಗುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಮಹಿಳೆ ಹಾಗೂ ಪುರುಷರ ಅನುಪಾತದ ಅಸಮತೋಲನದಿಂದ ಇನ್ನೂ ಅನೇಕ ರೀತಿಯ ದುಷ್ಪರಿಣಾಮಗಳು ಸಾಮಾಜಿಕ ವ್ಯವಸ್ಥೆಯ ಮೇಲಾಗುತ್ತವೆ ಎಂದರು. ದೇವಸ್ಥಾನದ ಪ್ರಧಾನ ಅರ್ಚಕರಾದ ಎಂ.ಡಿ. ಸೋಮಣ್ಣ, ಚಾಮುಂಡಿಬೆಟ್ಟದ ಶ್ರೀ ಮಹಾಬಲಾದ್ರಿ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕಿ ಎನ್.ಎಸ್.ಮಂಜುಳಾ, ಸ್ವಚ್ಛತಾ ಸಿಬ್ಬಂದಿ ಜಯಲಕ್ಷ್ಮಿ, ಸ್ಥಳೀಯ ಪೊಲೀಸ್ ಯೋಗೇಶ್, ರಾಮ್ ಶೆಟ್ಟಿ, ಶ್ರೀ ದುರ್ಗಾ ಫೌಂಡೇಶನ್ ಸಂಚಾಲಕರಾದ ಸೌಮ್ಯ, ಪ್ರಮೋದ್, ದೀಪ, ರೂಪ, ಅಶ್ವಿನಿ, ಗೌರಿ, ಸೀಮಾ ಇನ್ನಿತರರು ಹಾಜರಿದ್ದರು.

ಎತ್ತಿನಹೊಳೆ ಯೋಜನಾ ವೆಚ್ಚ ಆರಂಭದಲ್ಲಿ 13,500 ಕೋಟಿ! ಈಗ ಅದು 22 ಸಾವಿರ ಕೋಟಿಗೇರಿಕೆ!!

ಬೆಂಗಳೂರು, ಡಿ.18(ಕೆಎಂಶಿ)–ಎತ್ತಿನಹೊಳೆ ಯೋಜನೆಗೆ ಕಳೆದ ನಾಲ್ಕು ವರ್ಷದ ಅವಧಿಯಲ್ಲಿ ಬಿಜೆಪಿ ಸರ್ಕಾರ ಅನುದಾನ ನೀಡದ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿದ್ದ ಯೋಜನೆಯ ಕಾಮಗಾರಿಯನ್ನು ನಮ್ಮ ಸರ್ಕಾರ ಪುನರಾರಂಭಿಸಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆಯ ಪ್ರಾರಂಭದ ಅಂದಾಜು ವೆಚ್ಚ 13,500 ಕೋಟಿ ರೂ. ಇತ್ತು, ಈ ಹಿಂದಿನ ಅವಧಿಯಲ್ಲಿ ಬಿಜೆಪಿ ಸರ್ಕಾರ ಅನುದಾನ ನೀಡಲಿಲ್ಲವಾದ್ದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು ಎಂದರು.

ಈಗ ನಮ್ಮ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ಯೋಜನೆಯ ಅಂದಾಜು ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ, ಪ್ರಸ್ತುತ 22 ಸಾವಿರ ಕೋಟಿ ರೂ. ಆಗಲಿದೆ. ಕಾಮಗಾರಿಯನ್ನು ಎರಡು ವರ್ಷದೊಳಗೆ ಪೂರ್ಣಗೊಳಿಸಲಾಗುವುದು. ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸಲಾಗುವುದು. ನೀರು ಸಂಗ್ರಹಣೆಗಾಗಿ ಕೊರಟಗೆರೆ ರೈತರು ನೀಡಿರುವ ಭೂಮಿಗೆ ಎಕರೆಗೆ 8 ಲಕ್ಷ ರೂ. ಹಾಗೂ ದೊಡ್ಡಬಳ್ಳಾಪುರದಲ್ಲಿ ಎಕರೆ ಭೂಮಿಗೆ 32 ಲಕ್ಷ ರೂ. ಪರಿಹಾರ ನಿಗದಿಪಡಿಸಲಾಗಿದೆ, ಎಲ್ಲ ರೈತರಿಗೂ ಒಂದೇ ರೀತಿಯ ಸಮಾನ ಪರಿಹಾರ ಕಲ್ಪಿಸುವಂತೆ ಒತ್ತಾಯಿಸಲಾಗಿದೆ ಎಂದರು. ಬೆಂಗಳೂರಿನಲ್ಲಿ ಎನ್‌ಐಎ ಕಚೇರಿ ಇದೆ. ಅಕ್ರಮ ಚಟುವಟಿಕೆಗಳ ಮಾಹಿತಿ ಆಧರಿಸಿ ಆಗಾಗ್ಯೆ ದಾಳಿ ನಡೆಯುತ್ತಿರುತ್ತದೆ, ಕೆಲವೊಮ್ಮೆ ರಾಜ್ಯ ಪೊಲೀಸರೊಂದಿಗೆ ಎನ್‌ಐಎ ಮಾಹಿತಿ ಹಂಚಿಕೊಳ್ಳುತ್ತದೆ. ಅವರ ಕರ್ತವ್ಯ ಅವರು ಮಾಡುತ್ತಿದ್ದಾರೆ ಎಂದರು.

ಟೆಲಿಕಾಂ ಸೇವೆಗೆ ಬಯೋಮೆಟ್ರಿಕ್ ಕಡ್ಡಾಯ

ನವದೆಹಲಿ, ಡಿ.18– ಟೆಲಿಕಾಂ ಸೇವೆ ನೀಡುವ ಮುನ್ನ ಗ್ರಾಹಕರ ಬಯೋಮೆಟ್ರಿಕ್ ಗುರುತು ಖಚಿತಪಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.

ಟೆಲಿಕಾಂ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಯಲ್ಲಿ ಸೋಮವಾರ ದೂರಸಂಪರ್ಕ ಮಸೂದೆ–2023 ಅನ್ನು ಮಂಡಿಸಿದ್ದು, ಆನ್ಲೈನ್ ಮೆಸೇಜಿಂಗ್ ಮತ್ತು ಸ್ಟ್ರೀಮಿಂಗ್ ಸೇವೆಗಳಂತಹ ಓವರ್–ದಿ–ಟಾಪ್ ಸೇವೆಗಳನ್ನು ದೂರ ಸಂಪರ್ಕ ಸೇವೆಗಳ ವ್ಯಾಖ್ಯಾನ ದಿಂದ ಹೊರಗಿಡಲಾಗಿದೆ. ಹೊಸ ಆವೃತ್ತಿಯಲ್ಲಿ ಸಿಮ್ ಕಾರ್ಡ್ ನೀಡುವಾಗ ಟೆಲಿಕಾಂ ಕಂಪನಿಗಳು ಗ್ರಾಹಕರ ಬಯೋಮೆಟ್ರಿಕ್ ಪರಿಶೀಲನೆಯನ್ನು ಕಡ್ಡಾಯಗೊಳಿ ಸಲಾಗಿದೆ. ಟೆಲಿಕಾಂ ಸೇವೆಗಳನ್ನು ನೀಡುವ ಯಾವುದೇ ಅಧಿಕೃತ ಕಂಪನಿಯು ಟೆಲಿಕಾಂ ಸೇವೆಗಳನ್ನು ನೀಡುವ ಮುನ್ನ ಆ ವ್ಯಕ್ತಿಯ ಬಯೋಮೆಟ್ರಿಕ್ ಗುರುತನ್ನು ಖಚಿತಪಡಿಸಿಕೊಳ್ಳುವುದು ಕಡ್ಡಾಯ ಎಂದು ಮಸೂದೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಕಳೆದ ವರ್ಷ ಮಸೂದೆಯ ಹಿಂದಿನ ಕರಡು ಆವೃತ್ತಿಯಲ್ಲಿ ಓಟಿಟಿ ಸೇವೆಗಳನ್ನು ಅದರ ವ್ಯಾಪ್ತಿಗೆ ಸೇರಿಸಲಾಗಿತ್ತು. ಆದರೆ, ಇಂಟರ್ನೆಟ್ ಕಂಪನಿಗಳಿಂದ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಇದಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು. ಹೀಗಾಗಿ ಸರ್ಕಾರ ಹೊಸ ಮಸೂದೆಯಲ್ಲಿ ಒಟಿಟಿಗಳನ್ನು ಇದರ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಈ ಮಸೂದೆಯು ಟೆಲಿಕಾಂ ಪರವಾನಗಿ ಮತ್ತು ಸ್ಪೆಕ್ಟ್ರಮ್ ಹಂಚಿಕೆ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆಗಳೊಂದಿಗೆ ಟೆಲಿಕಾಂ ವಲಯದ ಕಾರ್ಯಾಚರಣೆಗಳನ್ನು ಸರಳಗೊಳಿಸಲು ಕ್ರಮಗಳನ್ನು ಪ್ರಸ್ತಾಪಿಸಲಾಗಿದೆ. ಸರಕು, ಸೇವೆಗಳು ಮತ್ತು ಹಣಕಾಸು ಹೂಡಿಕೆಗಳ ವಿಷಯದಲ್ಲಿ ಜಾಹೀರಾತು ಮತ್ತು ಪ್ರಚಾರ ಸಂದೇಶಗಳನ್ನು ಕಳುಹಿಸುವ ಮುನ್ನ ಗ್ರಾಹಕರ ಪೂರ್ವಾನುಮತಿ ತೆಗೆದುಕೊಳ್ಳುವುದನ್ನು ಕೂಡ ಕಡ್ಡಾಯಗೊಳಿಸಲಾಗಿದೆ.

ಬಯೋಮೆಟ್ರಿಕ್ ದೃಢೀಕರಣ ಎಂಬುದು ಸೈಬರ್ ಸೆಕ್ಯುರಿಟಿ ಪ್ರಕ್ರಿಯೆಯಾಗಿದೆ. ಇದು ಬಳಕೆ ದಾರರ ವಿಶಿಷ್ಟ ಜೈವಿಕ ಗುಣಲಕ್ಷಣಗಳಾದ ಬೆರಳಚ್ಚು, ಧ್ವನಿ, ರೆಟಿನಾ ಮತ್ತು ಮುಖದ ವೈಶಿಷ್ಟ್ಯಗಳನ್ನು ಬಳಸಿಕೊಂಡು ದೃಢೀಕರಣ ಮಾಡುತ್ತದೆ. ಬಳಕೆ ದಾರರು ತಮ್ಮ ಖಾತೆಗೆ ಲಾಗಿನ್ ಮಾಡಿದಾಗ ಅವರ ಗುರುತನ್ನು ಪರಿಶೀಲಿಸಲು ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆ ಮೂಲಕ ಈ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

ಅಕ್ರಮ ಸಾಗಾಟದಿಂದ 12 ಗೋವುಗಳ ರಕ್ಷಣೆ; ಇಬ್ಬರ ಬಂಧನ

ಮೈಸೂರು, ಡಿ.18(ಪಿಎಂ)– ಅಕ್ರಮವಾಗಿ ಸಾಗಿಸುತ್ತಿದ್ದ 12 ಗೋವುಗಳನ್ನು ರಕ್ಷಿಸಿರುವ ಹೆಬ್ಬಾಳು ಪೊಲೀಸರು, ಈ ಸಂಬಂಧ ಇಬ್ಬರನ್ನು ಬಂಧಿಸಿ, ಸಾಗಾಟ ಮಾಡುತ್ತಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ರಿಂಗ್ ರಸ್ತೆಯ ಶುಭೋದಿನಿ ಚೌಲ್ಟ್ರಿ ಸಮೀಪ ಮಹಿಂದ್ರಾ ಬೊಲೆರೊ ಪಿಕಪ್ ವಾಹನವನ್ನು (ಕೆಎ–13, ಸಿ–2087) ಕೆಲ ದಿನಗಳ ಹಿಂದೆ ಹಿಡಿದು ಪರಿಶೀಲಿಸಿದಾಗ, ಅದರಲ್ಲಿ ಗೋವುಗಳನ್ನು ಅತ್ಯಂತ ಕ್ರೂರವಾಗಿ ಸಾಗಾಟ ಮಾಡುತ್ತಿದ್ದದ್ದು ಬೆಳಕಿಗೆ ಬಂದಿದೆ. ವಾಹನ ಚಾಲಕ, ವಾಹನದಲ್ಲಿದ್ದ ಮತ್ತೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ, ಹುಣಸೂರು ತಾಲೂಕು ರತ್ನಪುರಿ ಗ್ರಾಮದ ಸಂತೆಯಲ್ಲಿ ಗೋವುಗಳನ್ನು ಖರೀದಿಸಿದ್ದು, ಅವುಗಳನ್ನು ಅಕ್ರಮವಾಗಿ ಮೈಸೂರಿನಲ್ಲಿ ಕಸಾಯಿಖಾನೆಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಸಾಗಿಸುತ್ತಿದ್ದ ಬಗ್ಗೆ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಈ ಸಂಬಂಧ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ರಕ್ಷಿಸಿದ ಗೋವುಗಳನ್ನು ಪಿಂಜ್ರಾಪೋಲ್ ಸೊಸೈಟಿಗೆ ಹಸ್ತಾಂತರಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಒತ್ತಡದ ಬದುಕಿನ ನಿರ್ವಹಣೆಗೆ ಕ್ರೀಡೆ ಅವಶ್ಯಕ

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಾ.ಕೆ.ಗೋವಿಂದರಾಜು ಅಭಿಮತ



ಸುತ್ತೂರು, ಡಿ.18–ಒತ್ತಡದ ಬದುಕಿಗೆ ಕ್ರೀಡೆಗಳು ಬಹಳ ಅವಶ್ಯಕ ಎಂದು ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷರೂ ಆದ ವಿಧಾನಪರಿಷತ್ ಸದಸ್ಯರು ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಾ. ಕೆ. ಗೋವಿಂದರಾಜು ಅಭಿಪ್ರಾಯಪಟ್ಟರು.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣೆಯ ಅಂಗವಾಗಿ 3 ದಿನಗಳ ಜೆಎಸ್‌ಎಸ್ ಅಂತರ–ಸಂಸ್ಥೆಗಳ ಕ್ರೀಡಾಕೂಟದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದಿನೊಂದಿಗೆ ಕ್ರೀಡಾ ಚಟುವಟಿಕೆಗಳಿಗೂ ಪ್ರಾಶಸ್ತ್ಯವನ್ನು ಕೊಡಬೇಕು. ತಮ್ಮ ನಿರ್ದಿಷ್ಟ ಗುರಿ ಮತ್ತು ಉದ್ದೇಶದೊಂದಿಗೆ ಜೀವನದಲ್ಲಿ ಛಲವನ್ನು ಬೆಳೆಸಿಕೊಳ್ಳಬೇಕು. ಕ್ರೀಡೆಯು ಆರೋಗ್ಯಕ್ಕೆ ಬಹಳ ಮುಖ್ಯವಾಗಿದೆ. ಪ್ರತಿ ದಿನ ಒಂದು ಗಂಟೆ ಕಾಲ ಆಟ ಆಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಈ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದು ನನ್ನ ಪುಣ್ಯ ಎಂದರು. ಜೆಎಸ್‌ಎಸ್ ಸಂಸ್ಥೆಯು ಮೌಲ್ಯಯುತವಾದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸುತ್ತಿದೆ. ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರಮಟ್ಟ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಉನ್ನತ ಹುದ್ದೆಗಳನ್ನು ಪಡೆದಿದ್ದಾರೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಕಬಡ್ಡಿ ಕ್ರೀಡಾಪಟು ಸುಕೇಶ್ ಹೆಗ್ಡೆ ಮಾತನಾಡಿ, ಈ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದಕ್ಕೆ ತುಂಬಾ ಸಂತೋಷವಾಗಿದೆ. ಶಿಸ್ತಿನ ಸಿಪಾಯಿಗಳಂತೆ ಕ್ರೀಡಾಪಟುಗಳು ಪಥಸಂಚಲನ ಮಾಡಿದ್ದಾರೆ. ಇದನ್ನು ನೋಡುವ ಸೌಭಾಗ್ಯ ನನ್ನದಾಗಿದೆ. ಹಳ್ಳಿಯ ಕ್ರೀಡೆಯಾದ ಕಬಡ್ಡಿ ಆಟವು ಮೂಲೆಗುಂಪಾಗಿತ್ತು, ಆದರೆ ಇತ್ತೀಚಿನ ದಿನಗಳಲ್ಲಿ ಕಬಡ್ಡಿ ಆಟಕ್ಕೆ ನಮ್ಮ ದೇಶದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿದೆ. ಸರ್ಕಾರವು ಸಹ ಉದ್ಯೋಗದಲ್ಲಿ ಶೇ 3 ಮೀಸಲಾತಿಯನ್ನು ನೀಡಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಿದೆ ಎಂದು ತಿಳಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡುತ್ತಾ, ಮಾನವನ ಜೀವನದಲ್ಲಿ ಕ್ರೀಡೆಗಳು ಅವಿಭಾಜ್ಯ ಅಂಗವಾಗಬೇಕು. ವಿದ್ಯಾರ್ಥಿಗಳು ಓದಿಗೆ ಹೇಗೆ ಪ್ರಾಮುಖ್ಯತೆ ನೀಡುತ್ತೀರೋ ಅದೇ ರೀತಿ ಕ್ರೀಡಾ ಚಟುವಟಿಕೆಗಳಲ್ಲಿಯೂ ಆಸಕ್ತಿಯಿಂದ ಭಾಗವಹಿಸಬೇಕು. ಕ್ರೀಡಾ ಮನೋಭಾವನೆಯನ್ನು ಬೆಳೆಸಿಕೊಳ್ಳುವುದರಿಂದ ಕ್ರೀಡಾಪಟುಗಳಲ್ಲಿ ಉತ್ಸಾಹ ಹೆಚ್ಚುತ್ತದೆ. ಮಾನಸಿಕ ಮತ್ತು ದೈಹಿಕ ಆರೋಗ್ಯ ಬೆಳವಣಿಗೆ ವೃದ್ಧಿಯಾಗುತ್ತದೆ ಎಂದರು.

ಕ್ರೀಡಾಪಟುಗಳ ಪರವಾಗಿ ವೀರರಾಜಪುರದ ಜೆಎಸ್‌ಎಸ್ ಪಿ.ಯು ಕಾಲೇಜಿನ ರಾಜ್ಯಮಟ್ಟದ ಕ್ರೀಡಾಪಟು ಕು. ಭಾವನ ಹಾಗೂ ಕ್ರೀಡಾಧಿಕಾರಿಗಳ ಪರವಾಗಿ ದೈಹಿಕ ಶಿಕ್ಷಣ ಶಿಕ್ಷಕ ಎಂ.ಕೆ. ಸೋಮಶೇಖರ್ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದ ನಿರ್ದೇಶಕ ವೆಂಕಟೇಶ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಎಸ್. ಶಿವಕುಮಾರಸ್ವಾಮಿ, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್, ಕ್ರೀಡಾಕೂಟದ ಸಂಚಾಲಕ ಸಂಪತ್ತು ಹಾಗೂ ಸಂಸ್ಥೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ಕೇರಳದಲ್ಲಿ ಕೊರೊನಾ ಪ್ರಕರಣ ಪತ್ತೆ ಹಿನ್ನೆಲೆ

ಬಾವಲಿ ಚೆಕ್‌ಪೋಸ್ಟ್‌ಗೆ ಆರೋಗ್ಯಾಧಿಕಾರಿ ಭೇಟಿ, ಪರಿಶೀಲನೆ

ಹೆಚ್.ಡಿ.ಕೋಟೆ, ಡಿ.18– ಕೇರಳದಲ್ಲಿ ಕೊರೊನಾ ಪ್ರಕರಣ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ತಾಲೂಕಿನ ಗಡಿಭಾಗ ಬಾವಲಿ ಚೆಕ್‌ಪೋಸ್ಟ್‌ಗೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ರವಿಕುಮಾರ್, ಕೇರಳದಲ್ಲಿ ಕೊರೊನಾ ಪ್ರಕರಣಗಳು ವ್ಯಾಪಕವಾಗಿ ಹರಡುತ್ತಿರುವುದರಿಂದ ಗಡಿಭಾಗದ ಹಳ್ಳಿಗಳ ಪ್ರತಿ ಮನೆ ಮನೆಗೂ ಭೇಟಿ ನೀಡಿ ಕರಪತ್ರ ಹಂಚುವ ಮೂಲಕ ಕೊರೊನಾ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು. ಕೇರಳದಿಂದ ಬರುವ ಜನರ ಮೇಲೆ ತೀವ್ರ ನಿಗಾ ವಹಿಸಿ, ತಪಾಸಣೆಗೆ ಒಳಪಡಿಸಬೇಕು. ಈ ವೇಳೆ ಕೋವಿಡ್ ಲಕ್ಷಣ ಕಂಡು ಬಂದರೆ ತಕ್ಷಣ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಲು ತಿಳಿಸಬೇಕು. ಅಲ್ಲದೇ ಆರೋಗ್ಯ ಕೇಂದ್ರಕ್ಕೆ ಆಗಮಿಸುವ ರೋಗಿಗಳಿಗೆ ಕೊರೊನಾ ಪರೀಕ್ಷೆ ನಡೆಸುವಂತೆ ವೈದ್ಯಾಧಿಕಾರಿ ಮತ್ತು ಸಿಬ್ಬಂದಿಗೆ ಸೂಚಿಸಿದರು.



ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ನಡೆಸಲು 2 ತಂಡವನ್ನು ನಿಯೋಜಿಸಲಾಗಿದ್ದು, ಈ ತಂಡಗಳು ನಿತ್ಯ ಕರ್ನಾಟಕ ಗಡಿ ಭಾಗದಿಂದ ಕೇರಳಕ್ಕೆ ಕೆಲಸಕ್ಕೆ ಹೋಗಿ ಬರುವವರ ಮೇಲೆ ನಿಗಾ ವಹಿಸಬೇಕು. ಈ ವೇಳೆ ಕೊರೊನಾ ಲಕ್ಷಣ ಕಂಡು ಬಂದರೆ ತಕ್ಷಣ ಪರೀಕ್ಷೆಗೆ ಒಳಪಡಿಸಬೇಕು. ಅಲ್ಲದೇ ಈ ರಸ್ತೆಯಲ್ಲಿ ಸಂಚರಿಸುವ ಪ್ರಯಾಣಿಕರ ಹೆಸರುಗಳನ್ನು ನೋಂದಣಿ ಮಾಡಿ ಪ್ರತಿದಿನ ಜಿಲ್ಲಾ ಸರ್ವೇಕ್ಷಣಾ ಕಚೇರಿ ಮೈಸೂರು ಮತ್ತು ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ವರದಿ ನೀಡಬೇಕು ಎಂದು ತಿಳಿಸಿದರು.

ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಾಕ್ ಡ್ರಿಲ್ ಮಾಡಿ ಪರೀಕ್ಷೆ ಮಾಡಲಾಗಿದ್ದು, ಆಕ್ಸಿಜನ್, ಅಗತ್ಯ ತುರ್ತು ಔಷಧಿಗಳನ್ನು ದಾಸ್ತಾನು ಇಟ್ಟುಕೊಳ್ಳುವಂತೆ ತಿಳಿಸಿದರು.

ಅಲ್ಲದೇ ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ, ಸಿಬ್ಬಂದಿವರ್ಗ ಹಾಗೂ ಆಶಾ ಕಾರ್ಯಕರ್ತೆಯರು ಕೊರೊನಾ ಸಂಬಂಧ ತುರ್ತು ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಈ ವೇಳೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಪೊಲೀಸ್ ಇಲಾಖೆಯ ಸೋಮೇಶ್, ಅರಣ್ಯ ಇಲಾಖೆ ಸಿಬ್ಬಂದಿ ವರ್ಗದವರಾದ ಉಮೇಶ್ ನಾಯ್ಕ, ಲಕ್ಷ್ಮಣ, ಆಶಾ ಕಾರ್ಯಕರ್ತೆ ಲಕ್ಷ್ಮಿ ಇತರರಿದ್ದರು.

ಪಿ.ಪಟ್ಟಣದಲ್ಲಿ ಪ್ರತಾಪ್ ಸಿಂಹ ಪರ ಪ್ರತಿಭಟನೆ



ಪಿರಿಯಾಪಟ್ಟಣ, ಡಿ.18– ಸಂಸದ ಪ್ರತಾಪ್ ಸಿಂಹ ಅವರನ್ನು ದುರುದ್ದೇಶ ಪೂರ್ವಕ ಹಾಗೂ ವೈಯಕ್ತಿಕವಾಗಿ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಆರೋಪಿಸಿ ನಗರದಲ್ಲಿ ಪ್ರತಾಪ್ ಸಿಂಹ ಅಭಿಮಾನಿಗಳು ಹಾಗೂ ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಸಂಸದ ಪ್ರತಾಪ್ ಸಿಂಹ ಭಾವಚಿತ್ರ ಹಿಡಿದು ಘೋಷಣೆ ಕೂಗಿದರು.

ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಗೌಡ ಮಾತನಾಡಿ, ಸಂಸತ್ ಭವನದ ಮೇಲಿನ ದಾಳಿಯನ್ನು ಖಂಡಿಸುತ್ತೇವೆ. ಆದರೆ ಈ ಪ್ರಕರಣದಲ್ಲಿ ಪ್ರತಾಪ್ ಸಿಂಹ ಅವರನ್ನು ದುರುದ್ದೇಶಪೂರ್ವಕವಾಗಿ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಪ್ರಕರಣ ಸಂಬಂಧ ಸರ್ಕಾರ ತನಿಖೆ ನಡೆಸುತ್ತಿದೆ. ಹೀಗಾಗಿ ಅಲ್ಲಿವರೆಗೂ ಎಲ್ಲರೂ ಸುಮ್ಮನಿರಬೇಕು. ಕೇವಲ ಪಾಸ್ ಕೊಟ್ಟ ವಿಚಾರಕ್ಕೆ ಪ್ರತಾಪ್ ಸಿಂಹ ಅವರನ್ನು ಗುರಿಯಾಗಿಸಿಕೊಂಡು ಹೇಳಿಕೆ ಕೊಡುವುದು, ಭಯೋತ್ಪಾದಕರಂತೆ ಬಿಂಬಿಸುವುದು ಸರಿಯಲ್ಲ. ಅಂತಹವರ ವಿರುದ್ಧ ಕಾನೂನು ಹೋರಾಟ ಮಾಡುವುದಾಗಿ ತಿಳಿಸಿದ ಅವರು, ಪ್ರತಾಪ್ ಸಿಂಹ ಅವರು ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಅಂತಹವರ ವಿರುದ್ಧ ಅಪಪ್ರಚಾರ ಮಾಡುವುದು ಸರಿಯಲ್ಲ ಎಂದರು.

ಈ ವೇಳೆ ಮಾಜಿ ಶಾಸಕರಾದ ಹೆಚ್.ಸಿ. ಬಸವರಾಜಪ್ಪ ಆರ್.ಟಿ.ಸತೀಶ್, ಮೈಸೂರು ಮಹಾನಗರ ಸಹಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್ ಗೌಡ, ಸೋಮಶೇಖರ್, ವಿಕ್ರಮ್ ರಾಜ್ ಮಾತನಾಡಿದರು.

ಮಾಜಿ ಜಿಪಂ ಸದಸ್ಯ ರಾಜೇಂದ್ರ ಕಾರ್ಯದರ್ಶಿ ಚಂದ್ರು, ಮುಖಂಡರಾದ ವಿಜಯ ಕುಮಾರ್, ಲೋಕಪಾಲಯ್ಯ, ಚೆನ್ನಬಸವ ರಾಜು, ಗೀತಾ, ನಳಿನಿ, ಮೋಹನ, ಮನು, ಸ್ವಾಮಿ, ರಮೇಶ ಮತ್ತಿತರರಿದ್ದರು.

ನಗರಸಭೆಯಿಂದ ನಿವೇಶನಗಳ ಕಡತಗಳು ನಾಪತ್ತೆ

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ

ನಂಜನಗೂಡು, ಡಿ.18– ನಗರದ ದೇವಿರಮ್ಮನಹಳ್ಳಿ ಬಡಾವಣೆ ಸರ್ವೆ ನಂ.58.59 ರಲ್ಲಿನ 3.16 ಎಕರೆಯಲ್ಲಿರುವ ನಿವೇಶನಗಳ ಕಡತಗಳು ನಗರಸಭೆಯಿಂದ ನಾಪತ್ತೆಯಾಗಿದ್ದು, ಭೂಗಳ್ಳರೊಂದಿಗೆ ಶಾಮೀಲಾಗಿ ಸರ್ಕಾರದ ಸ್ವತ್ತುಗಳನ್ನು ಕಾಪಾಡುವಲ್ಲಿ ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿ ತಾಲೂಕು ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಇಲ್ಲಿನ ನಗರಸಭೆ ಎದುರು ಸೋಮವಾರ ಜಮಾಯಿಸಿದ ಪ್ರತಿಭಟನಾಕಾರರು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಾಲೂಕು ದಸಂಸ ಸಂಚಾಲಕ ಸುರೇಶ್ ಮಾತನಾಡಿ, ಕೋಟ್ಯಾಂತರ ರೂ. ಬೆಲೆಬಾಳುವ ನಿವೇಶನಗಳ ಮೂಲ ಕಡತಗಳು ನಗರಸಭೆಯಿಂದ ಕಾಣೆಯಾಗಿವೆ. ಈ ಸಂಬಂಧ ನಗರಸಭೆ ಆಡಳಿತಾಧಿಕಾರಿಗಳೂ ಆದ ಜಿಲ್ಲಾಧಿಕಾರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಸೂಚಿಸಿದ್ದರು. ಆದರೆ ಅಕ್ರಮ ಖಾತೆ ಮಾಡಿರುವ ಅಧಿಕಾರಿಗಳು ಹಾಗೂ ಆಗಿನ ನಗರಸಭೆ ಅಧ್ಯಕ್ಷರನ್ನು ರಕ್ಷಿಸಲು ಕಡತಗಳನ್ನು ಕಣ್ಮರೆ ಮಾಡಲಾಗಿದೆ ಎಂದು ಆರೋಪಿಸಿದರು.

ಪ್ರಕರಣ ಸಂಬಂಧ ಪೊಲೀಸ್ ಠಾಣೆಯಲ್ಲಿ ದ್ವಿತೀಯ ದರ್ಜೆ ಗುಮಾಸ್ತನ ಮೇಲೆ ದೂರು ದಾಖಲು ಮಾಡಿ, ಅಧಿಕಾರಿಗಳು ಪ್ರಕರಣವನ್ನು ಹಳ್ಳ ಹಿಡಿಸುವ ಪ್ರಯತ್ನದಲ್ಲಿದ್ದಾರೆ. ನಗರಸಭೆಯಲ್ಲಿ ಖಾತೆ ಮಾಡಿಸಲು ಸಾರ್ವಜನಿಕರು ಮಧ್ಯವರ್ತಿಗಳು ಹಾಗೂ ದಲ್ಲಾಳಿಗಳನ್ನು ಆಶ್ರಯಿಸಬೇಕಾಗಿದ್ದು, ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಕಡತ ಕಾಣೆಯಾಗಿರುವ ಪ್ರಕರಣದಲ್ಲಿ ಅಂದಿನ ನಗರಸಭೆ ಆಯುಕ್ತ, ರೆವಿನ್ಯೂ ಇನ್ಸ್‌ಪೆಕ್ಟರ್ ಹಾಗೂ ನಗರಸಭೆ ಅಧ್ಯಕ್ಷರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು, ಪ್ರಕರಣ ಉನ್ನತ ಮಟ್ಟದ ತನಿಖೆಗಾಗಿ ಲೋಕಾಯುಕ್ತರಿಗೆ ಹಸ್ತಾಂತರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಯಶವಂತ್ ಕುಮಾರ್, ಚಿಕ್ಕಣ್ಣ, ಮರಿಸ್ವಾಮಿ, ನವೀನ್, ರವಿ, ಪ್ರಕಾಶ್, ಡಿ.ಸಿ. ಶಿವಕುಮಾರ್ ಪಾಲ್ಗೊಂಡಿದ್ದರು.

ಕ್ರೀಡಾಕೂಟಗಳಿಂದ ಯುವಕರಲ್ಲಿ ಪ್ರೀತಿ, ವಿಶ್ವಾಸ ಹೆಚ್ಚಳ: ಬಿ.ನಾಗರಾಜ್



ಹಿರೀಕ್ಯಾತನಹಳ್ಳಿ, ಡಿ.18– ಕ್ರೀಡಾಕೂಟಗಳನ್ನು ಆಯೋಜಿಸುವುದರಿಂದ ಯುವಕರಲ್ಲಿ ಪ್ರೀತಿ, ವಿಶ್ವಾಸ ಹೆಚ್ಚಾಗಿ ಪರಸ್ಪರ ಹೊಂದಾಣಿಕೆಯಾಗಲು ಸಹಕಾರಿಯಾಗಲಿದೆ ಎಂದು ತಾಪಂ ಮಾಜಿ ಅಧ್ಯಕ್ಷ ಬಿ.ನಾಗರಾಜ್ ತಿಳಿಸಿದರು.

ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ 2 ದಿನಗಳ ಕಾಲ ನಡೆದ ಹಿರೀಕ್ಯಾತನಹಳ್ಳಿ ಪ್ರೀಮಿಯರ್ ಲೀಗ್ (ಎಚ್‌ಪಿಎಲ್) ಎಲ್‌ಜಿ ಕಪ್ ಕ್ರಿಕೆಟ್ ಪಂದ್ಯಾವಳಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಕರು ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಇದರಿಂದ ಭಾರತೀಯ ಸೇನೆ ಸೇರಲು, ಕ್ರೀಡಾ ಕ್ಷೇತ್ರಕ್ಕೆ ಮೀಸಲಾದ ಹುದ್ದೆಗಳಿಗೆ ಸಹಾಯವಾಗಲಿದೆ. ಜೊತೆಗೆ ಕ್ರೀಡೆ ಯಾವುದೇ ಇರಲಿ ಶ್ರದ್ಧೆ, ಆಸಕ್ತಿ ಇಲ್ಲದಿದ್ದರೆ ಆಟವಾಡಿದರೂ ವ್ಯರ್ಥ ಎಂದರು.

ಜಿಲ್ಲಾ ಪತ್ರ ಬರಹಗಾರ ಜಗದೀಶ್ ಮಾತನಾಡಿದರು. ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನವನ್ನು ಬ್ಲಾಕ್ ಈಗಲ್ಸ್ ತಂಡ, ದ್ವಿತೀಯ ಬಹುಮಾನವನ್ನು ಅಭಿ ವಾರಿಯರ್ಸ್, ತೃತೀಯ ಬಹುಮಾನವನ್ನು ಟ್ರೋಫಿ ಫೈಟರ್ಸ್ ತಂಡ ಪಡೆಯಿತು. ಈ ವೇಳೆ ಗ್ರಾಮದ ಯಜಮಾನರಾದ ನಂಜೇಗೌಡ, ಟೂರ್ನಿ ಆಯೋಜಕ ಆದರ್ಶ್ ಹಾಗೂ ಹಲವರಿದ್ದರು.

ಮಾದಾಪುರದಲ್ಲಿ ವಿಜೃಂಭಣೆಯ ಮರುಡೇಶ್ವರಸ್ವಾಮಿ ರಥೋತ್ಸವ



ತಿ.ನರಸೀಪುರ, ಡಿ.18– ತಾಲೂಕಿನ ಮಾದಾಪುರ ಗ್ರಾಮದಲ್ಲಿ ಷಷ್ಠಿ ಅಂಗವಾಗಿ ಸೋಮವಾರ ಮರುಡೇಶ್ವರಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಗ್ರಾಮದ ಶ್ರೀಮರುಡೇಶ್ವರಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಮುಂಜಾನೆ ಪ್ರಧಾನ ಅರ್ಚಕರಾದ ಮಂಜು ನೇತೃತ್ವದಲ್ಲಿ ಸ್ವಾಮಿ ಅವರಿಗೆ ರುದ್ರಾಭಿಷೇಕ ನೆರವೇರಿಸಲಾಯಿತು. ಅಲ್ಲದೇ ಬಗೆ ಬಗೆಯ ಹೂಗಳಿಂದ ಅಲಂಕರಿಸಿ ಬಿಲ್ವಾರ್ಚನೆ ಹಾಗೂ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಳಿಕ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು.

ನಂತರ ಗಣೇಶ, ಸುಬ್ರಹ್ಮಣ್ಯ ಹಾಗೂ ಮರುಡೇಶ್ವರ ಸ್ವಾಮಿಯ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಬಳಿಕ ಉತ್ಸವ ಮೂರ್ತಿಯನ್ನು ದೇವಾಲಯದ ಆವರಣದಲ್ಲಿ ಸಿಂಗರಿಸಿದ ರಥೋತ್ಸವದಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ರಥೋತ್ಸವಕ್ಕೆ ಉಪ ತಹಸೀಲ್ದಾರ್, ಗ್ರಾಮದ ಮುಖಂಡರು ಚಾಲನೆ ನೀಡಿದರು. ಬಳಿಕ ರಥ ದೇವಾಲಯದ ಸುತ್ತ ಪ್ರದಕ್ಷಿಣೆ ಬಂದು ಸ್ವಸ್ಥಾನ ಸೇರಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ರಥಕ್ಕೆ ಹಣ್ಣು ಜವನ ಎಸೆದರು. ಬಳಿಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ರಥೋತ್ಸವದಲ್ಲಿ ಚನ್ನಬಸವಯ್ಯಹುಂಡಿ, ನಿಲಸೋಗೆ, ದೊಡ್ಡನಹುಂಡಿ, ಶಂಭೂದೇವನಪುರ, ಜಾಲಹಳ್ಳಿ, ಕಟ್ಟಾಪುರ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಅಲ್ಲದೇ ಮಾದಾಪುರ ಗ್ರಾಮಸ್ಥರು ಉಪವಾಸವಿದ್ದು, ಬೆಳಗ್ಗೆಯಿಂದಲೇ ಹುತ್ತಕ್ಕೆ ಹಾಲೆರೆದು ದೇವರ ದರ್ಶನ ಪಡೆದರು. ದೇವಾಲಯದ ವತಿಯಿಂದ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಹನುಮ ಜಯಂತಿ ಅಂಗವಾಗಿ ಡಿ.24ರಿಂದ ನಮ್ಮೂರ ಹನುಮೋತ್ಸವ



ಡಿ.30 ರಂದು ಬೃಹತ್ ಶೋಭಾಯಾತ್ರೆ

ಕೆ.ಆರ್.ನಗರ: ಹನುಮ ಜಯಂತಿ ಅಂಗವಾಗಿ ಡಿ.24ರಿಂದ 30ರವರೆಗೆ ಪಟ್ಟಣದಲ್ಲಿ ನಮ್ಮೂರ ಹನುಮೋತ್ಸವ ನಡೆಯಲಿದೆ ಎಂದು ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾಧವ್ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ನಡೆದ ಹನುಮ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಡಿ.30ರಂದು ಬೆಳಗ್ಗೆ 10 ಗಂಟೆಗೆ ಆಂಜನೇಯಸ್ವಾಮಿ ದೇವಾಲಯದಿಂದ ಬೃಹತ್ ಶೋಭಾಯಾತ್ರೆ ನಡೆಯಲಿದೆ. ಪ್ರಮುಖ ಬೀದಿಗಳಲ್ಲಿ ಉತ್ಸವ ಮೂರ್ತಿಯೊಂದಿಗೆ ನಡೆಯುವ ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾ ತಂಡಗಳು, ತಮಟೆ, ಮಂಗಳವಾದ್ಯ ಮತ್ತು ಹನುಮನ ಭಕ್ತ ಸಮೂಹ ಮೆರುಗು ನೀಡಲಿವೆ ಎಂದರು.

ಡಿ.24ರಿಂದ 30ರವರೆಗೆ ನಿತ್ಯ ಬೆಳಗ್ಗೆ ಮತ್ತು ಸಂಜೆ ಆಂಜನೇಯಸ್ವಾಮಿಗೆ ವಿಶೇಷ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿವೆ. ಜಯಂತಿ ಅಂಗವಾಗಿ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ, ಲಕ್ಷ ದೀಪೋತ್ಸವ, ಜಾನಪದ ಮತ್ತು ಭಕ್ತಿಗೀತೆಗಳ ಗಾಯನ, ಡ್ಯಾನ್ಸ್ ಡ್ಯಾನ್ಸ್, ರಸಮಂಜರಿ, ಪಲ್ಲಕ್ಕಿ ಉತ್ಸವ ಹಾಗೂ ಸಿಡಿಮದ್ದುಗಳ ಪ್ರದರ್ಶನ ನಡೆಯಲಿವೆ ಎಂದರು.

ಸಭೆ ಅಧ್ಯಕ್ಷತೆ ವಹಿಸಿದ್ದ ಪೊಲೀಸ್ ನಿರೀಕ್ಷಕ ಪಿ.ಪಿ.ಸಂತೋಷ್ ಮಾತನಾಡಿ, ಪಟ್ಟಣದಲ್ಲಿ ನಡೆಯುವ ನಮ್ಮೂರ ಹನುಮೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು. ಕಾರ್ಯಕ್ರಮ ಶಾಂತಿಯುತ ಮತ್ತು ಸೌಹಾರ್ದಯುತವಾಗಿ ನಡೆಯುವಂತೆ ಆಯೋಜಕರು ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಸ್ಲಿಂ ಮುಖಂಡ ಅಪ್ಸರ್ ಮಾತನಾಡಿ, ಸೂಫಿಖಾನ್ ಸಂಘದಿಂದ ಹನುಮ ಜಯಂತಿ ಪ್ರಯುಕ್ತ ಪ್ರಸಾದದ ರೂಪದಲ್ಲಿ 3 ಸಾವಿರ ಲಡ್ಡುಗಳನ್ನು ಹನುಮನ ಭಕ್ತರಿಗೆ ಹಂಚಲಾಗುತ್ತದೆ ಎಂದರು. ಕಾಂಗ್ರೆಸ್ ಮುಖಂಡ ಕೃಷ್ಣಮೂರ್ತಿ, ಜಾಮಿಯಾ ಮಸೀದಿ ಸಮಿತಿ ಅಧ್ಯಕ್ಷ ಅಪ್ಸರ್ ಬಾಬು ಮಾತನಾಡಿದರು.

ಸಭೆಯಲ್ಲಿ ಮಾರುತಿ ಯುವಕರ ಸಂಘದ ಪ್ರಧಾನ ಕಾರ್ಯದರ್ಶಿ ಮೆಕ್ಯಾನಿಕ್ ವಿನಯ್, ಖಜಾಂಚಿ ಕೆ.ಎಸ್.ಕೆಂಚಿ ಮಂಜುನಾಥ್, ಪುರಸಭೆ ಸದಸ್ಯ ಶಂಕರ್, ಮಾಜಿ ಸದಸ್ಯ ಕೆ.ವಿನಯ್, ಮುಖಂಡರಾದ ರಾಕೇಶ್, ಧನುಷ್, ಎಸ್.ದರ್ಶನ್, ಎನ್.ಆದರ್ಶ, ಉದಯಗೌಡ, ಯತೀಶ್, ಪೊಲೀಸ್ ಉಪನಿರೀಕ್ಷಕರಾದ ಆರ್.ಧನರಾಜ್, ಆರ್.ಸ್ವಾಮಿಗೌಡ ಇತರರಿದ್ದರು.

ನಿವೃತ್ತ ನೌಕರರ ಸಂಘದ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಿ

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ ಸಲಹೆ

ತಿ.ನರಸೀಪುರ ಡಿ.18– ಸರ್ಕಾರಿ ನೌಕರರ ಸಂಘದ ಕಟ್ಟಡದ ಹಿಂಭಾಗವಿರುವ ಖಾಲಿ ನಿವೇಶನವನ್ನು ನಿವೃತ್ತ ನೌಕರರ ಸಂಘಕ್ಕೆ ಕಾನೂನುಬದ್ಧವಾಗಿ ನೋಂದಣಿ ಮಾಡಿಸಿಕೊಂಡು, ಸರ್ಕಾರ ಮತ್ತು ಜನಪ್ರತಿನಿಧಿಗಳ ನೆರವು ಪಡೆದು ಸಂಘದ ಚಟುವಟಿಕೆಗಳಿಗೆ ಅಗತ್ಯವಾಗಿರುವ ಕಟ್ಟಡ ನಿರ್ಮಿಸಿಕೊಳ್ಳಲು ಯೋಜನೆ ರೂಪಿಸಬೇಕು ಎಂದು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ನಿವೃತ್ತ ನೌಕರರಿಗೆ ಸಲಹೆ ನೀಡಿದರು.



ಪಟ್ಟಣದ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ನಡೆದ ನಿವೃತ್ತ ನೌಕರರ ಸಂಘದ ದಿನಾಚರಣೆಯಲ್ಲಿ ಮಾತನಾಡಿದ ಅವರು, ಯಾವುದೇ ಸಂಘ ಸಂಸ್ಥೆಗಳ ಕಾರ್ಯ ನಿರ್ವಹಣೆ ಹಾಗೂ ಚಟುವಟಿಕೆಗಳಿಗೆ ಕಟ್ಟಡ ಅಗತ್ಯವಿರುವುದರಿಂದ ತಾಲೂಕಿನಲ್ಲಿ ಕ್ರಿಯಾಶೀಲ ಸಂಘ ಕಟ್ಟಿಕೊಂಡಿರುವ ನಿವೃತ್ತ ನೌಕರರು ಖಾಲಿ ನಿವೇಶನ ನೋಂದಣಿ ಮತ್ತು ಕಟ್ಟಡ ನಿರ್ಮಾಣಕ್ಕೆ ಅನುದಾನ ಕ್ರೋಢೀಕರಿಸುವತ್ತ ಗಮನ ನೀಡಬೇಕು ಎಂದರು.

ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ. ಮಾದಪ್ಪ ಮಾತನಾಡಿ, ಪ್ರತಿಯೊಬ್ಬರೂ ಕ್ರಿಯಾಶೀಲವಾಗಿರಲು ಸಂಘಟನೆ ಸಹಕಾರಿಯಾಗಿದೆ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಬಳಿಕವೂ ಸಂಘ ಕಟ್ಟಿಕೊಂಡು ಇಳಿ ವಯಸ್ಸಿನಲ್ಲೂ ಕ್ರಿಯಾಶೀಲತೆ ಮೆರೆಯುತ್ತಿರುವ ಹಿರಿಯರ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ರೀಡಾಕೂಟದಲ್ಲಿ ವಿಜೇತರಾದ ನಿವೃತ್ತರಿಗೆ ಬಹುಮಾನ ವಿತರಿಸಲಾಯಿತು. ನಿವೃತ್ತ ನೌಕರರ ಸಂಘಕ್ಕೆ ನಿವೇಶನ ಕಲ್ಪಿಸಲು ಸಹಕಾರ ನೀಡಿರುವ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ ಸೇರಿದಂತೆ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಹಾಗೂ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ನೌಕರರಾದ ಚನ್ನರಾಜು, ಮಹದೇವಪ್ಪ ಮತ್ತು ಮಲ್ಲೇಶಪ್ಪ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಂ.ಮಹದೇವಯ್ಯ ಅಧ್ಯಕ್ಷತೆ ವಹಿಸಿದ್ದರು. ಕೆನರಾ ಬ್ಯಾಂಕ್ ಮ್ಯಾನೇಜರ್ ರಮೇಶ್‌ರಾವ್, ಸಂಘದ ಖಜಾಂಚಿ ಜೆ. ಸಿದ್ದೇಗೌಡ, ಉಪಾಧ್ಯಕ್ಷರಾದ ಎಂ.ಆರ್. ಪ್ರಭಾಮಣಿ, ಎಸ್.ಶಿವಣ್ಣ ಸಹ ಕಾರ್ಯದರ್ಶಿ ಎಂ.ಗೋವಿಂದರಾಜು, ಸಂಘಟನಾ ಕಾರ್ಯದರ್ಶಿ ಕೆ.ವೀರಯ್ಯ, ಕಾನೂನು ಸಲಹೆಗಾರ ಪುಟ್ಟಣ್ಣ, ಲೆಕ್ಕ ಪರಿಶೋಧಕ ಕೆ.ಕೆಂಚಪ್ಪ, ನಿರ್ದೇಶಕರಾದ ಟಿ.ಕೆ.ಬಸವರಾಜು, ಬೋರಯ್ಯ, ಸಿ.ಲಿಂಗಯ್ಯ, ಡಿ.ಎಂ.ಸಿದ್ದಯ್ಯ, ಎಂ.ಜವನಯ್ಯ, ಕೆ.ಕಲ್ಲಯ್ಯ, ವಿ.ಮುತ್ತುರಾಜು, ತಮ್ಮಯ್ಯಶೆಟ್ಟಿ, ಡಿ.ರಂಗದಾಸಯ್ಯ ಹಾಗೂ ಸದಸ್ಯರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಫೈಟ್ ಕ್ಲಬ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾಯಾ ನಗರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಜರುಗಾ ಹುಷಾರುಗಾ(ತೆ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋರ್ಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಮೈಸೂರು–ಹಾಸನ ಗಡಿಭಾಗ ರಾಮನಾಥಪುರದಲ್ಲಿ ಷಷ್ಠಿ ಅಂಗವಾಗಿ ಶ್ರೀಸುಬ್ರಹ್ಮಣ್ಯ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಭಕ್ತರು ಶ್ರದ್ಧಾಭಕ್ತಿಯಿಂದ ರಥ ಎಳೆದು ಹಣ್ಣು–ಜವನ ಎಸೆದು ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿದರು. ಅಲ್ಲದೇ ಭಕ್ತರಿಗೆ ಅನ್ನದಾನ ಏರ್ಪಡಿಸಲಾಗಿತ್ತು. ಈ ವೇಳೆ ಶಾಸಕ ಎ.ಮಂಜು ದೇವರ ದರ್ಶನ ಪಡೆದರು.

ತೆರಿಗೆ ವಸೂಲಾತಿ ಮಾಸಾಚರಣೆಗೆ ಚಾಲನೆ



ಹುಣಸೂರು: ತಾಲೂಕಿನ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 11 ಗ್ರಾಮಗಳಲ್ಲಿ ತೆರಿಗೆ ವಸೂಲಾತಿ ಮಾಸಾಚರಣೆಗೆ ಗ್ರಾಪಂ ಅಧ್ಯಕ್ಷ ಗೋವಿಂದ ನಾಯಕ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಾಲ ಕಾಲಕ್ಕೆ ತೆರಿಗೆ ಪಾವತಿಸಿದರೆ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಶಕ್ತಿ ಬರಲಿದೆ. ಹೀಗಾಗಿ ಗ್ರಾಮಸ್ಥರು ಪಂಚಾಯಿತಿಯೊಂದಿಗೆ ಸಹಕರಿಸಬೇಕು ಎಂದರು. ಈ ವೇಳೆ ಗ್ರಾಪಂ ಸಿಬ್ಬಂದಿ, ನೀರುಗಂಟಿಗಳು ರೈತರಿಗೆ ಗುಲಾಬಿ ಹೂ ಕೊಡುವ ಮೂಲಕ ತೆರಿಗೆ ವಸೂಲಾತಿಗೆ ಪ್ರೋತ್ಸಾಹ ನೀಡಿದರು.

ಸ್ವಯಂ ಜಾಗೃತಿಯಿಂದ ಮಾತ್ರ ಹೆಣ್ಣು ಭ್ರೂಣ ಹತ್ಯೆ ತಡೆಯಲು ಸಾಧ್ಯ

ಬಾಲಕಿಶೋರ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಬಾಲಪ್ರತಿಭೆಗಳಾದ ಕುಮಾರಿ ಮಹತಿ ವಿಜಯ್‌ಕುಮಾರ್, ತನ್ವಿ ಯೋಗೇಶ್ ಹಾಗೂ ನಿಯತಿ ವಿಜಯ್‌ಕುಮಾರ್‌ಗೆ ಬಾಲಕಿಶೋರಿ ಸಾಧನಾ ಪ್ರಶಸ್ತಿ ಪ್ರದಾನ ನೀಡಿ, ಪ್ರೋತ್ಸಾಹಿಸಲಾಯಿತು.

ಮೈಸೂರು,ಡಿ.18(ಎಸ್‌ಬಿಡಿ)– ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ತಡೆಯಲು ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ಈ ಬಗ್ಗೆ ಪ್ರತಿಯೊಬ್ಬರಲ್ಲೂ ಸ್ವಯಂ ಜಾಗೃತಿ ಅತ್ಯವಶ್ಯ ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಿಸಿದರು.

ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಕೃಷ್ಣಮೂರ್ತಿ ಪುರಂನ ನಮನ ಕಲಾಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ 'ಹೆಣ್ಣು ಭ್ರೂಣ ಹತ್ಯೆ– ಒಂದು ಚಿಂತನೆ; ಕೌಟುಂಬಿಕ, ಸಾಮಾಜಿಕ, ಶೈಕ್ಷಣಿಕ ಜವಾಬ್ದಾರಿಗಳು' ಹಾಗೂ 'ಬಾಲ ಕಿಶೋರಿ ಸಾಧನಾ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ಮಾತನಾಡಿದರು. ಹೆಣ್ಣು ಭ್ರೂಣ ಹತ್ಯೆ ನಾಗರಿಕ ಸಮಾಜ ತಲೆತಗ್ಗಿಸುವ ಪಾಪ ಕೃತ್ಯ. ಇದು ಮಂಡ್ಯ, ಮೈಸೂರು ಮಾತ್ರ ವಲ್ಲದೆ ದೇಶದೆಲ್ಲೆಡೆ ನಡೆಯುತ್ತಿದೆ. ಹೆಣ್ಣು ಭ್ರೂಣ ಹತ್ಯೆ ತಡೆಯುವುದು ಸರ್ಕಾರದ ಜವಾಬ್ದಾರಿ ಮಾತ್ರ ಎನ್ನುವುದು ಸರಿಯಲ್ಲ. ಪ್ರತಿಯೊಬ್ಬರಲ್ಲೂ ನಾಗರಿಕ ಪ್ರಜ್ಞೆ ಜಾಗೃತವಾಗಬೇಕು. ಏನಾದರೂ ಆಗಲಿ ನಮಗೇನು ಎಂಬ ಮನೋಧೋರಣೆ ಹೊಂದಬಾರದು. ಇಂತಹ ಕೃತ್ಯಗಳು ಗಮನಕ್ಕೆ ಬಂದಾಗ ಕನಿಷ್ಠ ಸಂಬಂಧ ಪಟ್ಟ ಅಧಿಕಾರಿಗಳಿಗಾದರೂ ಮಾಹಿತಿ ನೀಡುವ ಜವಾಬ್ದಾರಿ ನಿರ್ವಹಿಸಬೇಕು ಎಂದು ಹೇಳಿದರು. ಭಾರತದಲ್ಲಿ ಹೆಣ್ಣಿಗೆ ಪೂಜ್ಯನೀಯ ಸ್ಥಾನವಿದೆ. ಹೆಣ್ಣನ್ನು ಜಗನ್ಮಾತೆ ಎಂದು ಗೌರವಿಸಲಾಗುತ್ತದೆ. ಎಲ್ಲಾ ಕ್ಷೇತ್ರಗಳಲ್ಲೂ ಹೆಣ್ಣು ಮಕ್ಕಳು ಸಾಧನೆ ಮೆರೆದಿದ್ದಾರೆ. ಬಹುತೇಕ ಕುಟುಂಬಗಳಲ್ಲಿ ಮಹಿಳೆಯರೇ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ. ಆದರೂ ಹೆಣ್ಣು ಮಕ್ಕಳೆಂ ದರೆ ಯಾಕಿಷ್ಟು ಅಸಡ್ಡೆ?. ಪೂಜ್ಯನೀಯ ಸ್ಥಾನ ನೀಡಿರುವ ಮಹಿಳೆಯರನ್ನು ಈ ರೀತಿ ನಡೆಸಿಕೊಳ್ಳುವುದು ನಾಚಿಕೆಗೇಡಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. ಹೆಣ್ಣು ಭ್ರೂಣ ಹತ್ಯೆಯಂತಹ ಘೋರ ಅಪರಾಧ ಮತ್ತೊಂದಿಲ್ಲ. ಈ ಕೃತ್ಯ ನಿಲ್ಲದಿದ್ದರೆ ಸಮಾಜದಲ್ಲಿ ಅತ್ಯಂತ ಘೋರ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಎಲ್ಲಾ ಆಸ್ಪತ್ರೆಗಳಲ್ಲೂ ಭ್ರೂಣ ಪತ್ತೆ ಬಗ್ಗೆ ಎಚ್ಚರಿಕೆ ಫಲಕ ಅಳ ವಡಿಸಿರುತ್ತಾರೆ. ಆದರೆ ಅಂತಹ ಆಸ್ಪತ್ರೆಗಳಲ್ಲೂ ಭ್ರೂಣ ಹತ್ಯೆ ನಡೆಯುತ್ತವೆ. ಇದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರಗಳು ಪರಿಣಾಮಕಾರಿ ಕ್ರಮ ವಹಿಸಬೇಕು. ಜೊತೆಗೆ ಹೆಣ್ಣಿನ ರಕ್ಷಣೆಗೆ ನಾಗರಿಕ ಸಮಾಜವೂ ಕೈ ಜೋಡಿಸಬೇಕು. ಎಲ್ಲರೂ ಸ್ವಯಂ ಜಾಗೃತರಾಗಿ ಈ ಪಾಪಕೃತ್ಯವನ್ನು ತಡೆಯಬೇಕು ಎಂದರು.

ಕಠಿಣಾತಿಕಠಿಣ ಶಿಕ್ಷೆಯಾಗಲಿ: ಹೆಣ್ಣು ಭ್ರೂಣ ಹತ್ಯೆ ಕುರಿತು ಮುಖ್ಯಭಾಷಣ ಮಾಡಿದ ಕವಿ ಜಯಪ್ಪ ಹೊನ್ನಾಳಿ, ತೋರಿಕೆಗೆ ಪೂಜ್ಯನೀಯ ಸ್ಥಾನಮಾನ ನೀಡಿ ಹೆಣ್ಣನ್ನು ನಿರಂತರವಾಗಿ ಹತ್ಯೆ ಮಾಡುತ್ತಿರುವುದು ದುರ್ದೈವದ ಸಂಗತಿ. ಹೆಣ್ಣಿನ ವಿಚಾರದಲ್ಲಿ ಈ ರೀತಿಯ ಬೂಟಾಟಿಕೆ ಸರಿಯಲ್ಲ. ಜನ್ಮ ನೀಡಿದ ಹೆಣ್ಣನ್ನೇ ಹತ್ಯೆ ಮಾಡುವುದು ಯಾವ ನ್ಯಾಯ?. ಮಹಿಳೆಯರೇ ಹೆಣ್ಣು ಮಕ್ಕಳು ಬೇಡ ಎನ್ನುತ್ತಿರುವುದು ವಿಷಾದನೀಯ. ಜೀವ ಉಳಿಸುವ ದೇವರಿಗೆ ಸಮಾನರಾದ ವೈದ್ಯರ ಕೈಯಿಂದಲೇ ಈ ಪಾಪ ಕೃತ್ಯ ನಡೆಯುವುದು ಎಷ್ಟು ಸರಿ?. ಗಂಡು–ಹೆಣ್ಣಿನ ಅನುಪಾತ ಅನುಪಾತ ಮತ್ತಷ್ಟು ಕ್ಷೀಣಿಸಿದರೆ ಸಮಾಜದಲ್ಲಿ ಉಂಟಾಗಬಹುದಾದ ಕೆಟ್ಟ ಪರಿಸ್ಥಿತಿ ಎಲ್ಲರ ಅರಿವಿನಲ್ಲಿರಬೇಕು. ಹೆಣ್ಣು ಭ್ರೂಣ ಹತ್ಯೆ ಮಾಡುವ ಕ್ರಿಮಿಗಳಿಗೆ ಜೀವಾವಧಿ ಶಿಕ್ಷೆ, ಭಾರಿ ಪ್ರಮಾಣದ ದಂಡ ವಿಧಿಸಿದರೆ ಈ ದುಷ್ಕೃತ್ಯಗಳನ್ನು ತಡೆಯಬಹುದು ಎಂದು ಅಭಿಪ್ರಾಯಿಸಿದರು.

> “ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಹೆಣ್ಣು ಮಕ್ಕಳಿಗೆ ತುಂಬಾ ಕಷ್ಟ ಕೊಡುವುದನ್ನು ನೋಡಿ ಬೇಜಾರಾಗುತ್ತದೆ. ನಾನು ಮತ್ತು ನನ್ನ ತಂಗಿ ಚೆನ್ನಾಗಿ ಓದುತ್ತಿದ್ದೇವೆ. ಗಂಡು ಮಕ್ಕಳಂತೆ ಎಲ್ಲದರಲ್ಲೂ ಭಾಗವಹಿಸುತ್ತೇವೆ. ಅಪ್ಪ–ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ. ದಯವಿಟ್ಟು ಹೆಣ್ಣು ಮಕ್ಕಳನ್ನು ದೂರ ಮಾಡಬೇಡಿ.
> –ನಿಯತಿ ವಿಜಯ್‌ಕುಮಾರ್(9 ವರ್ಷ)

ಬಾಲಕಿಶೋರಿ ಪ್ರಶಸ್ತಿ: ಕಾರ್ಯಕ್ರಮದಲ್ಲಿ ಬಾಲಪ್ರತಿಭೆಗಳಾದ ಕುಮಾರಿ ನಿಯತಿ ವಿಜಯ್‌ಕುಮಾರ್(ಸಿನಿಮಾ), ಕುಮಾರಿ ತನ್ವಿ ಯೋಗೇಶ್(ಬಹುಮುಖ ಪ್ರತಿಭೆ) ಹಾಗೂ ಕುಮಾರಿ ಮಹತಿ ವಿಜಯ್ ಕುಮಾರ್(ಕಲಾಕ್ಷೇತ್ರ)ಗೆ 'ಬಾಲಕಿಶೋರಿ' ಸಾಧನಾ ಪ್ರಶಸ್ತಿ ಪ್ರದಾನ ಮಾಡಿ, ಪ್ರೋತ್ಸಾಹಿಸಲಾಯಿತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಖಾಸಗಿ ಆಸ್ಪತ್ರೆ ಸಿಇಒ ಪಿ.ಪುಷ್ಪಲತಾ, ನಗರ ಪಾಲಿಕೆ ಮಾಜಿ ಸದಸ್ಯೆ ಶೋಭಾ ಸುನೀಲ್, ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.18– ಡಿ.20 ರಂದು ಬೆಳಗ್ಗೆ 10 ರಿಂದ ಸಂಜೆ 5.30 ಘಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ **ರಾಜೀವನಗರ ಕೇಂದ್ರದ ವ್ಯಾಪ್ತಿಯಲ್ಲಿನ** ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ RTO-55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಎಫ್.ಟಿ.ಎಸ್ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿನ ಸುಭಾಷ್‌ನಗರ, ಕೆಸರೆ 1ನೇ, 2ನೇ ಹಾಗೂ 3ನೇ ಹಂತ, ನರಾ ಮೊಹಲ್ಲಾ, ಗಾಂಧಿನಗರ, ಮೊಹಮ್ಮದ್ ಸೇಠ್ ಬ್ಲಾಕ್, ವೀರನಗೆರೆ, ಉದಯಗಿರಿ, ಬನ್ನಿಮಂಟಪ, ನೆಲ್ಸನ್ ಮಂಡೇಲಾ ರಸ್ತೆ, ಎಲ್.ಐ.ಸಿ, ಹೈವೆ ವೃತ್ತ, ತಿಲಕ್‌ನಗರ, ಉಮ್ಮರ್ ಖಯ್ಯೂಂ ರಸ್ತೆ, ನ್ಯೂ ಸಯ್ಯಾಜಿ ರಾವ್ ರಸ್ತೆ, ರಾಜೇಂದ್ರನಗರ, ಮೇದರ್ ಬ್ಲಾಕ್, ಬಂಬೂಬಜಾರ್, ಲಯನ್ಸ್ ಕ್ಲಬ್, ಫರೂಕೀಯಾ ಡೆಂಟಲ್ ಕಾಲೇಜು, ಜೈಲ್ ವಸತಿ ಗೃಹ, ಐ.ಟಿ.ಐ ಕಾಲೇಜು, ಭಾವನಾ ಮಾರ್ಬಲ್ ರಸ್ತೆ, 'ಎ' ಬಡಾವಣೆ, ಬಿ.ಬಿ ಕೇರಿ, ಬಿ.ಟಿ ಮಿಲ್ ರಸ್ತೆ ಈದ್ಗಾ ಮೈದಾನ, ಕಬೀರ್ ಮಠ, ಆನೆಗುಂದಿ ರಸ್ತೆ, ಹನುಮಂತನಗರ, ಕೆ.ಎಸ್.ಆರ್.ಟಿ.ಸಿ, ಎಸ್.ಎಸ್ ನಗರ, ಕಾವೇರಿ ನಗರ, ಸಿದ್ದಿಖಿ ನಗರ, ಬನ್ನಿಮಂಟಪ 'ಸಿ' ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

ದೇವನೂರು ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿನ ಬಿ.ಡಿ ಕಾಲೋನಿ, ಅಜೀಜ್ ಸೇಠ್ ನಗರ, 320 ಮನೆ, ಕೆಸರಿ ಕಾಲೋನಿ, ಮಹದೇವಪುರ ಮುಖ್ಯ ರಸ್ತೆ, ಶಕ್ತಿನಗರ, ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿ, ಅಕ್ಷಯ ಭಂಡಾರ್, ರಮ್ಮನಹಳ್ಳಿ, ಕಾಳಿಸಿದ್ದನ ಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರ ಹುಂಡಿ, ನೆಹರು ನಗರ, ಸಾತಗಳ್ಳಿ ಗ್ರಾಮ, ಡಿ.ಟಿ.ಎಸ್.ರಾವ್ ನಗರ, ವಿಟಿಯೂ ಕಾಲೇಜು ಎದುರು, ಸನ್ ಫ್ಯೂರ್ ಬಡಾವಣೆ, ಸಾತಗಳ್ಳಿ ಬಿ ಜೋನ್, ವಿಟಿಯೂ ಕಾಲೇಜು, ಭಾರತ್ ನಗರ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ದೂರ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿನ ದೂರ, ತಳೂರು, ಮುರುಡಗಳ್ಳಿ, ದೊಡ್ಡ ಕಾಟೂರು, ಚಿಕ್ಕ ಕಾಟೂರು, ಸಿಂಧುವಳ್ಳಿ ಗ್ರಾಮ, ನಂಜುಂಡೇಶ್ವರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ನಂಜನಗೂಡು ವಿಭಾಗ ವ್ಯಾಪ್ತಿಯಲ್ಲಿನ ಹಳ್ಳಿಕೆರೆಹುಂಡಿ, ಬಿದರಗೂಡು, ಮೂಡಲಹುಂಡಿ (ಕಾಟೂರು) ನೀರು ಸರಬರಾಜು ಕೇಂದ್ರಗಳು.

ಇಲವಾಲ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿನ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಇಲವಾಲ, ಹಳೆ–ಕಾಮನಕೊಪ್ಪಲು, ಮೈದನಹಳ್ಳಿ, ಮೇಗಳಾಪುರ, ಭದ್ರೇಗೌಡನಕೊಪ್ಪಲು, ಚಿಕ್ಕೆಗೌಡನಕೊಪ್ಪಲು, ಹೊಸಕೋಟೆ, ಸರಕಟ್ಟೆ ಯಾಚೇಗೌಡನಹಳ್ಳಿ, ದಡಕನಹಳ್ಳಿ, ರಾಮೇನಹಳ್ಳಿ, ಯಡಹಳ್ಳಿ, ಕಲ್ಲೂರು, ನಾಗನಹಳ್ಳಿ, ಗುಂಗ್ರಾಲ್‌ಛತ್ರ, ಛತ್ರದ ಕೊಪ್ಪಲು, ರಟ್ನಳ್ಳಿ, ವೀರಪ್ಪನಕೊಪ್ಪಲು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ.

ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವ ಬಗ್ಗೆ ಚರ್ಚೆಯೇ ಆಗಿಲ್ಲ

ಗೃಹಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ



ತುಮಕೂರು, ಡಿ.18– ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಸುಲ್ತಾನ್ ಹೆಸರಿಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವುದೇ ಚರ್ಚೆ ನಡೆದಿಲ್ಲ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾಲ್ಕು ವಿಮಾನ ನಿಲ್ದಾಣಗಳಿಗೆ ನಾಮಕರಣ ಸಂಬಂಧ ಸರ್ಕಾರದಲ್ಲಿ ಅನುಮೋದನೆಯಾಗಿದ್ದು, ಅದೂ ಕೂಡ ಸದನಕ್ಕೆ ಬರಬೇಕು. ಇಂತಹ ಯಾವುದಾದರೂ ಪ್ರಸ್ತಾಪವಿದ್ದರೆ ಸದನಕ್ಕೆ ತರುತ್ತೇವೆ. ಮಸೂದೆಯ ರೂಪದಲ್ಲಿ ತಂದು ಈ ಬಿಲ್ ಪಾಸ್ ಆಗಬೇಕು. ಆ ವೇಳೆ ಪರ ಅಥವಾ ವಿರೋಧ ಮಾತನಾಡಬಹುದು ಎಂದರು. ಜಾತಿ ಜನಗಣತಿಗೆ ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಇದು ಒಳ್ಳೆಯ ಬೆಳವಣಿಗೆ ಅಲ್ಲ. ಜಾತಿ ಜನಗಣತಿ ವರದಿಯಲ್ಲಿ ಏನಿದೆ ಎನ್ನುವುದೇ ಗೊತ್ತಿಲ್ಲ. ಯಾವ ಜಾತಿಯವರು ಎಷ್ಟಿದ್ದಾರೆ, ಯಾವ ಜಾತಿಯವರು ಕಡಿಮೆ ಇದ್ದಾರೆ ಎಂಬ ಅಂಕಿಅಂಶವನ್ನು ಯಾರಾದರೂ ಹೇಳಿದ್ದಾರಾ?. ನಾವು 170 ಕೋಟಿ ಖರ್ಚು ಮಾಡಿ ಒಂದು ಸಮೀಕ್ಷೆ ಮಾಡಿಸಿದ್ದೇವೆ. ಆ ಸಮೀಕ್ಷೆ ಹೊರಗಡೆ ಬರಬೇಕಲ್ಲವೇ ಎಂದು ಹೇಳಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ ತಡೆಯುವ ನಿಟ್ಟಿನಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಪತ್ತೆ ಮಾಡಿ, ಸೂಕ್ತ ಕ್ರಮಕೈಗೊಳ್ಳಲಾಗುತ್ತದೆ. ಈ ಕಾರ್ಯವನ್ನು ಪೊಲೀಸ್ ಇಲಾಖೆ ಅಥವಾ ಲೋಕೋಪಯೋಗಿ ಇಲಾಖೆ ಕಡೆಯಿಂದ ಮಾಡಬೇಕಾ ಎಂಬುದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ತುಮಕೂರು, ಮೈಸೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ಹೆಚ್ಚಾಗಿ, ಹಲವರು ಸಾವನ್ನಪ್ಪಿದ್ದಾರೆ. ಈ ಬಗ್ಗೆ ಆಂತರಿಕ ಭದ್ರತಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದರಿಂದ ಎಡಿಜಿಪಿ ಅವರೇ ಸ್ಥಳಕ್ಕೆ ಭೇಟಿ ನೀಡಿ ಅಪಘಾತ ತಡೆಯಲು ಕ್ರಮ ವಹಿಸಿದ ನಂತರ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ ಎಂದು ತಿಳಿಸಿದರು.

ಇಂದು ಸಭೆ

ಮೈಸೂರು,ಡಿ.18– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2024ರ ಜ.1 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಅಂಗವಾಗಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ 11.30ಕ್ಕೆ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂದೂಡಿಕೆ

ಮೈಸೂರು,ಡಿ.18– ಮೈಸೂರು ಜಿಲ್ಲೆ ನಂಜನಗೂಡು ನಗರಸಭೆ ವ್ಯಾಪ್ತಿಯ ವಾರ್ಡ್ ನಂಬರ್ 20ರ ಉಪ ಚುನಾವಣೆ ಪ್ರಯುಕ್ತ ಡಿ.27 ರಂದು ಮತದಾನ ನಡೆಯಲಿದ್ದು, ಮತದಾನದ ದಿನದಂದು ಮತದಾನ ಕಾರ್ಯವನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ಮೈಸೂರು ಜಿಲ್ಲೆ ನಗರಸಭೆ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ರೀತಿಯ ಸಂತೆ ಜಾತ್ರೆ ಉತ್ಸವಗಳನ್ನು ಮುಂದೂಡುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಆದೇಶ ಹೊರಡಿಸಿರುತ್ತಾರೆ.

ಪೂರ್ವಭಾವಿ ಸಭೆ

ಮೈಸೂರು,ಡಿ.18– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿ.29ರಂದು ವಿಶ್ವ ಮಾನವ ದಿನಾಚರಣೆ ಅಂಗವಾಗಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಳೆ (ಮಂಗಳವಾರ) ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಅಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲಾ ದೇಶಗಳಿಗಿಂತ ನಮ್ಮ ದೇಶದ ಪಿಂಚಣಿ ವ್ಯವಸ್ಥೆ ಚೆನ್ನಾಗಿದೆ

ಪಿಂಚಣಿದಾರರ ದಿನಾಚರಣೆಯಲ್ಲಿ ನಿವೃತ್ತ ಸಹ ನಿರ್ದೇಶಕಿ ಶ್ಲಾಘನೆ



ಮೈಸೂರು, ಡಿ.18(ಎಸ್‌ಪಿಎನ್)– ಸರ್ಕಾರಿ ನೌಕರರು ಸೇವೆಯಿಂದ ನಿವೃತ್ತಿಗೊಂಡ ನಂತರ ಸರ್ಕಾರದಿಂದ ನೀಡುವ ಪಿಂಚಣಿ ವ್ಯವಸ್ಥೆ (ಹಳೆಯ ಪಿಂಚಣಿ ಯೋಜನೆ) ಪ್ರಪಂಚದ ಬೇರೆ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಉತ್ತಮವಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಸಹ ನಿರ್ದೇಶಕಿ ಪಿ.ಶಾರದ ಅಭಿಪ್ರಾಯಪಟ್ಟರು.

ಮೈಸೂರು ಅರವಿಂದ ನಗರದಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ವಿಶ್ರಾಂತ ಉದ್ಯೋಗಿಗಳ ಸಂಘ (ಪೆನ್ಷನರ್ಸ್ ಡೇ)ದ ವತಿಯಿಂದ ನಡೆದ 'ಪಿಂಚಣಿದಾರರ ದಿನಾಚರಣೆ' ಕಾರ್ಯಕ್ರಮದಲ್ಲಿ ಹಿರಿಯ ನಿವೃತ್ತ ನೌಕರರನ್ನು ಸನ್ಮಾನಿಸಿ ಮಾತನಾಡಿದರು.

ಓರ್ವ ಸರ್ಕಾರಿ ನೌಕರ ತನ್ನ ಸುದೀರ್ಘ ಸೇವೆಯಿಂದ ನಿವೃತ್ತಿಗೊಂಡ ನಂತರ ತನ್ನ ಮಕ್ಕಳಿಗೆ ಉಳಿತಾಯದ ಹಣ ನೀಡುತ್ತೀರಿ. ಆದರೆ, ಇಂದಿನ ಮಕ್ಕಳಿಗೆ ಅದು ಯಾವುದಕ್ಕೂ ಸಮವಲ್ಲ. ಏಕೆಂದರೆ, ಆ ಉಳಿತಾಯ ಹಣ ಅವರ ಒಂದು ವರ್ಷದ ವೇತನಕ್ಕೆ ಸಮ. ಹಾಗಾಗಿ ನೌಕರರು, ನಿವೃತ್ತಿ ನಂತರವೂ ಪಿಂಚಣಿ ಹಣ ಉಳಿತಾಯ ಮಾಡುವ ಬದಲು ತಮ್ಮ ಹೆಂಡತಿಯೊಂದಿಗೆ ಸುಖಕರ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.

ಕೆಲ ಸರ್ಕಾರಿ ನೌಕರರು ಸೇವೆಯಲ್ಲಿ ಇರುವಾಗಲೂ ಮಕ್ಕಳ ಭವಿಷ್ಯಕ್ಕಾಗಿ ಬಡತನದ ಜೀವನ ನಡೆಸುತ್ತಾರೆ. ನಿವೃತ್ತಿ ನಂತರವೂ ಪಿಂಚಣಿ ಹಣವನ್ನು ಉಳಿಸಿ, ಮಕ್ಕಳಿಗೆ ಕೊಡುವ ಪ್ರಯತ್ನ ಮಾಡುತ್ತಾರೆ. ಇದರ ಬದಲು ನಿವೃತ್ತಿ ನಂತರವಾದರೂ ತಮ್ಮ ಕುಟುಂಬದೊಂದಿಗೆ ಸಂತೋಷಕರ ಜೀವನ ನಡೆಸಬೇಕು. ಆಸ್ಪತ್ರೆಯ ಖರ್ಚು–ವೆಚ್ಚಕ್ಕಾಗಿ ಸ್ವಲ್ಪ ಹಣ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಶ್ರದ್ಧಾಂಜಲಿ: ಈ ಸಂದರ್ಭದಲ್ಲಿ ಇತ್ತೀಚೆಗೆ ನಿಧನರಾದ ಎಂ.ವಿ.ರಾಜಶೇಖರ್, ಎಂ.ನರಸಶೆಟ್ಟಿ, ಬಿ.ಕೆ.ರಾಜಶೇಖರ್ ಗುಪ್ತ, ಮಾಲತಿ ಶ್ರೀನಿವಾಸ, ಬಿ.ಪಿ.ಸುಬ್ರಹ್ಮಣ್ಯ, ಶ್ರೀನಿವಾಸ, ಎಸ್.ಎಂ.ವಸಂತ, ಸಿ.ಆರ್.ಕೃಷ್ಣೇಗೌಡ, ಎಂ.ಜೆ.ಶಿವಕುಮಾರ್, ಎಸ್.ನಾಗಸುಂದರ, ಕೆ.ಆರ್.ವೆಂಕಟರಾಮಯ್ಯ, ವಿ.ಕೃಷ್ಣಮೂರ್ತಿ, ಕಂಬ, ಶಾರದಮ್ಮ ಅವರ ನಿಧನಕ್ಕೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸನ್ಮಾನ: ಹಿರಿಯ ಪಿಂಚಣಿದಾರರಾದ ಭಕ್ತವತ್ಸಲ, ತಿಬ್ಬಯ್ಯ, ಶ್ರೀನಿವಾಸಗೌಡ, ಎಸ್.ರಾಮನ, ನಂಜೇಗೌಡ, ಎನ್.ನಂಜುಂಡಶೆಟ್ಟಿ, ಎನ್.ನಾಗರಾಜು, ಎಂ.ಆರ್.ಜಯರಾಮೇಗೌಡ, ಎಂ.ಪಿ.ಸ್ವಾಮಿ, ರಾಧಕೃಷ್ಣ, ಹೆಚ್.ಆರ್.ನಾಗರಾಜು, ಜವರಯ್ಯ, ಶಿವಪ್ಪ, ಸಣ್ಣತಮ್ಮೇಗೌಡ, ರಾಮಕೃಷ್ಣ ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ನಿವೃತ್ತ ಸರ್ಕಾರಿ ಅಧೀನ ಕಾರ್ಯದರ್ಶಿ, ದಸರಾ ಆಚರಣಾ ಸಮಿತಿಯ ಮಾಜಿ ಅಧ್ಯಕ್ಷ ಡಾ.ಪಿ.ಬೋರೇಗೌಡ, ಸಂಸ್ಥಾಪನಾ ಅಧ್ಯಕ್ಷ ಎನ್. ಓಬಯ್ಯ, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್, ಉಪಾಧ್ಯಕ್ಷರಾದ ಮರಿಯಾದಾಸ್, ಕೆ.ಟಿ.ವೀರಪ್ಪ, ಕೆ.ಎಂ.ನಾಗರಾಜು, ಪ್ರಧಾನ ಕಾರ್ಯದರ್ಶಿ ಸಿ.ಚಿಕ್ಕಲಿಂಗಸ್ವಾಮಿ, ಖಜಾಂಚಿ ಬಿ.ಕೆ.ಶಿವಾನಂದ ಉಪಸ್ಥಿತರಿದ್ದರು. ಈ ವೇಳೆ ಸಂಘದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಸಿಂಗಾಪುರ್‌ನಲ್ಲೂ ಕೋವಿಡ್ ರೂಪಾಂತರಿ ಎಓ.1: ವಾರದಲ್ಲಿ 56,000 ಹೊಸ ಪ್ರಕರಣ: ಭಾರತ ಸೇರಿ 40 ದೇಶಗಳಲ್ಲಿ ಸೋಂಕು ಪತ್ತೆ!



ನವದೆಹಲಿ: ವಿಶ್ವಾದ್ಯಂತ ಮಾರಕ ಕೊರೋನಾ ವೈರಸ್‌ನ ಹೊಸ ರೂಪಾಂತರಿ ಎಓ.1 ವೈರಸ್ ಆತಂಕ ವ್ಯಾಪಕವಾಗುತ್ತಿದ್ದು, ಇದರ ಬೆನ್ನಲ್ಲೇ ಸಿಂಗಾಪುರದಲ್ಲಿ ಕೇವಲ ಒಂದು ವಾರದ ಅವಧಿಯಲ್ಲಿ 56,000 ಹೊಸ ಪ್ರಕರಣಗಳು ವರದಿಯಾಗಿರುವುದು ಜಾಗತಿಕ ಆತಂಕಕ್ಕೆ ಕಾರಣವಾಗಿದೆ.

ಈ ಹಿಂದೆ ಇಡೀ ಜಗತ್ತನ್ನು ಕಾಡಿದ್ದ ಮಹಾಮಾರಿ ಕೊರೊನಾ ವೈರಸ್ ಇದೀಗ ಮತ್ತೊಂದು ರೂಪಾಂತರ ತಾಳಿದ್ದು, ತವರು ಚೀನಾ ಸೇರಿದಂತೆ ಭಾರತ, ಸಿಂಗಾಪುರ ಸೇರಿ ಜಗತ್ತಿನ 40 ದೇಶಗಳಲ್ಲಿ ರೂಪಾಂತರಿ ವೈರಸ್ ಪತ್ತೆಯಾಗುವ ಮೂಲಕ ವ್ಯಾಪಕ ಭೀತಿ ಹುಟ್ಟಿಸಿದೆ. ಪ್ರಮುಖವಾಗಿ ಕೇರಳದಲ್ಲಿ ಸೋಂಕಿತ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವುದು, ತಮಿಳುನಾಡಿನಲ್ಲಿ ರೂಪಾಂತರಿ ಸೋಂಕಿತರ ಸಂಖ್ಯೆ 8ಕ್ಕೇರಿಕೆಯಾಗಿರುವುದು ಆತಂಕ ಹೆಚ್ಚಾಗುವಂತೆ ಮಾಡಿದೆ.

ಸಿಂಗಾಪುರದಲ್ಲಿ ವಾರದ ಅವಧಿಯಲ್ಲಿ 56,000 ಹೊಸ ಪ್ರಕರಣ: ಭಾರತದ ಪರಿಸ್ಥಿತಿ ಹೀಗಿರುವಾಗಲೇ ಸಿಂಗಾಪುರದಲ್ಲಿ ಕೊರೋನಾ ವೈರಸ್ ತನ್ನ ಬಾಹುಗಳನ್ನು ಚಾಚುತ್ತಿದ್ದು, ಕೇವಲ ಒಂದು ವಾರದ ಅವಧಿಯಲ್ಲಿ ಬರೋಬ್ಬರಿ 56,000 ಹೊಸ ಪ್ರಕರಣಗಳು ವರದಿಯಾಗಿವೆ. ಹೀಗಾಗಿ ಸಿಂಗಾಪುರ ಆರೋಗ್ಯ ಸಚಿವಾಲಯವು ನಾಗರಿಕರು ಮತ್ತು ಪ್ರಯಾಣಿಕರಿಗೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದೆ. ಸಚಿವಾಲಯದ ಪ್ರಕಾರ, ಡಿಸೆಂಬರ್ 3 ರಿಂದ 9 2023 ರ ವಾರದಲ್ಲಿ ಅಂದಾಜು 56,043 ಪ್ರಕರಣಗಳ ಕೋವಿಡ್–19 ಪ್ರಕರಣಗಳು ದಾಖಲಾಗಿವೆ. ಇದೇ ಹಿಂದಿನ ವಾರದಲ್ಲಿ 32,035 ಪ್ರಕರಣಗಳು ವರದಿಯಾಗಿತ್ತು ಎಂದು ಹೇಳಲಾಗಿದೆ.

ಭಾರತ ಸೇರಿ 40 ದೇಶಗಳಲ್ಲಿ ಸೋಂಕು ಪತ್ತೆ: ಹೊಸ ಎಓ.1 ರೂಪಾಂತರಿ ವೈರಸ್ ಭಾರತ ಮಾತ್ರವಲ್ಲದೇ ತವರು ಚೀನಾ ಸೇರಿದಂತೆ ಜಗತ್ತಿನ 40 ದೇಶಗಳಲ್ಲಿ ಪತ್ತೆಯಾಗಿದೆ. ಡಿಸೆಂಬರ್ 10ರ ವೇಳೆಗೆ ಜಗತ್ತಿನ ಕನಿಷ್ಠ 40 ಇತರ ದೇಶಗಳು ರೂಪಾಂತರಿ ವೈರಸ್ ಪ್ರಕರಣಗಳನ್ನು ವರದಿ ಮಾಡಿವೆ. ಅಮೆರಿಕದ 17 ರಾಜ್ಯಗಳಲ್ಲಿ ಕೋವಿಡ್–19 ಮತ್ತು ಇತರ ಫ್ಲೂ ಪ್ರಕರಣಗಳು ಹೆಚ್ಚಾಗುತ್ತಿರುವ ಕುರಿತು ಆಸ್ಪತ್ರೆಗಳು ವರದಿ ಮಾಡುತ್ತಿವೆ ಎನ್ನಲಾಗಿದೆ. ಆಸ್ಪತ್ರೆಗೆ ದಾಖಲಾದವರ ಸಂಖ್ಯೆ 23,432 ಕ್ಕೆ ಏರಿದೆ. ಸಾಧ್ಯವಾದಷ್ಟು ಬೇಗ COVID–19, ಫ್ಲೂ ಮತ್ತು RSV ಲಸಿಕೆಗಳನ್ನು ನೀಡಲು ಅವರನ್ನು ಪ್ರೋತ್ಸಾಹಿಸುತ್ತದೆ ಎಂದು ವರದಿ ಹೇಳಿದೆ.

ಅಲ್ಲದೆ ಕಳೆದ ತಿಂಗಳಲ್ಲಿ, ಎಲ್ಲಾ ವಯೋಮಾನದವರಿಗೆ, ಕೋವಿಡ್–19ಗೆ 200 ಪ್ರತಿಶತದಷ್ಟು ಮತ್ತು USನಲ್ಲಿ ಜ್ವರಕ್ಕೆ 51 ಪ್ರತಿಶತದಷ್ಟು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ABC ನ್ಯೂಸ್ ವರದಿ ಮಾಡಿದೆ. ಚೀನಾ ಮೂಲದ ರೋಗನಿರೋಧಕಶಾಸ್ತ್ರಜ್ಞರ ಪ್ರಕಾರ, ಹೆಚ್ಚಿನ ಪ್ರಕರಣಗಳು ವೈರಸ್‌ಗೆ ಯಾವುದೇ ಗಡಿಯಿಲ್ಲದ ಕಾರಣ ಎಓ.1 ರೂಪಾಂತರವನ್ನು ನಿರೀಕ್ಷಿಸಲಾಗಿದೆ. ಆದರೆ ಇದು ಸಾರ್ವಜನಿಕರ ಕಾಳಜಿಯಲ್ಲ. ಏಕೆಂದರೆ ಕೊರೊನಾ ವೈರಸ್ ಹೊಸ ರೂಪಾಂತರಗಳು ಭವಿಷ್ಯದಲ್ಲಿ ಕಾಣಿಸಿಕೊಳ್ಳಬಹುದು ಎಂದು ಹೇಳಿದ್ದಾರೆ ಎಂದು ಗ್ಲೋಬಲ್ ಟೈಮ್ಸ್ ವರದಿ ಮಾಡಿದೆ.